ಗುರುವಾರ, ಮೇ 26, 2022 | ಬೆಂಗಳೂರು | ₹ 6.00 | ಸಂಪುಟ 75| ಸಂಚಿಕೆ 145 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ವಿವಿಧ ಪದವಿಗಳಲ್ಲಿ ಚೆನ್ನಾಗಿ ಓದಿದ್ದ ವಿಷಯವನ್ನೇ ಯುಪಿಎಸ್‌ಸಿ ಮುಖ್ಯ ಪರೀಕ್ಷೆಗೆ ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡರೆ ಹೆಚ್ಚು ಅಂಕಗಳಿಸಲು ಸಹಾಯವಾಗುತ್ತದೆ.



ಹೊಸ ಪಠ್ಯಪುಸ್ತಕ ತಡೆಯಿರಿ: ಹಂಪನಾ 6

ಸೆನ್ಸೆಕ್ಸ್ 53,749 | ನಿಫ್ಟಿ 16,026 | ₹/$ 77.54

ಆಳ-ಅಗಲ
ಸಾರ್ವಜನಿಕ ಆಸ್ತಿಗೆ ಹಾನಿ ತಡೆಕಾಯ್ದೆ: ಹಲವು ಬಗೆಯ ದುರ್ಬಳಕೆ ಆರೋಪ

ಹಿಂದುಸ್ಥಾನ್ ಜಿಂಕ್‌ನಲ್ಲಿನ ಷೇರು ಮಾರಾಟಕ್ಕೆ ಒಪ್ಪಿಗೆ 10

10 ಮಂದಿ ವಶಕ್ಕೆ • ಫಲಿತಾಂಶದ ಬಳಿಕ ಹಗರಣ ಬಯಲು

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲೂ ಅಕ್ರಮ

• ಆರ್. ಜಿತೇಂದ್ರ

ರಾಮನಗರ: ಪಿಎಸ್‌ಐ ಮತ್ತು ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಅಕ್ರಮ ರಾಜ್ಯದಾದ್ಯಂತ ಕೋಲಾಹಲ ಸೃಷ್ಟಿಸಿರುವ ಬೆನ್ನಲ್ಲೇ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲೂ ಅಕ್ರಮ ನಡೆದಿರುವ ಸಂಶಯ ಬಲವಾಗುತ್ತಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಪೊಲೀಸರು ಬುಧವಾರ ರಾಮನಗರ ಜಿಲ್ಲೆ ಮಾಗಡಿಯ ವಿವಿಧ ಶಾಲೆಗಳ ಶಿಕ್ಷಕರು, ಸಿಬ್ಬಂದಿ ಮತ್ತು ಪತ್ರಕರ್ತ ಸೇರಿದಂತೆ ಹತ್ತು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಕಳೆದ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಆರೂ ವಿಷಯಗಳ ಪ್ರಶ್ನೆಪತ್ರಿಕೆಗಳು ಸೋರಿಕೆ ಆಗಿರುವ ಸಂಗತಿ ಪೊಲೀಸರ ಪ್ರಾಥಮಿಕ ತನಿಖೆಯಿಂದ ಬಹಿರಂಗಗೊಂಡಿದೆ.

ಪ್ರಕರಣದ ಪ್ರಮುಖ ಆರೋಪಿ ಎನ್ನಲಾಗಿರುವ ಹಾಗೂ ಮಾಗಡಿಯ ಕೆಂಪೇಗೌಡ ಪ್ರೌಢಶಾಲೆಯ ಗುಮಾಸ್ತ ರಂಗೇಗೌಡ ಅವರನ್ನು ಪೊಲೀಸರು ಮಂಗಳವಾರ ಸಂಜೆ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದರು. ಆತ ನೀಡಿದ ಮಾಹಿತಿ ಆಧರಿಸಿ ಉಳಿದ ಹತ್ತು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆರೋಪಿಗಳಾದ ಕೆಂಪೇಗೌಡ ಶಾಲೆಯ ಪ್ರಾಚಾರ್ಯ ಶ್ರೀನಿವಾಸ, ಹಿಂದಿ ಶಿಕ್ಷಕ ಕೃಷ್ಣಮೂರ್ತಿ, ವಿವಿಧ ಶಾಲೆಗಳ ಶಿಕ್ಷಕರಾದ ಸುಬ್ರಹ್ಮಣ್ಯ (ವಿಜ್ಞಾನ), ಶ್ರೀನಿವಾಸ (ಸಮಾಜ ವಿಜ್ಞಾನ) ಅರ್ಜುನ್ (ಕನ್ನಡ), ಅಲೀಂ ಉಲ್ಲಾ (ಹಿಂದಿ), ನಾಗರಾಜು (ಇಂಗ್ಲಿಷ್), ಲೋಕೇಶ್ ಮತ್ತು ಸ್ಥಳೀಯ ಪತ್ರಕರ್ತ ವಿಜಯ್‌ಕುಮಾರ್ ಎಂಬುವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

ಈಗಾಗಲೇ ಪೊಲೀಸರು ಆರೋಪಿಗಳೆಲ್ಲರ ಮೊಬೈಲ್ ವಶಕ್ಕೆ ಪಡೆದಿದ್ದು, ಅದರಲ್ಲಿಯ ಮಾಹಿತಿ ಜಾಲಾಡುತ್ತಿದ್ದಾರೆ. ಪರೀಕ್ಷಾ ಕೇಂದ್ರದ ಸಿಸಿಟಿವಿ ದೃಶ್ಯಾವಳಿಗಳನ್ನೂ ವಶಕ್ಕೆ ನೀಡುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಆರೋಪಿಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ವಾಟ್ಸ್‌ಆ್ಯಪ್‌ನಲ್ಲಿ ಪ್ರಶ್ನೆಪತ್ರಿಕೆ: ಮಾಗಡಿಯ ರಂಗನಾಥಸ್ವಾಮಿ ಪ್ರೌಢ ಶಾಲೆಯಲ್ಲಿ ಪರೀಕ್ಷಾ ಕೇಂದ್ರ ಇತ್ತು. ಅಲ್ಲಿನ ಹಿಂದಿ ಶಿಕ್ಷಕ ಕೃಷ್ಣಮೂರ್ತಿ ಪರೀಕ್ಷೆ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದರು. ಅವರು ಪ್ರತಿ ಪರೀಕ್ಷೆಯ ಆರಂಭದ 15 ನಿಮಿಷಕ್ಕೆ ಮುನ್ನವೇ ಮೊಬೈಲ್‌ನಲ್ಲಿ ಪ್ರಶ್ನೆಪ-ತ್ರಿಕೆಯ ಫೋಟೊ ತೆಗೆದು ಅದನ್ನು ಕೆಂಪೇಗೌಡ ಪ್ರೌಢಶಾಲೆಯ ಕ್ಲರ್ಕ್ ರಂಗೇಗೌಡ ಅವರಿಗೆ ರವಾನಿಸುತ್ತಿದ್ದ-ರು. ರಂಗೇಗೌಡ ಆಯಾ ಪರೀಕ್ಷೆಯ ವಿಷಯ ತಜ್ಞರನ್ನು ಕೂರಿಸಿಕೊಂಡು ಅವರಿಂದ ಅದಕ್ಕೆ ಉತ್ತರ ಬರೆಯಿಸಿ ಅದನ್ನು ಮತ್ತೆ ಪರೀಕ್ಷಾ ಕೇಂದ್ರಕ್ಕೆ ರವಾ-ನಿಸುತ್ತಿದ್ದರು. ಆ ಉತ್ತರವನ್ನು ಇಡೀ ಪರೀಕ್ಷಾ ಕೇಂದ್ರದ ಮಕ್ಕಳಿಗೆ ಹೇಳಿ-ಕೊಡುತ್ತಿದ್ದರು ಎಂದು ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಸಂತೋಷ್ ಬಾಬು ಮಾಹಿತಿ ನೀಡಿದರು.

‘ಮಾಗಡಿಯ ಇತರ ಪರೀಕ್ಷಾ ಕೇಂದ್ರಗಳಲ್ಲಿಯೂ ಇದೇ ರೀತಿ ಅಕ್ರಮ ನಡೆದಿರುವ ಸಾಧ್ಯತೆಗಳ ಬಗ್ಗೆಯೂ ತನಿಖೆ ಕೈಗೊಂಡಿದ್ದೇವೆ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಫೇಲಾಗಬಾರದು ಎಂಬ ಕಾರಣಕ್ಕೆ ಹೀಗೆ ಮಾಡಿದೆವು ಎಂದು ಆರೋಪಿಗಳು ಹೇಳಿದ್ದಾರೆ. ಹಣ ಪಡೆದು ಉತ್ತರ ಹೇಳಿಕೊಡಲಾಗಿದೆಯೇ ಎಂಬ ಕುರಿತು ತನಿಖೆ ನಡೆಸಿದ್ದೇವೆ’ ಎಂದರು.

ಮಾಗಡಿ: ಅಂಕಗಳಿಕೆ ದಿಢೀರ್ ಏರಿಕೆ

ಪ್ರಕರಣದ ಪ್ರಮುಖ ಆರೋಪಿ ರಂಗೇಗೌಡ ಎಂಬುವರ ಪುತ್ರಿ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದು, ಉತ್ತಮ ಅಂಕ ಪಡೆದಿದ್ದಾಳೆ. ಪರೀಕ್ಷೆ ವೇಳೆ ಮಗಳಿಗೂ ಸಹಾಯ ಮಾಡಿದ್ದಾಗಿ ಆರೋಪಿ ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾರೆ.

ಪರೀಕ್ಷೆ ಅಕ್ರಮ ನಡೆದಿರುವ ಕೆಂಪೇಗೌಡ ಶಾಲೆ ಶೇ 100ರಷ್ಟು ಫಲಿತಾಂಶ ಪಡೆದಿದೆ. ಒಟ್ಟು 65 ವಿದ್ಯಾರ್ಥಿಗಳ ಪೈಕಿ 54 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ ಉಳಿದವರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇಬ್ಬರು ವಿದ್ಯಾರ್ಥಿಗಳು 625ಕ್ಕೆ 624 ಅಂಕ ಪಡೆದಿದ್ದಾರೆ.

ಮಾಗಡಿಯ ಇನ್ನೂ ನಾಲ್ಕಾರು ಶಾಲೆಗಳು ಇದೇ ಮಾದರಿಯ ಫಲಿತಾಂಶ ದಾಖಲಿಸಿದ್ದು, ಅಂಕ ಗಳಿಕೆ ಪ್ರಮಾಣದಲ್ಲಿಯೂ ಸಾಕಷ್ಟು ಏರಿಕೆ ಕಂಡುಬಂದಿದೆ. ಈ ಎಲ್ಲದರ ಬಗ್ಗೆ ವಿವರಣೆ ನೀಡುವಂತೆ ಪೊಲೀಸರು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

> **10 ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದೇವೆ. ಎಲ್ಲ ಪರೀಕ್ಷೆಗಳಲ್ಲೂ ಅಕ್ರಮ ನಡೆದಿರುವುದು ಗೊತ್ತಾಗಿದ್ದು, ಶಿಕ್ಷಣ ಇಲಾಖೆಗೂ ಮಾಹಿತಿ ನೀಡಿದ್ದೇವೆ**
> **ಕೆ. ಸಂತೋಷ್ ಬಾಬು,**
> ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಇನ್ನಷ್ಟು ಸುದ್ದಿಗಳು 6

ಕಾಂಗ್ರೆಸ್ ತೊರೆದ ಕಪಿಲ್ ಸಿಬಲ್

ಲಖನೌ/ನವದೆಹಲಿ: ಕಪಿಲ್ ಸಿಬಲ್ ಅವರು ಉತ್ತರ ಪ್ರದೇಶದಿಂದ ಬುಧವಾರ ರಾಜ್ಯಸಭೆ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಅಖಿಲೇಶ್ ಯಾದವ್ ಅವರ ಸಮಾಜವಾದಿ ಪಕ್ಷವು (ಎಸ್‌ಪಿ) ಅವರಿಗೆ ಬೆಂಬಲ ಸೂಚಿಸಿದೆ.

5



ಭಯೋತ್ಪಾದನಾ ಕೃತ್ಯಗಳಿಗೆ ಹಣಕಾಸು ಒದಗಿಸಿದ ಪ್ರಕರಣ

ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಯೋತ್ಪಾದನಾ ಕೃತ್ಯಗಳಿಗೆ ಹಣಕಾಸು ಒದಗಿಸಿದ ಪ್ರಕರಣದಲ್ಲಿ ಕಾಶ್ಮೀರದ ಪ್ರತ್ಯೇಕತಾವಾದಿ ಮುಖಂಡ ಹಾಗೂ ನಿಷೇಧಿತ ಜೆಕೆಎಲ್‌ಎಫ್ ಮುಖ್ಯಸ್ಥ ಯಾಸಿನ್ ಮಲಿಕ್‌ಗೆ ದೆಹಲಿ ಕೋರ್ಟ್ ಬುಧವಾರ ಜೀವಾವಧಿ ಶಿಕ್ಷೆ ವಿಧಿಸಿದೆ. ‘ಜಮ್ಮು ಮತ್ತು ಕಾಶ್ಮೀರವನ್ನು ಒತ್ತಾಯಪೂರ್ವಕವಾಗಿ ಬೇರ್ಪಡಿಸುವ ಉದ್ದೇಶ ಹೊಂದಿದ್ದ ಅಪರಾಧವು ಗಂಭೀರ ಸ್ವರೂಪದಿಂದ ಕೂಡಿದೆ’ ಎಂದು ಕೋರ್ಟ್ ಹೇಳಿದೆ.

ಯಾಸಿನ್ ಮಲಿಕ್‌ಗೆ ಮರಣ ದಂಡನೆ ವಿಧಿಸಬೇಕು ಎಂದು ವಿಚಾರಣೆ ವೇಳೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಆಗ್ರಹಿಸಿತ್ತು.

‘ವಿದೇಶಿ ಶಕ್ತಿಗಳು ಹಾಗೂ ಘೋಷಿತ ಭಯೋತ್ಪಾದಕರ ಸಹಕಾರದಿಂದ ಯಾಸಿನ್ ಮಲಿಕ್ ಎಸಗಿರುವ ಕೃತ್ಯಗಳು ಗಂಭೀರ ಸ್ವರೂಪ-



ದ್ದಾಗಿವೆ’ ಎಂದು ಎನ್‌ಐಎನ ವಿಶೇಷ ನ್ಯಾಯಾಧೀಶ ಪರ್ವೀನ್ ಸಿಂಗ್ ಅವರು ಉಲ್ಲೇಖಿಸಿದರು. ‘ಶಾಂತಿಯುತ ರಾಜಕೀಯ ಚಳವಳಿಯ ನೆಪದಲ್ಲಿ ಅಪರಾಧ ನಡೆದಿರುವ ಕಾರಣ, ಪ್ರಕರಣದ ಗಂಭೀರತೆ ಹೆಚ್ಚಾಗಿದೆ’ ಎಂದು ಅವರು ಹೇಳಿದರು.

ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಸೇರಿ ಹಲವು ಕಾಯ್ದೆಗಳ ಅಡಿ ದಾಖಲಾಗಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯವು ಪ್ರತ್ಯೇಕ ಶಿಕ್ಷೆಯನ್ನು ವಿಧಿಸಿದೆ. ಜತೆಗೆ ಪ್ರತ್ಯೇಕವಾಗಿ ದಂಡವನ್ನೂ ವಿಧಿಸಿದೆ. ಆದರೆ ಎಲ್ಲಾ ಶಿಕ್ಷೆಗಳು ಏಕಕಾಲದಲ್ಲಿ ಜಾರಿಯಾಗಬೇಕು ಎಂದು ನ್ಯಾಯಾಲಯವು ಹೇಳಿದೆ.

ಭಯೋತ್ಪಾದನೆಗೆ ಹಣಕಾಸು ನೆರವು ನೀಡುವುದು ಗಂಭೀರ ಅಪರಾಧವಾಗಿದ್ದು, ಅದಕ್ಕೆ ಗರಿಷ್ಠ ಪ್ರಮಾಣದ ಶಿಕ್ಷೆಯಾಗಬೇಕು ಎಂದು ಕೋರ್ಟ್ ಅಭಿಪ್ರಾಯಪಟ್ಟಿತು. ಮೇ 19ರಂದು ಮಲಿಕ್ ದೋಷಿ ಎಂದು ಪ್ರಕಟಿಸಿದ್ದ ಕೋರ್ಟ್, ತನ್ನ ವಿರುದ್ಧದ ಆರೋಪವನ್ನು ಒಪ್ಪಿಕೊಳ್ಳುವಂತೆ ಮಲಿಕ್‌ಗೆ ಎರಡು ಬಾರಿ ಅವಕಾಶ ನೀಡಿತ್ತು. ಶಿಕ್ಷೆ ಪ್ರಶ್ನಿಸಿ ದೆಹಲಿ ಹೈಕೋರ್ಟ್ ಮೊರೆ ಹೋಗುವ ಅವಕಾಶ ಮಲಿಕ್‌ಗೆ ಇದೆ.

1994ರಲ್ಲಿ ಶಸ್ತ್ರಾಸ್ತ್ರಗಳನ್ನು ತ್ಯಜಿಸಿದ ಬಳಿಕ ಗಾಂಧೀಜಿ ಅವರ ತತ್ವಾದರ್ಶಗಳನ್ನು ಪಾಲಿಸುತ್ತಿರುವುದಾಗಿ ಮಲಿಕ್ ಹೇಳಿದ್ದಾನೆ.

5ನೇ ಪುಟ ನೋಡಿ

ಟೆಕ್ಸಾಸ್: ಗುಂಡಿಕ್ಕಿ 19 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರ ಹತ್ಯೆ

ಉವಾಲ್ಡೆ, ಅಮೆರಿಕ (ಎಎಫ್‌ಪಿ): ಬಂದೂಕುಧಾರಿ ಯುವಕನೊಬ್ಬ 19 ವಿದ್ಯಾರ್ಥಿಗಳು ಮತ್ತು ಇಬ್ಬರು ಶಿಕ್ಷಕರನ್ನು ಗುಂಡು ಹಾರಿಸಿ ಹತ್ಯೆ ಮಾಡಿದ ಭಯಾನಕ ಘಟನೆ ಟೆಕ್ಸಾಸ್‌ನ ರಾಬ್ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ನಡೆದಿದೆ.

ಮೃತ ಮಕ್ಕಳೆಲ್ಲರೂ 7ರಿಂದ 10 ವರ್ಷದೊಳಗಿನವರು. ಎಲ್ಲರೂ ಒಂದೇ ಕೊಠಡಿಯಲ್ಲಿದ್ದರು. 12ಕ್ಕೂ ಹೆಚ್ಚು ಮಕ್ಕಳು ಗಾಯಗೊಂಡಿದ್ದಾರೆ. ಹಂತಕನನ್ನು ಭದ್ರತಾ ಸಿಬ್ಬಂದಿ ಗುಂಡಿಕ್ಕಿ ಕೊಂದಿದ್ದಾರೆ.

ಹದಿನೆಂಟು ವರ್ಷ ವಯಸ್ಸಿನ ಹಂತಕ ಸ್ಥಳೀಯ ನಿವಾಸಿ ಮತ್ತು ಅಮೆರಿಕದ ಪ್ರಜೆ ಸಾಲ್ವಡಾರ್ ರಾಮೋಸ್ ಎಂದು ಗುರುತಿಸಿರುವುದಾಗಿ ಟೆಕ್ಸಾಸ್ ಗವರ್ನರ್ ಗ್ರೆಗ್ ಅಬಾಟ್ ಹೇಳಿದ್ದಾರೆ. ಮೆಕ್ಸಿಕನ್ ಗಡಿಗೆ ಸಮೀಪದ ಉವಾಲ್ಡೆಯ ಈ ಶಾಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಮತ್ತು ಸ್ಪ್ಯಾನಿಸ್ ಭಾಷಿಗ 500ಕ್ಕೂ ಹೆಚ್ಚಿನ ಮಕ್ಕಳು ಶಿಕ್ಷಣ ಪಡೆಯುತ್ತಿದ್ದರು.


ಘಟನೆ ಖಂಡಿಸಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್, ದೇಶದಲ್ಲಿ ಶೀಘ್ರವೇ ಬಂದೂಕು ಕಾನೂನು ಜಾರಿಗೊಳಿಸುವ ವಾಗ್ದಾನ ಮಾಡಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ







Electronic City | GT World Mall | Hosur | Kanakapura Road | Malleswaram

ಅಶ್ವತ್ಥನಾರಾಯಣ, ಶ್ಯಾಮಸುಂದರ್ ಸೇರಿ 53 ವಕೀಲರಿಗೆ ಪದೋನ್ನತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ವಕೀಲರಾದ ಎಸ್.ಎನ್. ಅಶ್ವತ್ಥನಾರಾಯಣ ಮತ್ತು ಎಂ.ಎಸ್. ಶ್ಯಾಮ್ ಸುಂದರ್ ಅವರಿಗೆ ಹಿರಿಯ ವಕೀಲರಾಗಿ ಪದೋನ್ನತಿ (ಡೆಸಿಗ್ನೇಟೆಡ್ ಸೀನಿಯರ್ ಕೌನ್ಸೆಲ್) ನೀಡಿ ಆದೇಶಿಸಲಾಗಿದೆ.

ಈ ಕುರಿತಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಟಿ.ಜಿ. ಶಿವಶಂಕರೇ ಗೌಡ ಇದೇ 24ರಂದು ಅಧಿಸೂಚನೆ ಹೊರಡಿಸಿದ್ದಾರೆ. ಈ ಹಿಂದೆ 2021ರ ಡಿಸೆಂಬರ್ 12 ಮತ್ತು 14ರಂದು ಪ್ರತ್ಯೇಕ ಅಧಿಸೂಚನೆ ಹೊರಡಿಸಿದ್ದ ಹೈಕೋರ್ಟ್, ಒಟ್ಟು 53 ವಕೀಲರಿಗೆ ಹಿರಿಯ ವಕೀಲರಾಗಿ ಪದೋನ್ನತಿ ನೀಡಿತ್ತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ, ಪಶ್ಚಿಮ ವಲಯ, ಬೃಹತ್ ಬೆಂಗಳೂರು ಮಾಹನಗರ ಪಾಲಿಕೆ, 8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

ಸಂಖ್ಯೆ: ಹಿಸನಿತೋ(ಪಶ್ಚಿಮ)/ಟೆಂಡರ್/ಪಿಆರ್/01/2022–23 ದಿನಾಂಕ: 25.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಪದ್ಧತಿ)

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ಪಶ್ಚಿಮ) ಇವರು (ಈ ದಾಖಲಾತಿಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ನುರಿತ ವ್ಯಕ್ತಿಗಳು /ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಪಶ್ಚಿಮ ವಲಯ ಉದ್ಯಾನವನಗಳಿಗೆ ಭದ್ರತಾ ಸಿಬ್ಬಂದಿ ಸೇವೆಗಳನ್ನು ಒದಗಿಸುವುದು, ಶೌಚಾಲಯ ನಿರ್ವಹಣೆ ಮತ್ತು ಮೀಡಿಯನ್ಸ್‌ಗಳಿಗೆ ನೀರು ಸಿಂಪಡಿಸುವ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ	ಅಂದಾಜು ಮೊತ್ತ (₹.ಗಳಲ್ಲಿ)	ಇಎಂಡಿ (₹.ಗಳಲ್ಲಿ)
1	ವಾರ್ಡ್ ಸಂಖ್ಯೆ–45ರ ಯಶವಂತಪುರ ಮೇಲ್ಸೇತುವೆ ಅಡಿಯಲ್ಲಿ ಮತ್ತು ಅಂಬೇಡ್ಕರ್ ಪ್ರತಿಮೆ ಉದ್ಯಾನವನಕ್ಕೆ ಭದ್ರತೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ)	635000/-	15875/-
2	ವಾರ್ಡ್ ಸಂಖ್ಯೆ–104 ಗೋವಿಂದರಾಜನಗರ ಕ್ಷೇತ್ರದಲ್ಲಿ ಉದ್ಯಾನವನಗಳಿಗೆ ಭದ್ರತೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ)	9934918/-	198698/-
3	ವಾರ್ಡ್ ಸಂಖ್ಯೆ–128ರ ಕನಕಭವನ ಉದ್ಯಾನವನಕ್ಕೆ ಭದ್ರತೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ)	1270000/-	31750/-
4	ವಾರ್ಡ್ ಸಂಖ್ಯೆ–126ರ ಸಂಗೊಳ್ಳಿ ರಾಯಣ್ಣ ಉದ್ಯಾನವನಕ್ಕೆ ಭದ್ರತೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ)	1270000/-	31750/-
5	ವಾರ್ಡ್ ಸಂಖ್ಯೆ–106ರ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸ್ವಚ್ಛತೆ ಮತ್ತು ನಿರ್ವಹಣೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ)	2235000/-	55875/-
6	ವಾರ್ಡ್ ಸಂಖ್ಯೆ–65, ಮಲ್ಲೇಶ್ವರಂ ಕ್ಷೇತ್ರದಲ್ಲಿ ಉದ್ಯಾನವನಗಳಿಗೆ ಭದ್ರತೆ ಸೇವೆಗಳನ್ನು ಒದಗಿಸುವುದು. (2ನೇ ಕರೆ) (ಸಾಮಾನ್ಯರಿಗೆ)	6341000/-	158525/-
7	ವಾರ್ಡ್ ಸಂಖ್ಯೆ–94, ಗಾಂಧಿನಗರ ಕ್ಷೇತ್ರದಲ್ಲಿ ಉದ್ಯಾನವನಗಳಿಗೆ ಭದ್ರತೆ ಸೇವೆಗಳನ್ನು ಒದಗಿಸುವುದು. (2ನೇ ಕರೆ) (ಸಾಮಾನ್ಯರಿಗೆ)	6130000/-	153250/-
8	ವಾರ್ಡ್ ಸಂಖ್ಯೆ–68, ಮಹಾಲಕ್ಷ್ಮಿಪುರಂ ಕ್ಷೇತ್ರದಲ್ಲಿ ಉದ್ಯಾನವನಗಳು ಮತ್ತು ಮೀಡಿಯನ್‌ಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. (3ನೇ ಕರೆ) (ಸಾಮಾನ್ಯರಿಗೆ)	1486000/-	37150/-

ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ: **25.05.2022.** (2) ಟೆಂಡರ್ ದಾಖಲೆಗಳನ್ನು ದಿನಾಂಕ: **04.06.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **10.06.2022.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **13.06.2022 (11:00 ಗಂಟೆಯಿಂದ)** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **20.06.2022 (ಸಾಧ್ಯವಾದಲ್ಲಿ)** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಹಿರಿಯ ಸಹಾಯಕ ನಿರ್ದೇಶಕರು, (ತೋಟಗಾರಿಕೆ–ಪಶ್ಚಿಮ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

B / ARBI / Regn. 2557 / 72-73 Dt: 28th March 1973

ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ.)

ನಂ. 35, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು – 560 004.

ಪತ್ರಿಕಾ ಪ್ರಕಟಣೆ

ಮಾನ್ಯ ಸದಸ್ಯರೇ,

ಸಂಘದ 4ನೇ ಹಂತದ ಬಡಾವಣೆಯ ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಡಾವಣೆಯಲ್ಲಿ ಸಂಘದ ಸದಸ್ಯರುಗಳಿಗೆ ನಿವೇಶನ ಹಂಚಿಕೆಯಾಗಿ ತಮ್ಮ ಹೆಸರಿಗೆ ಕ್ರಯ ಪತ್ರದ ಮೂಲಕ ನೋಂದಣಿ ಮಾಡಿರುವ ಮೂಲ ಪತ್ರದ ಪ್ರತಿಯನ್ನು ಹಾಜರುಪಡಿಸಿ, ಅದರ ಜೆರಾಕ್ಸ್ ಪ್ರತಿ ಹಾಗೂ ಆಧಾರ್ ಕಾರ್ಡ್ ಪ್ರತಿಯನ್ನು ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.30 ಘಂಟೆಯೊಳಗೆ (ಸೋಮವಾರದಿಂದ ಶುಕ್ರವಾರದವರೆಗೆ) ಸಂಘದ ಕಾರ್ಯಾಲಯಕ್ಕೆ ಸಲ್ಲಿಸಿ, ಕಾರ್ಯದರ್ಶಿಯವರಿಂದ ಸ್ವೀಕೃತಿ ಪಡೆಯಲು ಕೋರಿದೆ.

ಇಂತಿ ತಮ್ಮ ವಿಶ್ವಾಸಿ
Sd/–
ಕಾರ್ಯದರ್ಶಿ
(ಆಡಳಿತಾಧಿಕಾರಿಗಳ ಆದೇಶದ ಮೇರೆಗೆ)

ದಿನಾಂಕ : 24.05.2021
ಸ್ಥಳ : ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ ವಿಭಾಗ, ಬೃಬೆಂಮಪಾ ಕಛೇರಿ ಕಟ್ಟಡ, ಕ್ವೀನ್ಸ್ ರಸ್ತೆ, ಬೆಂಗಳೂರು.

ಸಂಖ್ಯೆ: ಕಾಅ/ಶಿನ/ಟೆಂಡರ್/05/2022–23 ದಿನಾಂಕ: 24–05–2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ಆಯುಕ್ತರು, ಬೃಬೆಂಮಪಾ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಶಿವಾಜಿನಗರ ವಿಭಾಗಕ್ಕೆ ಡಿಪಿಆರ್ ಸಿದ್ಧಪಡಿಸಲು ಸುಪ್ರಸಿದ್ಧ ಸಲಹೆಗಾರರಿಂದ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಸಲಹಾ ಸೇವೆಗಳ ಗರಿಷ್ಠ ಶುಲ್ಕಗಳು (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ವಾರ್ಡ್ ಸಂಖ್ಯೆ. 90 ರಲ್ಲಿನ ಹಲಸೂರಿನಲ್ಲಿ ಫುಟ್‌ಬಾಲ್ ಸ್ಟೇಡಿಯಂ ನಿರ್ಮಾಣಕ್ಕೆ, ಕನ್ವೆನ್ಷನ್ ಹಾಲ್ ನಿರ್ಮಾಣಕ್ಕೆ, ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಮತ್ತು ವಾರ್ಡ್ ಸಂಖ್ಯೆ. 92 ರಲ್ಲಿನ ಶಿವಾಜಿನಗರದಲ್ಲಿ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣ (ಗ್ರಂಥಾಲಯ, ಕಂಪ್ಯೂಟರ್ ತರಬೇತಿ)ಕ್ಕಾಗಿ ವಿವರವಾದ ಯೋಜನಾ ವರದಿ. **(ಪ್ಯಾಕೇಜ್ ಸಂಖ್ಯೆ.01)** ಯೋಜನಾ ವೆಚ್ಚ: **ರೂ. 1400.00 ಲಕ್ಷಗಳು**	14,00,000.00	35,000.00
2	ವಾರ್ಡ್ ಸಂಖ್ಯೆ. 92 ರಲ್ಲಿನ ನೆಹರೂಪುರಂನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕೇಂದ್ರ ನಿರ್ಮಾಣಕ್ಕೆ, ಹೆಚ್.ಕೆ.ಪಿ ರಸ್ತೆಯಲ್ಲಿ ಕನ್ವೆನ್ಷನ್ ಹಾಲ್ ಮತ್ತು ಫಿಟ್ನೆಸ್ ಸೆಂಟರ್ ನಿರ್ಮಾಣಕ್ಕೆ, ಬಹು ಉದ್ದೇಶದ ಕ್ರೀಡಾ ಕೇಂದ್ರ ನಿರ್ಮಾಣಕ್ಕೆ, ವಾರ್ಡ್ ಸಂಖ್ಯೆ. 63 ರಲ್ಲಿನ ಜಯಮಹಲ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕೇಂದ್ರ ನಿರ್ಮಾಣಕ್ಕೆ, ವಾರ್ಡ್ ಸಂಖ್ಯೆ. 110 ರಲ್ಲಿನ ಎಸ್.ಆರ್. ನಗರ ಜಿಮ್‌ಗೆ ಜಿಮ್ ಸಲಕರಣೆ ಒದಗಿಸುವಿಕೆಗೆ ವಿವರವಾದ ಯೋಜನಾ ವರದಿ. **(ಪ್ಯಾಕೇಜ್ ಸಂಖ್ಯೆ.02)** ಯೋಜನಾ ವೆಚ್ಚ: **ರೂ. 1600.00 ಲಕ್ಷಗಳು**	16,00,000.00	40,000.00
3	ವಾರ್ಡ್ ಸಂಖ್ಯೆ. 90 ಮತ್ತು 91 ರಲ್ಲಿನ ಕೋದಂಡರಾಮ ಲೇಔಟ್, ಕಾರ್ಟ್ ಸ್ಟ್ರೀಟ್, ತೊಪ್ಪೆ ಮೊದಲಿಯಾರ್ ಸ್ಟ್ರೀಟ್, ಅಶೂರ್ ಖಾನಾ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಅಡ್ಡರಸ್ತೆಗಳು, ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿಗೆ ವಿವರವಾದ ಯೋಜನಾ ವರದಿ. **(ಪ್ಯಾಕೇಜ್ ಸಂಖ್ಯೆ.03)** ಯೋಜನಾ ವೆಚ್ಚ: **ರೂ. 1000.00 ಲಕ್ಷಗಳು**	10,00,000.00	25,000.00
4	ವಾರ್ಡ್ ಸಂಖ್ಯೆ. 92 ಮತ್ತು 93 ರಲ್ಲಿನ ಅಡ್ಡರಸ್ತೆಗಳು ಹಾಗೂ ಪಾದಚಾರಿ ಮಾರ್ಗ, ಶಿವಾಜಿ ರಸ್ತೆ ಅಡ್ಡರಸ್ತೆ, ಮಾಧವನಗರ, ಬ್ರಾಡ್‌ವೇ ಅಡ್ಡರಸ್ತೆ, ಹೊಸ ಮಾರುಕಟ್ಟೆ, ಒಬೇದುಲ್ಲ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶದ ಸಮಗ್ರ ಅಭಿವೃದ್ಧಿ. **(ಪ್ಯಾಕೇಜ್ ಸಂಖ್ಯೆ.04)** ಯೋಜನಾ ವೆಚ್ಚ: **ರೂ. 1000.00 ಲಕ್ಷಗಳು**	10,00,000.00	25,000.00
5	ವಾರ್ಡ್ ಸಂಖ್ಯೆ. 63 ಮತ್ತು 110 ರಲ್ಲಿನ ಜಯಮಹಲ್ ಗಂಗಾ ಭವಾನಿ ಎಕ್ಸ್‌ಟೆನ್‌ಶನ್, ಮಾರಪ್ಪ ಗಾರ್ಡನ್, ಬೆನ್ಸನ್ ಟೌನ್, ಕರಗಪ್ಪ ಗಾರ್ಡನ್, ವೀರಪಿಳ್ಳೈ ಸ್ಟ್ರೀಟ್ ಮತ್ತು ಎಸ್.ಆರ್. ನಗರ ಸುತ್ತಮುತ್ತಲ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿಗೆ ಮತ್ತು ವಾರ್ಡ್ ಸಂಖ್ಯೆ. 63 ರಲ್ಲಿ ಉದ್ಯಾನಕ್ಕೆ ಅಭಿವೃದ್ಧಿಗಳಿಗಾಗಿ ವಿವರವಾದ ಯೋಜನಾ ವರದಿ. **(ಪ್ಯಾಕೇಜ್ ಸಂಖ್ಯೆ.05)** ಯೋಜನಾ ವೆಚ್ಚ: **ರೂ. 1000.00 ಲಕ್ಷಗಳು**	10,00,000.00	25,000.00
6	ವಾರ್ಡ್ ಸಂಖ್ಯೆ. 62, 63, 93, 110, 90, 91 ಮತ್ತು 92 ರಲ್ಲಿ ಕುಡಿಯುವ ನೀರು ವ್ಯವಸ್ಥೆಗೆ ಸುಧಾರಣೆಗಾಗಿ ವಿವರವಾದ ಯೋಜನಾ ವರದಿ. **(ಪ್ಯಾಕೇಜ್ ಸಂಖ್ಯೆ.06)** ಯೋಜನಾ ವೆಚ್ಚ: **ರೂ. 500.00 ಲಕ್ಷಗಳು**	5,00,000.00	12,500.00

ಟೆಂಡರ್ ವೇಳಾಪಟ್ಟಿ: 1) ಪ್ರಸ್ತಾವನೆಗೆ ಮನವಿ (ಆರ್‌ಎಫ್‌ಪಿ) ದಸ್ತಾವೇಜನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಿಂದ ದಿನಾಂಕ: **26–05–2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಭರ್ತಿ ಮಾಡಿದ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02–06–2022ರಂದು 16.00 ಗಂಟೆಗೆ ಮುಂಚಿತವಾಗಿ.** 3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **03–06–2022ರಂದು 12.00 ಗಂಟೆ ನಂತರ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುನೀತ್ ಸ್ಮರಣಾರ್ಥ ಲಲಿತಕಲಾ ಪ್ರದರ್ಶನ 28ಕ್ಕೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಸಂಜಯನಗರದ ಮಹಾನಸಾ ಆಯುರ್ವೇದ ಸಂಸ್ಥೆಯು ಲಲಿತಕಲಾ ಪ್ರದರ್ಶನ ಏರ್ಪಡಿಸಿದೆ.

ಇದೇ 28ರಂದು ಸಂಜೆ 4ರಿಂದ 6 ರವರೆಗೆ ನಡೆಯಲಿರುವ ಈ ಪ್ರದರ್ಶನದಲ್ಲಿ ಝೂಮ್ ಅಥವಾ ಸಂಜಯನಗರದ ಮಹಾನಸ ಆಯುರ್ವೇದ ಕೇಂದ್ರದಲ್ಲಿ ಆಫ್‌ಲೈನ್ ಮೂಲಕ ಭಾಗವಹಿಸಬಹುದು.

ಪೇಂಟಿಂಗ್, ಚಿತ್ರಕಲೆ, ಪೆನ್ಸಿಲ್ ಸ್ಕೆಚ್, ಕೊಲಾಜ್, ಆವೆಮಣ್ಣಿನ ಕಲಾಕೃತಿಗಳು ಸೇರಿ ಯಾವುದೇ ಪ್ರಕಾರದ ಲಲಿತಕಲಾ ಪ್ರದರ್ಶನಕ್ಕೆ ಅವಕಾಶ ಇದೆ. ವಯಸ್ಸಿನ ಮಿತಿ ಇಲ್ಲ. ₹150 ನೋಂದಣಿ ಶುಲ್ಕವನ್ನು ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಕ್ಯಾನ್ಸರ್ ಪೀಡಿತ ವ್ಯಕ್ತಿಗಳ ಚಿಕಿತ್ಸೆಗೆ ದೇಣಿಗೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 9620580101

ಕಸಾಪ: ಜೂನ್‌ನಲ್ಲಿ ಕಲಾವಿದರ ಆಯ್ಕೆ

ಬೆಂಗಳೂರು: 'ಶಿಶುನಾಳ ಶರೀಫರ ತತ್ತ್ವ ಪದಗಳ ಆಧರಿತ ತತ್ತ್ವರಸಾಯನ ಕಾರ್ಯಕ್ರಮ ಜು.3 ರಂದು ನಡೆಯಲಿದೆ. ಜೂ.18 ಮತ್ತು 19 ರಂದು ಕಲಾವಿದರ ಆಯ್ಕೆ ಪ್ರಕ್ರಿಯೆ ನಡೆಯಲಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಈ ಕಾರ್ಯಕ್ರಮವನ್ನು ಆಯೋಜಿಸಲು ಪರಿಷತ್ತಿನೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತ ಶಿಶುನಾಳ ಶರೀಫರ ಹಾಗೂ ಕಳಸದ ಗುರು ಗೋವಿಂದ ಭಟ್ಟರ ಪ್ರತಿಷ್ಠಾನ, ಶಾರದ ವಿದ್ಯಾಪೀಠ ಕೈಜೋಡಿಸಿವೆ. ಜೂ.18 ರಂದು ತತ್ತ್ವಪದಗಳ ಗಾಯಕರಿಗೆ, ಜೂ.19 ರಂದು ನೃತ್ಯ ತಂಡದವರಿಗೆ ಬೆಳಿಗ್ಗೆ 9 ಗಂಟೆಯಿಂದ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತದೆ' ಎಂದು ಹೇಳಿದ್ದಾರೆ.

'ಆಯ್ಕೆ ಪ್ರಕ್ರಿಯೆ ಪರಿಷತ್ತಿನ ಅಕ್ಕ ಮಹಾದೇವಿ ಸಭಾಂಗಣದಲ್ಲಿ ನಡೆಯಲಿದೆ. ಆಸಕ್ತ ಸಂಗೀತ ಕಲಾವಿದರು, ನೃತ್ಯ ತಂಡದವರು ಅರ್ಜಿಯೊಂದಿಗೆ ಹಾಜರಿರಬೇಕು' ಎಂದು ತಿಳಿಸಿದ್ದಾರೆ.


ಸುದ್ದಿ 2 ನಿಮಿಷ

ಮೀಸಲಾತಿ, ಸಾಮಾಜಿಕ ನ್ಯಾಯಕ್ಕೆ ತೊಂದರೆ ಆಗದಿರಲಿ: ಡಿಕೆಶಿ

ಬೆಂಗಳೂರು: 'ನಾವು ಚುನಾವಣೆ ಬೇಡ ಎನ್ನುವುದಿಲ್ಲ. ಆದರೆ, ಮೀಸಲಾತಿ ಹಾಗೂ ಸಾಮಾಜಿಕ ನ್ಯಾಯಕ್ಕೆ ತೊಂದರೆ ಆಗಬಾರದು. ಇದು ಸರ್ಕಾರದ ಜವಾಬ್ದಾರಿ. ನ್ಯಾಯಾಲಯ ಚುನಾವಣೆ ನಡೆಸಿ ಎಂದು ಹೇಳಿದೆ. ಆದರೆ, ಸಾಮಾಜಿಕ ನ್ಯಾಯ ಕಡೆಗಣಿಸಿ ಎಂದು ಹೇಳಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಚಾರವಾಗಿ ಹೈಕೋರ್ಟ್ ನೀಡಿರುವ ನಿರ್ದೇಶನದ ಕುರಿತು ಬುಧವಾರ ಇಲ್ಲಿ ಈ ಪ್ರತಿಕ್ರಿಯೆ ನೀಡಿದರು.

ಪಠ್ಯಕ್ರಮ ಪರಿಷ್ಕರಣೆ ಗೊಂದಲ ಕುರಿತು ಮಾತನಾಡಿ, 'ರಾಜಕೀಯ ಕಾರ್ಯಸೂಚಿಯನ್ನು ಪಠ್ಯಕ್ರಮದಲ್ಲಿ ತರಲು ಸರ್ಕಾರ ಪ್ರಯತ್ನಿಸುತ್ತಿದೆ. ಇತಿಹಾಸ ತಿರುಚಿ, ಮುಂದಿನ ಪೀಳಿಗೆಗೆ ಹೊಸ ಇತಿಹಾಸ ಸೃಷ್ಟಿಸುತ್ತಿದೆ. ಇತಿಹಾಸವನ್ನು ಯಾರೂ ಬದಲಿಸಲು ಸಾಧ್ಯವಿಲ್ಲ. ಎಲ್ಲ ಪ್ರಯತ್ನಗಳು ಕೆಲಕಾಲ ಮಾತ್ರ. ಸರ್ಕಾರದ ಈ ತಪ್ಪಿಗೆ ಮುಂದಿನ ದಿನಗಳಲ್ಲಿ ಜನರೇ ಶಿಕ್ಷೆ ನೀಡುತ್ತಾರೆ' ಎಂದೂ ಹೇಳಿದರು.



'ಲೈಂಗಿಕ ಕಾರ್ಯಕರ್ತೆಯರೊಂದಿಗೆ ಘನತೆಯಿಂದ ನಡೆದುಕೊಳ್ಳಿ'

ನವದೆಹಲಿ (ಪಿಟಿಐ): ಲೈಂಗಿಕ ಕಾರ್ಯಕರ್ತೆಯರನ್ನು ಮೌಖಿಕ ಮತ್ತು ದೈಹಿಕವಾಗಿ ನಿಂದಿಸಬಾರದು ಹಾಗೂ ಅವರೊಂದಿಗೆ ಘನತೆಯಿಂದ ನಡೆದುಕೊಳ್ಳಬೇಕು ಎಂದು ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ ಪೊಲೀಸ್ ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

'ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಯಾವುದೇ ಲೈಂಗಿಕ ಕಾರ್ಯಕರ್ತೆಗೆ ತಕ್ಷಣವೇ ವೈದ್ಯಕೀಯ ನೆರವು ಸೇರಿ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು' ಎಂದು ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರ ರಾವ್, ಬಿ.ಆರ್ ಗವಾಯಿ ಮತ್ತು ಎ.ಎಸ್. ಬೋಪಣ್ಣ ಅವರನ್ನೊಳಗೊಂಡ ಪೀಠವು ಸೂಚಿಸಿದೆ.

ರಕ್ಷಣಾ ಕಾರ್ಯಾಚರಣೆ, ಬಂಧನ ಮತ್ತು ದಾಳಿ ಸಂಬಂಧಿತ ವಿಷಯಗಳನ್ನು ಪ್ರಸಾರ ಮಾಡುವಾಗ ಲೈಂಗಿಕ ಕಾರ್ಯಕರ್ತೆಯರ ಗುರುತನ್ನು ಬಹಿರಂಗಪಡಿಸದಂತೆ ಮಾಧ್ಯಮಗಳಿಗೆ ಮಾರ್ಗಸೂಚಿ ಬಿಡುಗಡೆಗೊಳಿಸುವಂತೆ ಸುಪ್ರೀಂ ಕೋರ್ಟ್ ಭಾರತೀಯ ಪತ್ರಿಕಾ ಮಂಡಳಿಗೆ ಸೂಚಿಸಿದೆ.

ಜೆಡಿಎಸ್: ಗಂಗಾಜಲದ ಕಳಶ ಪ್ರತಿಷ್ಠಾಪನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನತಾ ಜಲಧಾರೆ ಕಾರ್ಯಕ್ರಮದ ಭಾಗವಾಗಿ ರಾಜ್ಯದ 15 ನದಿ, ಉಪನದಿಗಳಿಂದ ನೀರನ್ನು ಸಂಗ್ರಹಿಸಿರುವ 'ಗಂಗಾಜಲ ಕಳಶ'ದ ಪ್ರತಿಷ್ಠಾಪನೆ ಸಮಾರಂಭ ಗುರುವಾರ ಜೆಡಿಎಸ್ ಕಚೇರಿಯಲ್ಲಿ ನಡೆಯಲಿದೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಈ ವಿಷಯ ತಿಳಿಸಿದರು.

ಜೆಡಿಎಸ್ ಪ್ರಧಾನ ಕಚೇರಿ ಜೆಪಿ ಭವನದಲ್ಲಿ 500 ಲೀಟರ್ ಜಲ ತುಂಬಲಿರುವ 10 ಅಡಿಯ ಎತ್ತರದ ಕಳಶವನ್ನು ಸ್ಥಾಪನೆ ಮಾಡಲಾಗುವುದು. ದೇಶದ ಏಳು ಮಹಾ ನದಿಗಳ ಹೆಸರಿನಲ್ಲಿ ಪುಟ್ಟ ಕಳಸಗಳನ್ನು ಇಟ್ಟು ಪೂಜೆ ನೆರವೇರಿಸಲಾಗುವುದು ಎಂದು ಹೇಳಿದರು.



ಜೆಡಿಎಸ್ ಪ್ರಧಾನ ಕಚೇರಿಯಲ್ಲಿ ಪ್ರತಿಷ್ಠಾಪನೆಗೆ ಸಿದ್ಧಪಡಿಸಲಾಗಿರುವ 10 ಅಡಿ ಎತ್ತರದ ಗಂಗಾಜಲ ಕಳಶ

ಕಳಸ ಪ್ರತಿಷ್ಠಾಪನೆ ಮಾಡಲಿರುವ ಮಂಟಪವನ್ನು ಕರ್ನಾಟಕದ ಪರಂಪರೆ ಬಿಂಬಿಸುವ ರೀತಿಯಲ್ಲಿ ನಿರ್ಮಿಸಲಾಗಿದೆ ಎಂದರು. ಬೆಳಿಗ್ಗೆ 9 ಗಂಟೆಯಿಂದ ನಡೆಯಲಿರುವ ಗಂಗಾ ಪೂಜೆ ಸಂದರ್ಭದಲ್ಲಿ ಪರ್ಜನ್ಯ ಹೋಮ, ಗಣ ಹೋಮ, ನವಗ್ರಹ ಹೋಮ ಸೇರಿದಂತೆ ಹಲವು ಹೋಮಗಳು ನಡೆಯಲಿವೆ. ಮುಂದಿನ ಚುನಾವಣೆವರೆಗೆ ಈ ಕಳಶಕ್ಕೆ ಪೂಜೆ ನಡೆಯುತ್ತದೆ. ಜೆಡಿಎಸ್ ವರಿಷ್ಠರಾದ ಎಚ್.ಡಿ.ದೇವೇಗೌಡರು, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಸೇರಿ ಪಕ್ಷದ ಪ್ರಮುಖರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

'ಭ್ರಷ್ಟ ಸಚಿವರನ್ನು ಸಂಪುಟದಿಂದ ಹೊರಹಾಕಿ'

ಬೆಂಗಳೂರು: 'ಪಂಜಾಬ್ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರವೂ ಭ್ರಷ್ಟ ಸಚಿವರನ್ನು ಸಂಪುಟದಿಂದ ಹೊರಹಾಕಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಸಂಚಾಲಕ ಪೃಥ್ವಿ ರೆಡ್ಡಿ ಒತ್ತಾಯಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಚಿವರೊಬ್ಬರು ಒಂದು ಪರ್ಸೆಂಟ್ ಕಮಿಷನ್ ತೆಗೆದುಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿದ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಕೂಡಲೇ ಅವರನ್ನು ವಜಾ ಮಾಡಿ, ತನಿಖೆಗೆ ಆದೇಶಿಸಿದ್ದಾರೆ. ರಾಜ್ಯದ ಬಿಜೆಪಿ ಸರ್ಕಾರದಲ್ಲಿನ ಬಹುತೇಕ ಸಚಿವರ ಮೇಲೆ ಸಾಲು ಸಾಲು ಭ್ರಷ್ಟಾಚಾರದ ಆರೋಪಗಳಿವೆ. ಜನರು ರಾಜೀನಾಮೆಗೆ ಆಗ್ರಹಿಸುತ್ತಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಕರ್ನಾಟಕದ ಅನೇಕ ಸಚಿವರ ವಿರುದ್ಧ ಆರೋಪಗಳಿವೆ. ಕಾಮಗಾರಿಗಳಲ್ಲಿ ಶೇ 40 ರಷ್ಟು ಕಮಿಷನ್ ದಂಧೆ ನಡೆಯುತ್ತಿದೆ ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ. ಮಠಗಳಿಗೆ ಅನುದಾನ ಪಡೆಯಲು ಶೇ 30 ರಷ್ಟು ಕಮಿಷನ್ ನೀಡಬೇಕಾಗಿದೆ ಎಂದು ಸ್ವಾಮೀಜಿಗಳೇ ಆರೋಪ ಮಾಡಿದ್ದಾರೆ. ಎಲ್ಲ ಕಳಂಕಿತ ಸಚಿವರನ್ನೂ ಕೂಡಲೇ ವಜಾ ಮಾಡಿ, ನ್ಯಾಯಾಂಗ ತನಿಖೆಗೆ ಆದೇಶಿಸಬೇಕು' ಎಂದರು. 'ಸಚಿವ ವಿ. ಸೋಮಣ್ಣ ವಿರುದ್ಧ ಆದಾಯ ಮೀರಿ ಆಸ್ತಿ ಗಳಿಸಿದ ಆರೋಪ ಇದೆ. ಅನೇಕ ಸಚಿವರ ವಿರುದ್ಧ ಗಂಭೀರ ಆರೋಪಗಳಿದ್ದರೂ ಕ್ರಮ ಕೈಗೊಳ್ಳದಿರುವುದು ದುರದೃಷ್ಟಕರ' ಎಂದು ಹೇಳಿದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

31ನೇ ಮಾರ್ಚ್ 2022ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ: 31 ಮಾರ್ಚ್ 2022 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	31 ಡಿಸೆಂಬರ್ 2021 (ಅಪರಿಶೋಧಿತ)	31 ಮಾರ್ಚ್ 2021 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	ವರ್ಷಕ್ಕೆ ಕೊನೆಗೊಂಡ: 31 ಮಾರ್ಚ್ 2022 (ಪರಿಶೋಧಿತ)	31 ಮಾರ್ಚ್ 2021 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	2,357.25	2,026.07	2,090.79	7,879.64	8,232.21
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	134.01	41.49	17.68	81.52	194.29
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	(23.02)	41.49	17.68	(522.02)	194.29
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	(63.70)	35.16	9.06	(534.65)	120.39
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(56.10)	41.81	12.22	(510.43)	113.77
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)				128.85	128.85
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ)				1,910.83	2,101.99
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ)					
	ಎ) ಮೂಲಭೂತ:	0.60	2.72	0.49	(24.04)	13.31
	ಬಿ) ಡೈಲ್ಯೂಟೆಡ್:	0.59	2.72	0.49	(24.04)	13.30

ಸೂಚನೆ :

1. 31 ಮಾರ್ಚ್ 2022ರ ತ್ರೈಮಾಸಿಕದ ಹಾಗೂ ವರ್ಷಕ್ಕೆ ಕೊನೆಗೊಂಡ ಪ್ರತ್ಯೇಕವಾದ ಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ: 31 ಮಾರ್ಚ್ 2022 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	31 ಡಿಸೆಂಬರ್ 2021 (ಅಪರಿಶೋಧಿತ)	31 ಮಾರ್ಚ್ 2021 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	ವರ್ಷಕ್ಕೆ ಕೊನೆಗೊಂಡ: 31 ಮಾರ್ಚ್ 2022 (ಪರಿಶೋಧಿತ)	31 ಮಾರ್ಚ್ 2021 (ಪರಿಶೋಧಿತ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	1,226.38	860.81	971.14	3,538.17	4,283.87
ಲಾಭ ತೆರಿಗೆಯ ಮುಂಚೆ	189.37	45.15	16.01	153.76	331.25
ಲಾಭ ತೆರಿಗೆಯ ನಂತರ	143.95	32.04	5.01	117.66	239.79

2. ಮೇಲಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 24ನೇ ಮೇ, 2022 ರಂದು ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 24ನೇ ಮೇ, 2022 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಕಂಪನಿಯ ನಿರ್ದೇಶಕರ ಮಂಡಳಿಯು ಮೇ 24, 2022 ರಂದು ನಡೆದ ಸಭೆಯಲ್ಲಿ, ಮಾರ್ಚ್ 31, 2022ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಅವಧಿಗೆ ಷೇರು ಬಂಡವಾಳದ ಮೇಲೆ ಪ್ರತಿ 10 ರೂ. ಷೇರಿಗೆ ರೂ. 2.50/– ಡಿವಿಡೆಂಡ್ ಅನ್ನು ಶಿಫಾರಸು ಮಾಡಿದೆ. ಈ ಅಂತಿಮ ಡಿವಿಡೆಂಡ್ ಅನ್ನು, ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.
4. ಮೇಲಿರುವ ತ್ರೈಮಾಸಿಕಕ್ಕೆ ಕೊನೆಗೊಂಡ, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪ ಮತ್ತು ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಸಂಕ್ಷಿಪ್ತ ರೂಪವಾಗಿದೆ. ಸಮಗ್ರ ಹಣಕಾಸಿನ ಪ್ರತ್ಯೇಕವಾದ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.
5. ಪ್ರಸ್ತುತ ಮಾರ್ಚ್ 31 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಹಿಂದಿನ ವರ್ಷಗಳ ಅಂಕಿಅಂಶಗಳು ಸಂಪೂರ್ಣ ಹಣಕಾಸು ವರ್ಷಗಳ ಲೆಕ್ಕಪರಿಶೋಧನೆಯ ಅಂಕಿಅಂಶಗಳ ನಡುವಿನ ಸಮತೋಲನ ಅಂಕಿಅಂಶಗಳು ಮತ್ತು ಆಯಾ ವರ್ಷಗಳಗೆ ಡಿಸೆಂಬರ್ 31 ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಲೆಕ್ಕಪರಿಶೋಧನೆ ಮಾಡದ ಪ್ರಕಟಿತ ವರ್ಷದಿಂದ ದಿನಾಂಕದ ಅಂಕಿಅಂಶಗಳು, ಸೀಮಿತ ಪರಿಶೀಲನೆಗೆ ಒಳಪಟ್ಟಿರುವ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದ ಅಂತ್ಯದ ದಿನಾಂಕವಾಗಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ಮೇ 24, 2022

के आई ओ सी एल लिमिटेड
KIOCL LIMITED

KUDREMUKH

(A Government of India Enterprise)
CIN - L13100KA1976GOI002974
Tel. & Fax No.080-25531525, E-mail: cs@kioclltd.in,
website: www.kioclltd.in

AUDITED FINANCIAL RESULTS FOR THE QUARTER AND YEAR ENDED 31ST MARCH, 2022

(₹ in Lakhs except EPS)

Sl.No.	Particulars	Quarter ended 31.03.2022 (Audited)	31.12.2021 (Un-Audited)	31.03.2021 (Audited)	Year ended 31.03.2022 (Audited)	31.03.2021 (Audited)
	1	2	3	4	5	6
1	Total Income from Operations	1,13,880	36,379	93,492	3,00,645	2,37,644
2	Net Profit / (Loss) for the period (before tax, Exceptional and/or Extraordinary items)	24,099	(8,668)	26,303	41,103	41,023
3	Net Profit / (Loss) for the period before tax (after Exceptional and/or Extraordinary items)	24,099	(8,668)	26,303	41,103	41,023
4	Net Profit / (Loss) for the period after tax (after Exceptional and/or Extraordinary items)	19,394	(6,613)	19,401	31,341	30,117
5	Total Comprehensive Income for the period {Comprising Profit / (Loss) for the period (after tax) and Other Comprehensive Income (after tax)}	19,741	(6,613)	19,538	31,688	30,254
6	Equity Share Capital	60,775	60,775	60,775	60,775	60,775
7	Reserves (excluding Revaluation Reserve) as shown in the Audited Balance Sheet of the previous year.	-	-	-	1,53,589	1,37,824
8	Earnings Per Share (of ₹10/- each) (for continuing and discontinued operations) Basic & Diluted	3.19	(1.09)	3.19	5.16	4.87

Note:
1. The above is an extract of the detailed audited Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Financial Results for the quarter ended and year ended March 31, 2022 are available on the Stock Exchange(s) website www.nseindia.com, www.bseindia.com, www.msei.in and on Company website at www.kioclltd.in.
2. The above results of the Company have been reviewed by the Audit Committee and approved by Board of Directors at their Meeting held on 24.05.2022.

By order of the Board
For KIOCL Limited
Sd/-
(S.K. GORAI)
Director (Finance)
(DIN: 07223221)

Place: New Delhi
Date: 24.05.2022

ಬಿಬಿಎಂಪಿ ವಾರ್ಡ್ ಮರುವಿಂಗಡಣೆ
ಗಡುವಿಗೆ ಒಂದು ವಾರ ಮುನ್ನವೇ ಅಧಿಸೂಚನೆ?

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆ ಹಾಗೂ ವಾರ್ಡ್‌ವಾರು ಮೀಸಲಾತಿ ಅಧಿಸೂಚನೆಯನ್ನು 8 ವಾರಗಳ ಒಳಗೆ ಪ್ರಕಟಿಸುವಂತೆ ಸುಪ್ರೀಂ ಮೇ 20 ರಂದು ಆದೇಶ ನೀಡಿದ್ದು, ಈ ಗಡುವಿಗಿಂತ ಒಂದು ವಾರ ಮುನ್ನವೇ ವಾರ್ಡ್ ಮರುವಿಂಗಡಣೆ ಮಾಡಿ ಮೀಸಲಾತಿ ಪ್ರಕಟಿಸಲು ಸರ್ಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಈ ಕುರಿತು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು (ಎಸಿಎಸ್), ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮಂಗಳವಾರ ಪತ್ರ ಬರೆದಿದ್ದಾರೆ. '2020ರ ಬಿಬಿಎಂಪಿ ಕಾಯ್ದೆ ಅನ್ವಯ ಹೊಸತಾಗಿ ಸ್ಥಾಪನೆಯಾಗಿರುವ ಪಾಲಿಕೆಯ ವಾರ್ಡ್‌ಗಳ ಮರುವಿಂಗಡಣೆ ಮತ್ತು ವಾರ್ಡ್‌ವಾರು ಮೀಸಲಾತಿ ಪಟ್ಟಿಗೆ ಸಂಬಂಧಿಸಿದ ಅಧಿಸೂಚನೆಯನ್ನು ಎಂಟು ವಾರಗಳ ಒಳಗೆ ಪೂರ್ಣಗೊಳಿಸುವಂತೆ ಸುಪ್ರೀಂ ಹೇಳಿದೆ. ಈ ಕುರಿತ ಅಧಿಸೂಚನೆಯನ್ನು ಒಂದು ವಾರ ಮುಂಚೆಯೇ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಯವರು ನಿರ್ದೇಶನ ನೀಡಿದ್ದಾರೆ. ಮರುವಿಂಗಡಣೆಗೆ ಸಂಬಂಧಿಸಿದ ವರದಿಯನ್ನು ತಕ್ಷಣವೇ ಸಲ್ಲಿಸಬೇಕು' ಎಂದು ಎಸಿಎಸ್ ಅವರು ಸೂಚಿಸಿದ್ದಾರೆ. ವಾರ್ಡ್ ಮರುವಿಂಗಡಣೆ ವರದಿಯನ್ನು ಎರಡೇ ದಿನಗಳಲ್ಲಿ ಸಲ್ಲಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೇತೃತ್ವದ ಸಮಿತಿ ಸಿದ್ಧತೆ ಮಾಡಿಕೊಂಡಿದೆ.

'2011ರ ಜನಗಣತಿ ಆಧಾರದಲ್ಲಿ ವಾರ್ಡ್‌ಗಳನ್ನು ವಿಂಗಡಿಸಿದ್ದೇವೆ. ಪ್ರತಿ ವಾರ್ಡ್‌ನ ಸರಾಸರಿ ಜನಸಂಖ್ಯೆ 35 ಸಾವಿರ ಇರುವಂತೆ ನೋಡಿಕೊಂಡಿದ್ದೇವೆ. ಯಾವುದೇ ವಾರ್ಡ್ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಹಂಚಿಹೋಗುವುದಿಲ್ಲ' ಎಂದು ತುಷಾರ್ ಗಿರಿನಾಥ್ ತಿಳಿಸಿದರು. 'ನಮಗಿನ್ನೂ 7 ವಾರ ಕಾಲಾವಕಾಶವಿದೆ. ವರದಿಯ ಕರಡು ಪ್ರಕಟಿಸಿದ ಬಳಿಕ ಸಲಹೆ ಹಾಗೂ ಆಕ್ಷೇಪಣೆ ಸಲ್ಲಿಕೆಗೆ ಎರಡು ವಾರ ಕಾಲಾವಕಾಶ ನೀಡಬೇಕಾಗುತ್ತದೆ. ಆ ಬಳಿಕ ಅದನ್ನು ಅಂತಿಮಗೊಳಿಸಲು ಕನಿಷ್ಠ ಒಂದು ವಾರವಾದರೂ ಬೇಕು' ಎಂದರು.

'ವಲಯಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ' ಎಂದು ತಿಳಿಸಿದರು.

ದ್ವಿತೀಯ ಮತ್ತು ತೃತೀಯ ಹಂತದ ಹೂಳು ತೆಗೆಯಲು ಬಿಬಿಎಂಪಿ ನಿರ್ಧಾರ
'ರಾಜಕಾಲುವೆ ಹೂಳೆತ್ತಲು ಟೆಂಡರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎಲ್ಲಾ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಹಂತದ ರಾಜಕಾಲುವೆಗಳ ಹೂಳು ತೆಗೆಯಲು ಬಿಬಿಎಂಪಿ ನಿರ್ಧರಿಸಿದೆ.

'ಹೂಳು ತೆಗೆದು ರಾಜಕಾಲುವೆ ಸ್ವಚ್ಛಗೊಳಿಸಲು ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. 20ರಿಂದ 30 ದಿನಗಳಲ್ಲಿ ಕಾಲುವೆಗಳು ಸ್ವಚ್ಛ ಆಗಲಿವೆ. ಗೆದ್ದಲಹಳ್ಳಿ ರೈಲ್ವೆ ಸೇತುವೆ ವಿಸ್ತರಣೆಗೆ ಶೀಘ್ರವೇ ಟೆಂಡರ್ ಕರೆಯಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಬುಧವಾರ ತಿಳಿಸಿದರು.

'ಶ್ರೀನಗರದ ಕಾಳಿದಾಸ ಬಸ್ ನಿಲ್ದಾಣದ ಬಳಿ ರಾಜಕಾಲುವೆ ಮೇಲ್ಭಾಗದಲ್ಲಿ ಸಾರುವೆ ಕುಸಿದು ನಾಲ್ವರು ಕಾರ್ಮಿಕರು ಗಾಯಗೊಂಡಿರುವ ಪ್ರಕರಣದ ಬಗ್ಗೆ ಟಿವಿಸಿಸಿ (ಮುಖ್ಯ ಆಯುಕ್ತರ ಜಾಗೃತ ಕೋಶ) ಮೂಲಕ ವರದಿ ಪಡೆಯಲಿದ್ದೇನೆ. ಬಿಬಿಎಂಪಿ ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರ ಬೇಜವಾಬ್ದಾರಿ ಕಂಡು ಬಂದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈ ಘಟನೆಯಿಂದ ಬಿಬಿಎಂಪಿ ಘನತೆಗೂ ಧಕ್ಕೆಯಾಗಿದ್ದು, ಗುತ್ತಿಗೆದಾರರಿಗೆ ದಂಡ ವಿಧಿಸಲಾಗುತ್ತದೆ' ಎಂದರು.

ಟಿವಿಸಿಸಿಗೆ ಹೆಚ್ಚಿನ ಅಧಿಕಾರ

'ಆಯ್ದ ಬಿಲ್‌ಗಳ ಪರಿಶೀಲನೆ ಜತೆಗೆ ಕಾಮಗಾರಿ ಗುಣಮಟ್ಟ ಪರಿಶೀಲನೆಯ ಜವಾಬ್ದಾರಿಯನ್ನೂ ಟಿವಿಸಿಸಿಗೆ ನೀಡಲಾಗಿದೆ' ಎಂದು ತುಷಾರ್ ಗಿರಿನಾಥ್ ತಿಳಿಸಿದರು.

'ಕಳಪೆ ಕಾಮಗಾರಿ ಬಗ್ಗೆ ದೂರುಗಳು ಬಂದರೆ, ಸ್ಥಳಕ್ಕೆ ಹೋಗಿ ಪರಿಶೀಲಿಸಲು ಕಾಯ್ದೆಯಲ್ಲಿ ಟಿವಿಸಿಸಿಗೆ ಅಧಿಕಾರ ಇದೆ. ಬಿಲ್‌ಗಳ ನಿಖರತೆ ಪರಿಶೀಲಿಸುವ ಜತೆಗೆ ಸಿವಿಲ್ ಕಾಮಗಾರಿ ಮೇಲಿನ ದೂರುಗಳ ತನಿಖೆಯ ಅಧಿಕಾರವನ್ನೂ ನೀಡಲಾಗಿದೆ. ಕಾಮಗಾರಿಯಲ್ಲಿ ಲೋಪ ಆಗುವುದನ್ನು ತಪ್ಪಿಸಲು ಇದರಿಂದ ಸಾಧ್ಯವಿದೆ' ಎಂದರು.

ವಲಯ ಆಯುಕ್ತರಿಗೆ ಹೆಚ್ಚಿನ ಅಧಿಕಾರ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿಯಲ್ಲಿ ಮೇಲ್ವಿಚಾರಣೆ, ಯೋಜನೆ ರೂಪಿಸುವುದು, ಮಾನವ ಸಂಪನ್ಮೂಲ ನಿಯಂತ್ರಣ ವಿಚಾರಗಳಿಗೆ ಸಂಬಂಧಿಸಿದ ನಿರ್ಧಾರ ಕೈಗೊಳ್ಳಲು ವಲಯ ಆಯುಕ್ತರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಈ ಕುರಿತು ಪಾಲಿಕೆಯ ಮುಖ್ಯ ಆಯುಕ್ತರು ಬುಧವಾರ ಆದೇಶ ಮಾಡಿದ್ದಾರೆ.

ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಇಲಾಖೆಗಳ ಮುಖ್ಯಸ್ಥರ ಕಚೇರಿಗಳಿಗೆ ಸಂಬಂಧಿಸಿದಂತೆ ಆಡಳಿತ ಮತ್ತು ಶಿಸ್ತು ನಿಯಂತ್ರಣದ ಅಧಿಕಾರವನ್ನು ವಲಯ ಆಯುಕ್ತರಿಗೆ ನೀಡಲಾಗಿದೆ. ಕೆಲವೊಂದು ತಾಂತ್ರಿಕ ವಿಷಯಗಳ ಹೊರತಾಗಿ ಆಡಳಿತಾತ್ಮಕ ನಿಯಂತ್ರಣವನ್ನೂ ಅವರ ವ್ಯಾಪ್ತಿಗೆ ತರಲಾಗಿದೆ. ಕಂದಾಯ, ಆರೋಗ್ಯ, ನಗರಯೋಜನೆ, ಕಸ ನಿರ್ವಹಣೆ, ತೋಟಗಾರಿಕೆ, ಶಿಕ್ಷಣ, ಅರಣ್ಯ ಮತ್ತು ಪಶುಸಂಗೋಪನೆ ಇಲಾಖೆಗಳ ತಾಂತ್ರಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ಆಯಾ ಇಲಾಖೆ ಮುಖ್ಯಸ್ಥರಿಗೆ ವರದಿ ಮಾಡಬೇಕಾಗುತ್ತದೆ.

'ಕಾಮಗಾರಿ ವಿಭಾಗದ ಅಧಿಕಾರಿಗಳು ತಾಂತ್ರಿಕ ವಿಚಾರಗಳಿಗೆ ಸಂಬಂಧಿಸಿ ಆಯಾ ವಲಯದ ಮುಖ್ಯ ಎಂಜಿನಿಯರ್ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಯೋಜನೆ, ಕೆರೆ, ಮೂಲಸೌಕರ್ಯ, ಒಎಫ್‌ಸಿ ಮತ್ತು ರಾಜಕಾಲುವೆ ಎಂಜಿನಿಯರಿಂಗ್ ವಿಭಾಗಗಳು ತಾಂತ್ರಿಕ ವಿಚಾರಗಳಿಗೆ ಸಂಬಂಧಿಸಿ ಆಯಾ ಇಲಾಖೆ ಮುಖ್ಯಸ್ಥರ ಅಧೀನದಲ್ಲಿ ಕಾರ್ಯನಿರ್ವಹಿಸಲಿವೆ' ಎಂದು ಆದೇಶದಲ್ಲಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ.

'ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಪ್ರವೇಶಕ್ಕೆ ನಿರ್ಬಂಧ ಇಲ್ಲ'

ಬೆಂಗಳೂರು: ರಾಜ್ಯ ಸರ್ಕಾರದ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಯಾವುದೇ ರೀತಿಯ ನಿರ್ಬಂಧ ವಿಧಿಸದಿರಲು ನಿರ್ಧರಿಸಿರುವ ಶಿಕ್ಷಣ ಇಲಾಖೆ, ಪ್ರವೇಶ ಕಲ್ಪಿಸುವಾಗ ಮೂಲಸೌಕರ್ಯಗಳನ್ನು ಗಮನದಲ್ಲಿರಿಸಿಕೊಳ್ಳಬೇಕು ಎಂದು ಸೂಚಿಸಿದೆ.

2022–23ನೇ ಶೈಕ್ಷಣಿಕ ವರ್ಷದಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸದ ಕಾರಣ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಈ ನಿರ್ಧಾರ ಕೈಗೊಂಡಿದೆ.

ಜತೆಗೆ, ಕೋವಿಡ್‌ನಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕಳುಹಿಸಲು ಬಯಸುವವರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಈ ಕ್ರಮಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಲು ಅವಕಾಶ ಕಲ್ಪಿಸಬೇಕು ಎನ್ನುವ ಬೇಡಿಕೆಯನ್ನು ಹಲವು ಸರ್ಕಾರಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಂದ ಬಂದಿದೆ. ಮೂಲಸೌಕರ್ಯಗಳು ಲಭ್ಯ ಇರುವ ಶಾಲೆಗಳಲ್ಲಿ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಲು ಅವಕಾಶ ನೀಡಲಾಗುವುದು. ಶಿಕ್ಷಕರ ಕೊರತೆ ಇದ್ದಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಬಹುದು. ಶಾಲಾಭಿವೃದ್ಧಿ ಸಮಿತಿಗಳು ಈ ಬಗ್ಗೆ ಬಿಇಒಗಳಿಗೆ ಮನವಿ ಸಲ್ಲಿಸಬಹುದು' ಎಂದು ತಿಳಿಸಿದ್ದಾರೆ.

2019–20ರಲ್ಲಿ ರಾಜ್ಯ ಸರ್ಕಾರ 1,001 ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸಿತ್ತು. ನಂತರ, 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸಲಾಗಿದೆ. ಒಟ್ಟಾರೆಯಾಗಿ ಪ್ರಸ್ತುತ, 2,401 ಇಂಗ್ಲಿಷ್ ಮಾಧ್ಯಮ ಸರ್ಕಾರಿ ಶಾಲೆಗಳಿವೆ.

ನಗರದಲ್ಲಿ ಇಂದು

ಎಚ್‌.ಎಸ್‌. ದೊರೆಸ್ವಾಮಿ ಅವರ ಸ್ಮರಣೆ ಮತ್ತು ಶ್ರದ್ಧಾಂಜಲಿ ಸಮರ್ಪಣೆ: ಆಯೋಜನೆ: ಎಚ್‌.ಎಸ್‌. ದೊರೆಸ್ವಾಮಿ ಅನುಯಾಯಿಗಳ ಬಳಗ, ಸ್ಥಳ: ಗಾಂಧಿ ಪ್ರತಿಮೆ ಬಳಿ, ಮಹಾತ್ಮಾ ಗಾಂಧಿ ರಸ್ತೆ, ಬೆಳಿಗ್ಗೆ 10

'ಗ್ರಾಮೀಣ ವರದಿಗಾರಿಕೆ ಹಾಗೂ ಸುದ್ದಿ ಮಾಧ್ಯಮದಲ್ಲಿ ಕೃಷಿ ಒಂದು ನೋಟ' ಪುಸ್ತಕಗಳ ಲೋಕಾರ್ಪಣೆ: ವಿ.ಸುನೀಲ್ ಕುಮಾರ್, ಅಧ್ಯಕ್ಷತೆ: ಸದಾಶಿವ ಶೆಣೈ, ಮುಖ್ಯ ಅತಿಥಿ: ಎಂ. ಸಿದ್ದರಾಜು, ಪುಸ್ತಕಗಳ ಕುರಿತು ವಿಮರ್ಶೆ: ಗಾಣಧಾಳು ಶ್ರೀಕಂಠ, ಮಲ್ಲಿಕಾರ್ಜುನ ಸಿದ್ದಣ್ಣನವರ್, ಲೇಖಕರು: ಚಿನ್ನಸ್ವಾಮಿ ವಡ್ಡಗೆರೆ, ಮಲ್ಲಿಕಾರ್ಜುನ ಸಿದ್ದಣ್ಣನವರ್, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಪ್ರೆಸ್ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11



ಸುನಿತಾ ಮೋಹನರಾಜು, ಜಾಜಿ ರಾಜು

ಭರತನಾಟ್ಯ ಪ್ರದರ್ಶನ: ಸುನಿತಾ ಮೋಹನರಾಜು, ಜಾಜಿ ರಾಜು, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 7.30

ಬಸ್ ನಿಲ್ದಾಣದಲ್ಲಿ ಕನ್ನಡದ ಕವಿ,ಕಾವ್ಯ ಪರಿಚಯಿಸಿ: ಟಿ.ಎಸ್. ನಾಗಾಭರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬಸ್ ನಿಲ್ದಾಣಗಳಲ್ಲಿ ಕನ್ನಡದ ಕವಿಗಳು ಮತ್ತು ಕಾವ್ಯಗಳನ್ನು ಪರಿಚಯಿಸಬೇಕು. ಸಾರಿಗೆ ವಾಹನಗಳಲ್ಲಿ ಅಚ್ಚ ಕನ್ನಡದಲ್ಲಿ ಮಾತನಾಡುವ ನಿರ್ವಾಹಕರನ್ನು ಗುರುತಿಸಿ, ಅಭಿನಂದಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ಸೂಚಿಸಿದರು.

ಪ್ರಾಧಿಕಾರ ಹಮ್ಮಿಕೊಂಡಿದ್ದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬಿಎಂಟಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದ ನಾಗಾಭರಣ ಅವರು, 'ಚಾಲಕರು ಮತ್ತು ನಿರ್ವಾಹಕರ ಎದೆಬಿಲ್ಲೆ ಮತ್ತು ಭುಜಬಿಲ್ಲೆ ಕನ್ನಡದಲ್ಲಿರಬೇಕು. ಸೇವಾ ಸಿಂಧು ಕೇಂದ್ರಗಳಲ್ಲಿ ಅಂಧರು ಮತ್ತು ಅಂಗವಿಕಲರ ಪಾಸ್‌ಗಳಿಗೆ ನೀಡುವ ಅರ್ಜಿ ನಮೂನೆಗಳು ಕನ್ನಡದಲ್ಲಿರುವಂತೆ ಕ್ರಮವಹಿಸಬೇಕು. ಬಸ್‌ಗಳು ಸಂಚರಿಸುವಾಗ ಡಿಜಿಟಲ್ ಫಲಕಗಳಲ್ಲಿ ಕನ್ನಡಪರ ಘೋಷಣೆಗಳನ್ನು ಹಾಕಬೇಕು' ಎಂದರು.

ಬಿಎಂಟಿಸಿಯ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ, 'ಸಂಸ್ಥೆ ಹೊರಡಿಸುವ ಜಾಹೀರಾತುಗಳಲ್ಲಿ ಪ್ರಧಾನವಾಗಿ ಕನ್ನಡ ಬಳಸಲು ಕ್ರಮ ವಹಿಸಲಾಗುತ್ತಿದೆ. ವಿದ್ಯುನ್ಮಾನ ಫಲಕಗಳಲ್ಲಿ ಪ್ರಕಟವಾಗುವ ಮಾಹಿತಿಗಳೂ ಕನ್ನಡದಲ್ಲಿರುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಸೆಪ್ಟೆಂಬರ್ ಒಳಗೆ ಸಂಸ್ಥೆಯ ತಂತ್ರಾಂಶದಲ್ಲಿ ಕನ್ನಡ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರು.

'ಪ್ರಾಧಿಕಾರವು ಕನ್ನಡದ 2 ಸಾವಿರ ಉಕ್ತಿಗಳನ್ನು ನೀಡಿದರೆ ಬಸ್‌ಗಳು ಸಂಚರಿಸುವಾಗ ಡಿಜಿಟಲ್ ಫಲಕಗಳಲ್ಲಿ ಪ್ರಕಟಿಸಲಾಗುವುದು' ಎಂದು ತಿಳಿಸಿದರು.

ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಬಿಎಂಟಿಸಿಯ ಮಾಹಿತಿ ಮತ್ತು ತಂತ್ರಜ್ಞಾನದ ನಿರ್ದೇಶಕ ಸೂರ್ಯಕಾಂತ್ ಸೇನ್, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಹಾಗೂ ಅಧಿಕಾರಿಗಳು ಇದ್ದರು.

ನ್ಯಾಷನಲ್ ಕಾಲೇಜು ಮೈದಾನದಲ್ಲಿ ಇಂದು ಉದ್ಯೋಗ ಮೇಳ

ಬೆಂಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಗುರುವಾರ ಉದ್ಯೋಗ ಮೇಳವನ್ನು ಹಮ್ಮಿಕೊಂಡಿದೆ.

ಉದ್ಯೋಗ ವಿನಿಮಯ ಕೇಂದ್ರ, ನ್ಯಾಷನಲ್ ಕಾಲೇಜು ಹಾಗೂ ಬಸ್ ಇಂಡಿಯಾ ಫೌಂಡೇಷನ್ ಸಹಯೋಗದಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಉದ್ಯೋಗ ಮೇಳ ನಡೆಯಲಿದೆ. ಹೆಸರಾಂತ ಖಾಸಗಿ ಸಂಸ್ಥೆಗಳು ಪಾಲ್ಗೊಳ್ಳಲಿವೆ. ಎಸ್ಸೆಸ್ಸೆಲ್ಸಿ ಉತ್ತೀರ್ಣ ಅಥವಾ ಅನುತ್ತೀರ್ಣ, ಪಿಯುಸಿ, ಐಟಿಐ, ಡಿಪ್ಲೊಮಾ, ಸಾಮಾನ್ಯ ಪದವೀಧರರು ಹಾಗೂ ಸ್ನಾತಕೋತ್ತರ ಪದವೀಧರರು ಈ ಮೇಳದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 6301470167, 8660393410 ಅಥವಾ 7353710463

ಅನಾರೋಗ್ಯ: ಹಾಜರಿಗೆ ವಿನಾಯ್ತಿ ಕೋರಿದ ಬಿಎಸ್‌ವೈ

ಬೆಂಗಳೂರು: ಅಕ್ರಮ ಡಿನೋಟಿಫಿಕೇಶನ್ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ಅನಾರೋಗ್ಯದ ಕಾರಣ ನೀಡಿ ಖುದ್ದು ಹಾಜರಾತಿಗೆ ಇಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಾತ್ಕಾಲಿಕವಾಗಿ ದಿನದಮಟ್ಟಿಗೆ ವಿನಾಯಿತಿ ನೀಡಿದೆ.

'ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯಲ್ಲಿನ ಹಲವು ಜಮೀನುಗಳನ್ನು ಯಡಿಯೂರಪ್ಪನವರು 2006ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕಾನೂನು ಬಾಹಿರವಾಗಿ ಡಿನೋಟಿಫೈ ಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಾಸುದೇವ ರೆಡ್ಡಿ ಎಂಬುವರು ದಾಖಲಿಸಿರುವ ಖಾಸಗಿ ದೂರಿನ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಜಯಂತ ಕುಮಾರ್ ಬುಧವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಯಡಿಯೂರಪ್ಪ ಪರ ಹಾಜರಾಗಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್, 'ಯಡಿಯೂರಪ್ಪ ಅವರು ಕಳೆದ ಕೆಲವು ದಿನಗಳಿಂದ ಅತಿಯಾದ ಮಧುಮೇಹ, ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದವರು ಚೇತರಿಸಿಕೊಂಡಿದ್ದರು. ಆದರೆ, ಈಗ ಮತ್ತೆ ಕಫ, ಶೀತ ಮತ್ತು ಜ್ವರದಿಂದ ಬಳಲುತ್ತಿದ್ದು ವೈದ್ಯರು ವಿಶ್ರಾಂತಿಗೆ ಸಲಹೆ ನೀಡಿದ್ದಾರೆ. ಆದ್ದರಿಂದ, ಖುದ್ದು ಹಾಜರಾತಿಗೆ ವಿನಾಯಿತಿ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ದಿನದ ಹಾಜರಾತಿಗೆ ವಿನಾಯಿತಿ ನೀಡಿ ವಿಚಾರಣೆಯನ್ನು ಜೂನ್ 17ಕ್ಕೆ ಮುಂದೂಡಿದರು.

ಬೆಂಗಳೂರು–ಬೀದರ್ ವಿಮಾನ ಸಂಚಾರ ಮತ್ತೆ ಪ್ರಾರಂಭ

ಬೀದರ್: ಜೂನ್ 15ರಿಂದ ಬೆಂಗಳೂರು– ಬೀದರ್ ಮಧ್ಯೆ ವಾರದಲ್ಲಿ ನಾಲ್ಕು ಬಾರಿ ವಿಮಾನ ಸಂಚಾರ ಆರಂಭವಾಗಲಿದೆ ಎಂದು ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ತಿಳಿಸಿದ್ದಾರೆ. ನಾಗರಿಕ ವಿಮಾನ ಸಂಚಾರ ಆರಂಭಿಸಲು ಸ್ಟಾರ್ ಏರ್ ವಿಮಾನ ಸಂಸ್ಥೆಗೆ ನಾಗರಿಕ ವಿಮಾನಯಾನ ಸಚಿವಾಲಯ ಒಪ್ಪಿಗೆ ನೀಡಿದೆ. ಇದರಲ್ಲಿ 50 ಪ್ರಯಾಣಿಕರಿಗೆ ವ್ಯವಸ್ಥೆ ಇದೆ.

ಲಕ್ಷ್ಮಣ್‌ರಾವ್‌ಗೆ 'ಸಾಹಿತ್ಯ ಕಲ್ಪತರು' ಪ್ರಶಸ್ತಿ

ತುಮಕೂರು: ತಿಪಟೂರಿನ ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘವು ಕವಿ ಬಿ.ಆರ್.ಲಕ್ಷ್ಮಣ್‌ರಾವ್ ಅವರನ್ನು ಪ್ರಸಕ್ತ ಸಾಲಿನ 'ಸಾಹಿತ್ಯ ಕಲ್ಪತರು' ಪ್ರಶಸ್ತಿಗೆ ಆಯ್ಕೆ ಮಾಡಿದೆ.

2022ನೇ ಸಾಲಿನಿಂದ ಹಿರಿಯ ಲೇಖಕರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲು ನಿರ್ಧರಿಸಿದ್ದು, ಮೊದಲ ಪ್ರಶಸ್ತಿಯನ್ನು ಬಿ.ಆರ್.ಲಕ್ಷ್ಮಣ್‌ರಾವ್ ಅವರಿಗೆ ನೀಡಲಾಗುತ್ತಿದೆ. ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ.

ತಿಪಟೂರಿನ ಸತ್ಯಗಣಪತಿ ಅಮೃತ ಮಹೋತ್ಸವ ಭವನದಲ್ಲಿ ಜೂನ್ 4ರಂದು ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶ



ಶ್ರೀಮಾನ್ನ ನಾರಾಯಣ (624 ಅಂಕಗಳು) ಎಂ.ಇ.ಎಸ್ ಹೈಸ್ಕೂಲ್, ನಾಗರಭಾವಿ



ಎಸ್.ಆರ್. ಮನೋಜ್ (609 ಅಂಕಗಳು) ಅಪೊಲೋ ಹೈಸ್ಕೂಲ್, ಗಜಾನನ ನಗರ, ಸುಂಕದಕಟ್ಟೆ

THE NATIONAL EDUCATION SOCIETY OF KARNATAKA®
Basavanagudi, Bangalore - 560 004


Admissions are in full swing at

1. The National Higher Primary School, (Kannada Medium / English Medium) Basavanagudi
2. The National High School, Basavanagudi
3. The National Pre-University College, Basavanagudi
4. The National Degree College, Basavanagudi

Special Feature
Every student will be allowed to work in
ROBOTICS AND ARTIFICIAL INTELLIGENCE (AI) Lab.
For more details:
Contact the respective Heads of Institutions during week days from 11.00 a.m. to 1.00 p.m.

Prof. S.N. Nagaraja Reddy
Dr. P. Sadananda Maiya
Secretaries

A.H. Rama Rao
President



ಕೊಲೆ ಆರೋಪಿ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಧ್ಯ ವಯಸ್ಸಿನ ಮಹಿಳೆಯೊಬ್ಬರ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ 13 ವರ್ಷಗಳಿಂದ ಜೈಲು ವಾಸ ಅನುಭವಿಸುತ್ತಿದ್ದ ವ್ಯಕ್ತಿಗೆ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸಿರುವ ಹೈಕೋರ್ಟ್, ಆತನನ್ನು ಕೂಡಲೇ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ಶಿವಪ್ರಸಾದ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, 'ಅಮಾಯಕರು ಶಿಕ್ಷೆಗೆ ಗುರಿಯಾಗಬಾರದು. ನ್ಯಾಯಾಲಯಗಳ ಪರಮೋಚ್ಚ ಗುರಿ ನ್ಯಾಯದಾನ ಹಳಿ ತಪ್ಪದಂತೆ ನೋಡಿಕೊಳ್ಳುವುದಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

'ಆರೋಪಿ ಲಾಭದ ಉದ್ದೇಶ ದಿಂದ ಕೊಲೆ ಮಾಡಿದ್ದಾನೆ ಎಂಬು ದನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ. ಈಗಾಗಲೇ ಐಪಿಸಿ ಕಲಂ 392 ಮತ್ತು 397ರ ಅಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆತ ಖುಲಾಸೆಗೊಂಡಿದ್ದು, ಐಪಿಸಿ ಕಲಂ 302ರ ಅಡಿಯಲ್ಲಿ ಶಿಕ್ಷೆ ವಿಧಿಸಿರುವುದು ಸರಿಯಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ನಗರದ ಎಚ್‌ಆರ್‌ಬಿಆರ್ ಬಡಾವಣೆಯಲ್ಲಿ 46 ವರ್ಷದ ತುಳಸಿ ಎಂಬ ಮಹಿಳೆಯ ಮನೆ ಪಕ್ಕದ ನಿವಾಸಿಯಾಗಿದ್ದ ಆರೋಪಿ ಶಿವಪ್ರಸಾದ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ತುಳಸಿ ಪತಿ ದುಬೈನಲ್ಲಿದ್ದು, ಅವರ ಪುತ್ರಿಯ ಜೊತೆ ಬೆಂಗಳೂರಿನಲ್ಲೇ ನೆಲೆಸಿದ್ದರು. ತುಳಸಿಯವರ ಪರಿಚಯ ಸಂಪಾದಿಸಿದ್ದ ಶಿವಪ್ರಸಾದ್ ಆಗಾಗ್ಗೆ ಅವರ ಮನೆಗೆ ಹೋಗಿ ಬರುತ್ತಿದ್ದ.

'ಶಿವಪ್ರಸಾದ್ 2008ರ ಜೂನ್ 27ರಂದು ತುಳಸಿ ಅವರನ್ನು ಕೊಲೆ ಮಾಡಿ ಒಡವೆ ದೋಚಿದ್ದಾನೆ' ಎಂದು ಆರೋಪಿಸಲಾಗಿತ್ತು. ಈ ಸಂಬಂಧ ಬಾಣಸವಾಡಿ ಪೊಲೀಸರು ಶಿವಕುಮಾರ್ ಮೇಲೆ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. 2017ರಲ್ಲಿ ವಿಚಾರಣಾ ನ್ಯಾಯಾಲಯ ಆರೋಪಿಯನ್ನು ದರೋಡೆ ಪ್ರಕರಣದಿಂದ ಮುಕ್ತಿಗೊಳಿಸಿ ಕೊಲೆ ಆರೋಪದಲ್ಲಿ ಜೀವಾವಧಿ ಶಿಕ್ಷೆ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಶಿವಪ್ರಸಾದ್ ಹೈಕೋರ್ಟ್ ಮೆಟ್ಟಿಲೇರಿದ್ದ.

ಸಿಯುಕೆ: ಐವರು ವಿದ್ಯಾರ್ಥಿಗಳ ಅಮಾನತು

ಕಲಬುರಗಿ: ವಿದ್ಯಾರ್ಥಿನಿಯರ ವಸತಿ ನಿಲಯದ ಬಳಿ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಕರ್ನಾಟಕ ಕೇಂದ್ರೀಯ ವಿವಿ ಶಿಸ್ತು ಸಮಿತಿಯು ಐವರು ವಿದ್ಯಾರ್ಥಿಗಳನ್ನು ಅಮಾನತು ಮಾಡಿದೆ. 'ವಿವಿಗೆ ವಿವಿಧ ರಾಜ್ಯಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಅನುಚಿತವಾಗಿ ವರ್ತಿಸುವುದನ್ನು ವಿವಿ ಸಹಿಸುವುದಿಲ್ಲ' ಎಂದು ಕುಲಸಚಿವ ಪ್ರೊ. ಬಸವರಾಜ ಡೋಣೂರ 'ಪ್ರಜಾವಾಣಿ'ಗೆ ತಿಳಿಸಿದರು.

ಕ್ರಿಕೆಟ್ ಬೆಟ್ಟಿಂಗ್: ಆರೋಪಿಗಳ ಬಂಧನ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಆರೋಪಿಯನ್ನು ಬಂಧಿಸಿರುವ ಸಿಸಿಬಿ ವಿಶೇಷ ವಿಚಾರಣಾ ದಳದ ಅಧಿಕಾರಿಗಳು, ₹2.20 ಲಕ್ಷ ನಗದು ಹಾಗೂ ಮೊಬೈಲ್ ಜಪ್ತಿ ಮಾಡಿದ್ದಾರೆ.

'ಆರೋಪಿಯು ಇದೇ 22 ರಂದು ನಡೆದಿದ್ದ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಕಿಂಗ್ಸ್ ಇಲೆವನ್ ಪಂಜಾಬ್ ನಡುವಣ ಪಂದ್ಯದ ಸೋಲು ಗೆಲುವಿನ ಕುರಿತು ಹಣ ಕಟ್ಟಿಸಿಕೊಂಡಿದ್ದ. ಸೋತ ಬೆಟ್ಟರ್‌ಗಳಿಂದ ಹಣ ಸಂಗ್ರಹಿಸಿ ಅದನ್ನು ಗೆದ್ದವರಿಗೆ ನೀಡಲು ಮುಂದಾಗಿದ್ದ. ಈ ವೇಳೆ ಆತನನ್ನು ಅಶೋಕನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮೆಗ್ರಾತ್ ರಸ್ತೆಯ ಬಾರ್ ಬಳಿ ಬಂಧಿಸಲಾಗಿದೆ. ಪ್ರಕರಣ ದಾಖಲಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮತ್ತೊಂದು ಪ್ರತ್ಯೇಕ ಪ್ರಕರಣ: ಮತ್ತೊಂದು ಪ್ರಕರಣದಲ್ಲಿ ಐಪಿಎಲ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ವ್ಯಕ್ತಿಯನ್ನು ಬಂಧಿಸಿರುವ ಚಂದ್ರಾ ಲೇಔಟ್ ಠಾಣೆ ಪೊಲೀಸರು ₹29,800 ನಗದು ಹಾಗೂ ಮೊಬೈಲ್ ಜಪ್ತಿ ಮಾಡಿದ್ದಾರೆ.

ಗೋವಿಂದರಾಜನಗರ ನಿವಾಸಿ ಸುನಿಲ್ (33) ಬಂಧಿತ. ಕ್ರಿಕೆಟ್ ಗುರು ಲೈನ್ ಆ್ಯಪ್‌ನಿಂದ ಬೆಟ್ಟಿಂಗ್ ನಡೆಸುತ್ತಿದ್ದ ವೇಳೆ ಬಂಧನಕ್ಕೊಳಗಾಗಿದ್ದಾನೆ.

ವೃದ್ಧ ಮಾಲೀಕನ ಕೊಲೆ: ಕೆಲಸಗಾರ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಯಾರೂ ಇಲ್ಲದ ಹೊತ್ತಿನಲ್ಲಿ ಕತ್ತು ಹಿಸುಕಿ ವೃದ್ಧರೊಬ್ಬರನ್ನು ಕೊಲೆ ಮಾಡಿದ ಆರೋಪಿ, ಚಿನ್ನ ಹಾಗೂ ಬೆಳ್ಳಿಯ ಆಭರಣಗಳನ್ನು ದೋಚಿ ಪರಾರಿಯಾಗಿದ್ದಾನೆ. ಈ ಸಂಬಂಧ ಚಾಮರಾಜಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಚಿಕ್ಕಪೇಟೆಯ ಎಸ್.ವಿ.ಲೇನ್‌ನಲ್ಲಿರುವ ದೀಪಂ ಎಲೆಕ್ಟ್ರಿಕಲ್ಸ್ ಅಂಗಡಿ ಮಾಲೀಕ ಜುಗರಾಜ್ ಜೈನ್ (74) ಕೊಲೆಯಾದವರು. ಅವರ ಮನೆಯಲ್ಲಿ ಕೆಲಸಕ್ಕಿದ್ದ ಬಿಜರಾಮ್ ನಾಪತ್ತೆಯಾಗಿದ್ದು, ಆತನೇ ಕೊಲೆ ನಡೆಸಿರಬಹುದು ಎಂದು ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ. ಆತನ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆರೋಪಿಯು ರಾಜಸ್ಥಾನದವನು. ಈತನನ್ನು ಜುಗರಾಜ್ ಅವರ ಕಿರಿಯ ಮಗ ಆನಂದ್‌ಕುಮಾರ್ ಆರು ತಿಂಗಳ ಹಿಂದೆ ಕೆಲಸಕ್ಕೆ ನೇಮಿಸಿಕೊಂಡಿದ್ದರು. ಜುಗರಾಜ್ ಅವ


ಜುಗರಾಜ್ ಜೈನ್


ಬಿಜರಾಮ್

ರನ್ನು ಆರೋಪಿಯೇ ನಿತ್ಯವೂ ಮನೆಯಿಂದ ಕಚೇರಿಗೆ, ಕಚೇರಿಯಿಂದ ಮನೆಗೆ ಕರೆದುಕೊಂಡು ಬರುತ್ತಿದ್ದ. ತಾವು ವಾಸವಿದ್ದ ಚಾಮರಾಜಪೇಟೆಯ ವಸತಿ ಸಮುಚ್ಚಯದ ನೆಲಮಹಡಿಯಲ್ಲೇ ಆರೋಪಿಗೆ ತಂಗಲು ವ್ಯವಸ್ಥೆ ಮಾಡಲಾಗಿತ್ತು' ಎಂದು ಹೇಳಿದ್ದಾರೆ.

'ಆನಂದ್ ಕೆಲಸದ ನಿಮಿತ್ತ ಇದೇ 23 ರಂದು ಗೋವಾಗೆ ಹೋಗಿದ್ದರು. ಅವರ ಪತ್ನಿಯು ಮಕ್ಕಳೊಂದಿಗೆ ತವರೂರು ಶಿಕಾರಿಪುರಕ್ಕೆ ತೆರಳಿದ್ದರು. ಇದೇ 24ರಂದು ಜುಗರಾಜ್ ಅಂಗಡಿಯಿಂದ ರಾತ್ರಿ 9.30ರ ಸುಮಾರಿಗೆ ಆರೋಪಿ ಜೊತೆಗೆ ಮನೆಗೆ ಬಂದಿದ್ದರು. ಮೇ 24 ಬೆಳಿಗ್ಗೆ ಆನಂದ್ ಅವರು ತಂದೆಗೆ ಹಲವು ಬಾರಿ ದೂರವಾಣಿ ಕರೆ ಮಾಡಿದರೂ ಸ್ವೀಕರಿಸಿರಲಿಲ್ಲ. ಇದರಿಂದ ಗಾಬರಿಯಾಗಿದ್ದ ಅವರು ಅಕ್ಕನ ಮಗನಿಗೆ ಕರೆ ಮಾಡಿ ಮನೆಗೆ ಹೋಗಿ ನೋಡುವಂತೆ ಸೂಚಿಸಿದ್ದರು. ಬುಧವಾರ ಬೆಳಿಗ್ಗೆ (ಮೇ 25) 10.30ರ ಸುಮಾರಿಗೆ ಮನೆಗೆ ಬಂದಿದ್ದ ಆತ, ಬಾಗಿಲು ತೆರೆಯಲು ಪ್ರಯತ್ನಿಸಿದ್ದ. ಅದು ಸಾಧ್ಯವಾಗದಿದ್ದಾಗ ಕೀ ಮಾಡುವವರನ್ನು ಕರೆಸಿ ಬಾಗಿಲು ತೆರೆಸಿದ್ದರು' ಎಂದು ಮಾಹಿತಿ ನೀಡಿದ್ದಾರೆ.

'ಜುಗರಾಜ್ ಮಲಗುತ್ತಿದ್ದ ಕೋಣೆಯಲ್ಲಿ ಪರಿಶೀಲಿಸಿದಾಗ ಅವರು ಕಂಡಿರಲಿಲ್ಲ. ಸ್ನಾನದ ಕೋಣೆಯಲ್ಲಿ ಅವರ ಮೃತದೇಹ ಪತ್ತೆಯಾಗಿತ್ತು. ಅವರ ಕೈಗಳನ್ನು ಹಗ್ಗದಿಂದ ಬಿಗಿದು ಕಟ್ಟಲಾಗಿತ್ತು. ಬಾಯಿಗೆ ಬಟ್ಟೆ ತುರುಕಲಾಗಿತ್ತು. ಮಲಗುವ ಕೋಣೆಯ ಬೀರು ತೆರೆದು ನೋಡಿದಾಗ ಅದರಲ್ಲಿ ಇಟ್ಟಿದ್ದ ಚಿನ್ನಾಭರಣಗಳು ನಾಪತ್ತೆಯಾಗಿದ್ದವು. ಬಿಜರಾಮ್‌ಗೆ ಕರೆ ಮಾಡಿದಾಗ ಆತನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಆತನೇ ಕೊಲೆ ಮಾಡಿರಬಹುದೆಂದು ಅನುಮಾನ ವ್ಯಕ್ತಪಡಿಸಿ ಜುಗರಾಜ್ ಕುಟುಂಬದವರು ಠಾಣೆಗೆ ದೂರು ನೀಡಿದ್ದಾರೆ' ಎಂದು ವಿವರಿಸಿದ್ದಾರೆ.

ಶಾಲೆ ಮೆಟ್ಟಿಲು, ಗೋಡೆ ಮೇಲೆ 'ಸಾರಿ': ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಂಕದಕಟ್ಟೆಯ ಶಾಂತಿಧಾಮ ವಿದ್ಯಾಸಂಸ್ಥೆ ಶಾಲೆಯ ಮೆಟ್ಟಿಲು, ಗೋಡೆ ಹಾಗೂ ರಸ್ತೆ ಮೇಲೆ 'ಸಾರಿ' ಎಂಬುದಾಗಿ 100ಕ್ಕೂ ಹೆಚ್ಚು ಕಡೆ ಬರೆದಿದ್ದ ಕಿಡಿಗೇಡಿಗಳ ವಿರುದ್ಧ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶಾಂತಿಧಾಮ ಕಾಲೇಜಿನ ಪ್ರಾಂಶುಪಾಲ ನರಸಿಂಹ ಅವರು ದೂರು ನೀಡಿದ್ದು, ಪ್ರಕರಣ ದಾಖಲಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮಧ್ಯರಾತ್ರಿ ಬೈಕ್‌ನಲ್ಲಿ ಬಂದ ಇಬ್ಬರು ಯುವಕರು ಶಾಲೆಯ ಬಳಿ ಬೈಕ್ ನಿಲುಗಡೆ ಮಾಡಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅವರೇ ಈ ರೀತಿ ಮಾಡಿರುವ ಅನುಮಾನವಿದೆ' ಎಂದು ಹೇಳಿದ್ದಾರೆ.


ಸುಂಕದಕಟ್ಟೆ ಶಾಂತಿಧಾಮ ವಿದ್ಯಾಸಂಸ್ಥೆ ಶಾಲೆ ಮೆಟ್ಟಿಲು ಮೇಲೆ 'ಸಾರಿ' ಎಂಬುದಾಗಿ ಬರೆದಿರುವುದು

ಮಂಕಿಪಾಕ್ಸ್ ಪ್ರಕರಣ: ಶಂಕಿತ ಸೋಂಕಿತರನ್ನು ಪ್ರತ್ಯೇಕವಾಗಿರಿಸಿ'

ನವದೆಹಲಿ(ಪಿಟಿಐ): ಮಂಕಿಪಾಕ್ಸ್ ಪ್ರಕರಣಗಳು ಕಂಡುಬಂದಿರುವ ದೇಶಗಳಿಂದ ವಾಪಸ್ಸಾಗಿರುವ ಶಂಕಿತ ಸೋಂಕಿತರ ಮೇಲೆ ನಿಗಾ ವಹಿಸಲು ಆಸ್ಪತ್ರೆಗಳಿಗೆ ನಿರ್ದೇಶನ ನೀಡುವಂತೆ ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೆ ಬುಧವಾರ ಸಲಹೆ ನೀಡಿದೆ. ಈಗಾಗಲೇ ಗುರುತಿಸಲಾಗಿರುವ ಆರೋಗ್ಯ ಕೇಂದ್ರಗಳಲ್ಲಿ ಶಂಕಿತ ಸೋಂಕಿತರನ್ನು ಪ್ರತ್ಯೇಕವಾಗಿರಿಸಲು ಸೂಚಿಸಲಾಗಿದೆ. ವಿಶ್ವದ ವಿವಿಧ ದೇಶಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳು ವರದಿಯಾಗುತ್ತಿರುವ ಬೆನ್ನಲ್ಲೇ, ಕೇಂದ್ರ ಸರ್ಕಾರ ಈ ಸಲಹೆ ನೀಡಿದೆ.

ಕೆನಡಾದಿಂದ ವಾಪಸ್ಸಾಗಿರುವ ವ್ಯಕ್ತಿಯಲ್ಲಿ ಮಂಕಿಪಾಕ್ಸ್ ಸೋಂಕು ಪತ್ತೆಯಾಗಿದ್ದು, ಅವರನ್ನು ಪ್ರತ್ಯೇಕವಾಗಿರಿಸಲಾಗಿದೆ. ಪ್ರಯಾಣಿಕನಿಂದ ಸಂಗ್ರಹಿಸಲಾದ ಮಾದರಿಯನ್ನು ಪುಣೆಯಲ್ಲಿರುವ ರಾಷ್ಟ್ರೀಯ ವೈರಾಣು ಸಂಸ್ಥೆಯಲ್ಲಿ ಪರೀಕ್ಷಿಸಿದ್ದು, ಅವರಿಗೆ ಮಂಕಿಪಾಕ್ಸ್ ಇಲ್ಲ ಎಂಬುದು ದೃಢಪಟ್ಟಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಈ ಪ್ರಯಾಣಿಕ ಯಾವ ವಿಮಾನ ನಿಲ್ದಾಣದಲ್ಲಿ ಬಂದು ಇಳಿದಿದ್ದಾರೆ ಎಂಬ ಮಾಹಿತಿ ಬಹಿರಂಗಪಡಿಸಿಲ್ಲ. ಮಂಕಿಪಾಕ್ಸ್ ಸೋಂಕಿತ ದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ನಿಗಾ ವಹಿಸುವಂತೆ ಅಧಿಕಾರಿಗಳಿಗೆ ಆರೋಗ್ಯ ಸಚಿವಾಲಯ ಸೂಚಿಸಿತ್ತು.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬೆಂಗಳೂರು ನಗರ ವಿಭಾಗ, ಅರಣ್ಯ ಭವನ ಸಂಕೀರ್ಣ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂರವಾಣಿ/ಫ್ಯಾಕ್ಸ್ – 080–23343464 Email ID: dcfurban82@yahoo.co.in

ಸಂಖ್ಯೆ: ಎ9/ಮರ ಕತ್ತಾವಣೆ/ಸಿ.ಆರ್–264/2021–22 ದಿನಾಂಕ: 25.05.2022

ಸಂಕ್ಷಿಪ್ತ ಮರು–ಮಾರಾಟ ಅಧಿಸೂಚನೆ

ಈ ಮೂಲಕ ಸಾರ್ವಜನಿಕರ ಸಾಮಾನ್ಯ ಮಾಹಿತಿಗಾಗಿ ಸೂಚನೆ ನೀಡುವುದೇನೆಂದರೆ ಕಾರ್ಮೆಲಾರಮ್ ನಿಂದ ಬೈಯಪ್ಪನಹಳ್ಳಿ ವಿಭಾಗದ ವರೆಗಿನ ಬಲ ಮತ್ತು ಎಡ ರಸ್ತೆ ಬದಿಯಲ್ಲಿರುವ 540 ಮರಗಳನ್ನು ಬೈಯಪ್ಪನಹಳ್ಳಿ – ಹೊಸೂರು ದ್ವಿಪಥ ಯೋಜನೆಯ ಸಂಬಂಧ ಈ ಕೆಳಗೆ ನಮೂದಿಸಿರುವಂತೆ ಎಂಎಸ್‌ಟಿಸಿ ಲಿಮಿಟೆಡ್ ನ ಆನ್‌ಲೈನ್ ವೇದಿಕೆ 'www.mstcecommerce.com' ಮೂಲಕ ಇ–ಟೆಂಡರ್–ಕಂ–ಹರಾಜು ಮಾದರಿಯಲ್ಲಿ ಮಾರಾಟಮಾಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು (ನಗರ) ವಿಭಾಗ, ಬೆಂಗಳೂರು ಇವರು ಮಾರಾಟ ನಡೆಸುವ ಪ್ರಾಧಿಕಾರ ರಾಗಿರುತ್ತಾರೆ. ಇ–ಟೆಂಡರ್–ಕಂ–ಹರಾಜು ವೆಬ್‌ಸೈಟ್ 'www.mstcecommerce.com' ನಲ್ಲಿ ಅಪ್ ಲೋಡ್ ಮಾಡಲಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಇ –ಟೆಂಡರ್ – ಕಮ್ – ಹರಾಜಿನ ದಿನಾಂಕ : 31ನೇ ಮೇ 2022.
ಮೋಡ್ : online-www.mstcecommerce.com,
ಸಮಯ : ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ,
ಮರಗಳ ಸಂಖ್ಯೆ : 540,
ಅಂದಾಜು ಬೆಲೆ : 20 ಲಕ್ಷಗಿಂತ ಅಧಿಕ,
ಬಿಡ್ಡರುಗಳಿಂದ ಪರಿಶೀಲನೆ : 25.05.2022 ರಿಂದ 30.05.2022, ಬೆಳಿಗ್ಗೆ 11.00 ರಿಂದ ಸಾಯಂಕಾಲ 4.00 ಗಂಟೆ ವರೆಗೆ. ಕಾರ್ಮೆಲಾರಮ್ ನಿಂದ ಬೈಯಪ್ಪನಹಳ್ಳಿ ವಿಭಾಗದ ಎಡ ಮತ್ತು ಬಲ ರಸ್ತೆ ಬದಿಯಲ್ಲಿ.

ಷರತ್ತುಗಳು : (1) ಆಸಕ್ತ ಬಿಡ್ಡರ್ ಗಳು ಎಂಎಸ್ ಟಿಸಿಯಲ್ಲಿ ಸಾಕಷ್ಟು ಮುಂಚಿತವಾಗಿ ನೋಂದಾಯಿಸಿಕೊಳ್ಳಬೇಕು. (2) ಉದ್ದೇಶಿತ ಬಿಡ್ಡರ್ ಗಳು ಅವರ ತೃಪ್ತಿಗಾಗಿ ವಸ್ತುಗಳನ್ನು ಪರಿಶೀಲಿಸಲು ಸೂಚಿಸಲಾಗಿದೆ. (3) ಮಾರಾಟಕ್ಕಾಗಿ ಇರಿಸಲಾದ ಪ್ರತಿ ವರ್ಗದ ಪಕ್ಕದಲ್ಲಿ ಸೂಚಿಸಲಾದ ಪ್ರಮಾಣವು ಅಂದಾಜುಆಗಿದೆ. (4) ಪ್ರತಿಯೊಬ್ಬ ನೋಂದಾಯಿತ ಬಿಡ್ಡರ್ ಗಳು ಎಲ್ಲಾ ಲಾಟ್ ಗಳಿಗೆ ಅಥವಾ ಯಾವುದೇ ಲಾಟ್ ಗೆ ರೂ. 25,000/– ಇಎಂಡಿ ಪಾವತಿಸಬೇಕು. (5) ಕಪ್ಪು ಪಟ್ಟಿಗೆ ಸೇರಿದ ಬಿಡ್ಡರ್ ಗಳು, ಸುಸ್ತಿದಾರರು, ಅಪ್ರಾಪ್ತರು, ದಿವಾಳಿಯಾಗಿರುವ ವ್ಯಕ್ತಿಗಳಿಗೆ ಮಾರಾಟದಲ್ಲಿ ಭಾಗವಹಿಸಲು ಅನುಮತಿ ಇರುವುದಿಲ್ಲ. (6) ವಿವರವಾದ ಮಾರಾಟ ಷರತ್ತುಗಳನ್ನು www.mstcecommerce.com ನಿಂದ ಡೌನ್ ಲೋಡ್ ಮಾಡುವುದು.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು.
DIPR/CP/658/Zenkar/2022-23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ
ಸಂಖ್ಯೆ: ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–2,3,4/ಕು.ನೀ.ಸ.ಯೋ/ಟೆಂಡರ್–11/2022–23/653 ದಿ: 21–05–2022

ಪ್ರೊಕ್ಯೂರ್‌ಮೆಂಟ್ ರೀತ್ಯಾ ದ್ವಿ–ಲಕೋಟೆ ಮಾದರಿಯ ಮರು ಟೆಂಡರ್ ಪ್ರಕಟಣೆ ಸಂಖ್ಯೆ: 11/2022–23

ಉಲ್ಲೇಖ: 1) ನಂ. ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ–ಪಿಬಿ–2,3,4, /ಕು.ನೀ.ಸ.ಯೋ/ಕೆಡ್ಬ್ಲ್ಯು–1/ಟೆಂಡರ್–85/2021–22/7129 ದಿ:21–03–2022

ಮೇಲಿನ ಉಲ್ಲೇಖ (1) ರಡಿ ಈ ಕಚೇರಿಯ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರು ಅಲ್ಪಾವಧಿ ಟಿಎಂಡರ್ ಆಹ್ವಾನಿಸಲಾಗಿದೆ. ಸೇವೆಯ ಹೆಸರು: ಸನ್ 2021–22ನೇ ಸಾಲಿನ ಜಲ ಜೀವನ್ ಮಿಷನ್ ಅಡಿಯಲ್ಲಿ ಮಾಹಿತಿ ಹಾಗೂ ಸಂವಹನ (IEC) ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಚಟುವಟಿಕೆಗಳನ್ನು ನಿರ್ವಹಿಸಲು ನುರಿತ ಅನುಷ್ಠಾನ ಬೆಂಬಲ ಸಂಸ್ಥೆಗಳನ್ನು (ISRA) ಒದಗಿಸುವುದು (RWS/DIV/BGM/JJM/ISRA/Empanelment/17/Call-2)

1) ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ, ಬೆಳಗಾವಿ ಇವರ ಕಚೇರಿಯಲ್ಲಿ ದಿನಾಂಕ: **30–05–2022** ಬೆಳಿಗ್ಗೆ 11:30 ಗಂಟೆಯವರೆಗೆ 2) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ: 06–06–2022 ಸಾಯಂಕಾಲ 17:30 ಗಂಟೆಯವರೆಗೆ** 3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 08–06–2022 ಸಾಯಂಕಾಲ 11:00 ಗಂಟೆ** ನಂತರ 4) ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದಿಸಿದ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-procurement portal www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ. ವಿಭಾಗ, ಬೆಳಗಾವಿ
DIPO/RO No. 280/2021-22

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

EDUCATION SUCCESS ಕ್ಲಾಸಿಫೈಡ್ಸ್





PUBLIC NOTICE

ಸಾರ್ವಜನಿಕ ಸೂಚನೆ

ನಾವು, ಆಪರ್ಚುನಿಟಿ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್, ನೇಮಕಾತಿ ಏಜೆಂಟ್ ನೋದಣಿ ಸಂಖ್ಯೆ: **B1140/ KAR/COM/100/ 5/9848/2021** ದಿನಾಂಕ 22 ಫೆಬ್ರವರಿ 2021, ವಲಸೆ ಕಾಯಿದೆ 1983 ಅಡಿಯಲ್ಲಿ ಸಾಗರೋತ್ತರ ಮಾನವಶಕ್ತಿ ನಿಯೋಜನೆಗಾಗಿ ತಕ್ಷಣವೇ ಜಾರಿಗೆ ಬರುವಂತೆ ನಮ್ಮ ನೇಮಕಾತಿ ವ್ಯವಹಾರವನ್ನು ಮುಚ್ಚಿದ್ದೇವೆ. ನಮ್ಮ ವಿರುದ್ಧ ಯಾವುದೇ ದೂರು ಇದ್ದಲ್ಲಿ, ಈ ಸೂಚನೆಯನ್ನು ಪ್ರಕಟಿಸಿದ 30 ದಿನಗಳಲ್ಲಿ ಅದನ್ನು ಉಲ್ಲೇಖಿಸಬಹುದು. ದೂರಿನ ಪ್ರತಿಗಳನ್ನು ದಿ ಪ್ರೊಟೆಕ್ಟರ್ ಜನರಲ್ ಆಫ್ ಎಮಿಗ್ರಂಟ್ಸ್, ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ, ಅಕ್ಬರ್ ಭವನ, ಸತ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ 110 021 ವಿಳಾಸಕ್ಕೆ ಕಳುಹಿಸಬಹುದು.

ದಿನಾಂಕ: 25.05.2022
ಸ್ಥಳ: ಬೆಂಗಳೂರು
ವ್ಯವಸ್ಥಾಪಕ ನಿರ್ದೇಶಕರು
ಆಪರ್ಚುನಿಟಿ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ 1612, ಮೊದಲ ಮಹಡಿ, ಕೋಗಿಲು ಮುಖ್ಯ ರಸ್ತೆ ಮಾರುತಿ ನಗರ, ಯಲಹಂಕ ಬೆಂಗಳೂರು 560064, ಕರ್ನಾಟಕ

PUBLIC NOTICE

My Clients have negotiated with Mrs. Kiran Devi, W/o Mr. Ravindranath, No.86, Maruthi Layout, Geddalahalli, Kothanur Post, Bangalore-560077 for the purchase of the Immovable Property comprising of Land with building thereon consisting of Site No.19/2A, Khata No. 162/1 now bearing Corporation No. 658/19/2A, situated in Kothanur Village, K.R.Puram Hobli, Bangalore East Taluk, Bangalore, bounded on the East by Property belongs to K.R.Ganesh Gowda, West by Property belongs to K.T. Venkatesh, North by Property belongs to Venkataswamy and South by Road, measuring East to West 30 feet, North to South 59 feet, measuring 1770 Sq. ft.

Any person or persons having/asserting any right, title, interest claims or intending to oppose the purchase in any manner may file their objections to the undersigned within TEN DAYS from the date of publication of notice hereof with documentary proof whereafter no such claims will be entertained and my clients will proceed with the purchase of the said property.

(SYED TANVEER AHMED)
Advocate
No. 14, Wellington Street, Richmond Town, Bangalore-560025
Date: 25-05-2022 Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

JOB OPPORTUNITIES

Drivers

WANTED DRIVER, Minimum Qualification SSLC, Salary Around 15000/- Per Month. Contact: 9591512191

Multiple Vacancy

REQUIRED TEAMLEADER, TELECALLER, & FIELD EXECUTIVE For Banking Loan collection (salary 20k). direct recruitment to company Contact:- 9620206756, 9620200756.

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn upto 40,000/- Contact: 9741401834

REAL ESTATE SELLING

House

Magadi Road

3,200 SQ.FT, West Facing Residential Property is for Sale at Magadi Road Housing Board. Contact: 6362961311/9901050888

Vijayanagar

2,655 SQ.FT, West Facing Property is for Sale at Industries & Commerce Layout, Vijayanagar. Contact: 6362961311/ 9901050888

Industrial & Factory

Tumkur Road

SALE, COMMERCIAL converted land, 39200 sqft. Suitable for Hotel, Hospital, Petrol Station, any showroom. 9141326819

PERSONAL

Change of Name

I, R.C. PATIL S/o Channa Basappa Gowda R/a-#72, 1st Main Road, RHCS Layout, Annapoorneshwari Nagar, Bangalore- 560091 Declare That R.C. PATIL and RAMANA GOWDA PATIL and RAMANAGOWDA CHANNABASAPPA GOWDA PATIL above all Names Pertaining to me Only, Henceforth Known as R.C PATIL Vide Affidavit Dated 23-05-2022 Before Notary H.R.Karunakara Bengaluru

WE, FATHER Suresh Shankaranarayana Rao and Mother Sandhya Prakash residing at #328, 37th B Cross, 9th Block Jayanagar, Bangalore-560069 have changed our minor Son's name from Amogh Suresh Srivatsa to Amogh Srivatsa vide affidavit dated 25.05.2022 Sworn before Notary Aravind Patil G.G. Bangalore.

I, MERCY JAMES W/o James Anthony residing at #8, 12th Main, Sonappa Block, 3rd Stage, Pillanna Garden, Venkateshpuram, Bengaluru-560045 have changed my name to MERCY SHANTHI .D vide affidavit dated 25.05.2022 sworn before notary B.V.Nagabhushana, Bangalore-91.

DHANA DEVI M/o JC-674067L- NB/SUB-BHOOP NARAYAN KUSHWAHA R/a Kahanv, Deoria, UP changed name from DHANA DEVI to DHANAVANTI notary B.M.Chandrashekar, Bangalore.

I, NAGESH K.V, residing at No. 93, Konadaspura Village, Virgo Nagar Post, Bangalore East, Bangalore 560049, have changed my minor son's name from SHRIYAAN K.N to SHRIYAAN NANDA K.N, vide affidavit dated 18.05.2022 before Notary I. Kanikha Raja, Bangalore. Henceforth he shall be known as SHRIYAAN NANDA K.N. only

JC671790F SUB/MT MITTANA VENKATARAO 2ATC Daughter Name records SUSMITA REDDY Instead of MITTANA SUSHMITA REDDIKA Notary HARISHA G Bangalore

WE, G. CHANDANA (Mother) and G. RANGANADH (Father), residing at Door No.2-528/5, S.K.D. Nagar, Piler Town & Mandal, Chittoor District of A.P., have changed our minor son's name from G.N.S. MOKSHITH to GANTA MOKSHITH NAGASAI vide affiliated dated 23.05.2022, sworn before notary P.Showkath Ali, Piler, A.P.

GOKHULA KUSHWAHA F/o JC-674067L– NB/SUB-BHOOP NARAYAN KUSHWAHA R/a Kahanv, Deoria, UP changed name from GOKHULA KUSHWAHA to GOKHULA notary B.M.Chandrashekar, Bangalore.

CONNECT ಕ್ಲಾಸಿಫೈಡ್ಸ್





AUTOMOTIVE

Four Wheelers Selling

Ford

FOR SALE Ford Figo Diesel Car run 98,000 km, Model:2012. Quoting, Rs.1.75 Lakhs. Contact:9538995333

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 1 Lakhs: 9606701007/ 8892501007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189



ಪರಿಷ್ಕೃತ ಪಠ್ಯಕ್ಕೆ ಸಾಹಿತಿಗಳು, ಚಿಂತಕರು, ಶಿಕ್ಷಣ ತಜ್ಞರಿಂದ ಆಕ್ಷೇಪ

ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ವಜಾಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯನ್ನು ರದ್ದುಗೊಳಿಸಿ, ಎಲ್ಲ ಶಿಫಾರಸುಗಳನ್ನು ತಿರಸ್ಕರಿಸಬೇಕು. ಈ ಹಿಂದಿನ ಪಠ್ಯಗಳನ್ನೇ ಮುಂದುವರಿಸಬೇಕು.'

ಇವು ಸಾಹಿತಿಗಳು, ಚಿಂತಕರು ಹಾಗೂ ಶಿಕ್ಷಣ ತಜ್ಞರ ಒಕ್ಕೊರಲ ಆಗ್ರಹ. ಜಾಗೃತ ನಾಗರಿಕರು ಕರ್ನಾಟಕ ಸಂಘಟನೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ 'ಪಠ್ಯಪುಸ್ತಕ ರಚನೆ, ಪರಿಷ್ಕರಣೆ–ಮರು ಪರಿಷ್ಕರಣೆ' ಬಗ್ಗೆ ಸಮಾಲೋಚನೆ ಸಭೆ ನಡೆಸಿತು.

ಡಾ.ಕೆ.ಮರುಳಸಿದ್ದಪ್ಪ, ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಎಚ್.ಎಸ್. ರಾಘವೇಂದ್ರ ರಾವ್, ರಾಜೇಂದ್ರ ಚೆನ್ನಿ, ವಸುಂಧರಾ ಭೂಪತಿ, ಬಿ.ಟಿ. ಲಲಿತಾ ನಾಯಕ್, ಟಿ.ಆರ್. ಚಂದ್ರಶೇಖರ್, ಪ್ರಜ್ವಲ್ ಶಾಸ್ತ್ರಿ, ವಿ.ಪಿ. ನಿರಂಜನಾರಾಧ್ಯ, ಬಂಜಗೆರೆ ಜಯಪ್ರಕಾಶ್, ಮಾವಳ್ಳಿ ಶಂಕರ್, ಇಂದೂಧರ ಹೊನ್ನಾಪುರ, ಬಿ. ರಾಜಶೇಖರಮೂರ್ತಿ, ಬಿ. ಶ್ರೀಪಾದ್ ಭಟ್ ಮತ್ತಿತರರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

'ಕೋವಿಡ್‌ನಿಂದಾಗಿ ಎರಡು ವರ್ಷಗಳಿಂದ ಮಕ್ಕಳ ಕಲಿಕೆ ನಷ್ಟವಾಗಿದೆ. ಇಂತಹ ಬಿಕ್ಕಟ್ಟಿನಲ್ಲಿ ಪಠ್ಯಕ್ರಮ ಪರಿಷ್ಕರಣೆಯಂತಹ ಅನಗತ್ಯ ಪ್ರಯೋಗಗಳಿಗೆ ಕೈಹಾಕಬಾರದಿತ್ತು. ಪರಿಷ್ಕರಣೆಯಿಂದ ಕಲಿಕೆಯ ನಷ್ಟ ಇನ್ನಷ್ಟು ಹೆಚ್ಚಲಿದೆ. ಹೀಗಾಗಿ, ಪರಿಷ್ಕರಣೆ ಸಮಿತಿಯ ಅರ್ಹತೆಯ ವಿವಿಧ ನೆಲೆಗಳನ್ನು ಪ್ರಶ್ನಿಸಬೇಕು. ಅನಗತ್ಯವಾಗಿ ಮರು ಪರಿಷ್ಕರಣೆಗೆ ಅವಕಾಶ ಕಲ್ಪಿಸಿದ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ರಾಜೀನಾಮೆಗೆ ಒತ್ತಾಯಿಸಬೇಕು. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಈ ಪಠ್ಯಕ್ರಮವನ್ನು ಮನಸೋ ಇಚ್ಛೆ ಬದಲಾಯಿಸಲು ಅವಕಾಶ ಇಲ್ಲದ ವ್ಯವಸ್ಥೆ ಜಾರಿಗೆ ಬರಬೇಕು' ಎಂಬ ಅಭಿಪ್ರಾಯ ವ್ಯಕ್ತವಾಯಿತು.

'ಸಾಮಾಜಿಕ ನ್ಯಾಯವನ್ನು ಪಾಲಿಸುವ, ಲಿಂಗ ಸಮಾನತೆಯನ್ನು ಗೌರವಿಸುವ, ಬಹುಸಂಸ್ಕೃತಿ ಮತ್ತು ಕನ್ನಡದ ಅಸ್ಮಿತೆಯನ್ನು ಒಳಗೊಂಡ ಮಾದರಿ ಪಠ್ಯ ಕ್ರಮವನ್ನು ರೂಪಿಸಬೇಕು' ಎಂದು ತಜ್ಞರು ಸಲಹೆ ನೀಡಿದರು.

ನಿರಂಜನಾರಾಧ್ಯ, 'ಹಿಂದೆ ಪುಸ್ತಕ ಬರೆದವರೆಲ್ಲ ದೇಶದ್ರೋಹಿಗಳು, ಈಗ ಬರೆದವರು ದೇಶ ಪ್ರೇಮಿಗಳು ಎಂದು ಬಿಂಬಿಸುವುದು ಸರಿಯಲ್ಲ. ಪಠ್ಯ ಪರಿಷ್ಕರಣೆಯ ನೇತೃತ್ವವನ್ನು ಎನ್‌ಸಿಇಆರ್‌ಟಿ ಮತ್ತು ಡಿಎಸ್‌ಇಆರ್‌ಟಿ ವಹಿಸಬೇಕು. ಆದರೆ, ಹಾಲಿ ಸಮಿತಿಯಲ್ಲಿ ಎನ್‌ಸಿಇಆರ್‌ಟಿ, ಡಿಎಸ್‌ಇಆರ್‌ಟಿ ಪ್ರತಿನಿಧಿಗಳಿಲ್ಲ. ಪಠ್ಯಪುಸ್ತಕದ ಪರಿಷ್ಕರಣೆಯ ಚರ್ಚೆಯು ಸಂವಿಧಾನ ಪರ ಮತ್ತು ಸಂವಿಧಾನ ವಿರೋಧಿಗಳ ಗುಂಪಿನ ಸಂಘರ್ಷ ದಂತಿದೆ' ಎಂದರು.

ಟಿ.ಆರ್. ಚಂದ್ರಶೇಖರ್, 'ಕರ್ನಾಟಕದ ಶಿಕ್ಷಣ ವ್ಯವಸ್ಥೆ ಪ್ರಯೋಗ ಮಾಡುವ ಸ್ಥಿತಿಯಲ್ಲಿಲ್ಲ. ಶಿಕ್ಷಣವನ್ನು ಬಲ ಪಡಿಸುವ ಬಗ್ಗೆ ಯೋಚನೆ ಮಾಡಬೇಕು. ಪ್ರಯೋಗಗಳನ್ನು ಬಿಟ್ಟು, ಶಿಕ್ಷಣ ವಂಚಿತ ಮಕ್ಕಳ ಭವಿಷ್ಯ ಕಟ್ಟಬೇಕು' ಎಂದರು.

ಬಂಜಗೆರೆ ಜಯಪ್ರಕಾಶ, 'ಶಿಕ್ಷಣ ಹಾಗೂ ಪಠ್ಯದ ಜತೆಗೆ ಕುಚೇಷ್ಟೆ ಮಾಡಲಾಗುತ್ತಿದೆ. ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಾಗೂ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ವಜಾ ಮಾಡಬೇಕು' ಎಂದು ಆಗ್ರಹಿಸಿದರು.



ಸಭೆಯಲ್ಲಿ ಎಚ್.ಎಸ್. ರಾಘವೇಂದ್ರ ರಾವ್ ಮಾತನಾಡಿದರು. (ಎಡದಿಂದ) ಶ್ರೀಪಾದ್ ಭಟ್, ಬಂಜಗೆರೆ ಜಯಪ್ರಕಾಶ್, ಪ್ರೊ.ರಾಜೇಂದ್ರ ಚೆನ್ನಿ, ಮರುಳಸಿದ್ದಪ್ಪ ಹಾಗೂ ವಿ.ಪಿ. ನಿರಂಜನಾರಾಧ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

'ಶಿಕ್ಷಣದಿಂದ ವಂಚಿಸುವ ಹುನ್ನಾರ'

'ಶಿಕ್ಷಣ ವ್ಯವಸ್ಥೆ ಕುಸಿದಲ್ಲಿ ಸಾಮಾಜಿಕ ಬದುಕು ಕೂಡ ಕುಸಿಯುತ್ತದೆ. ಸಹಸ್ರಾರು ವರ್ಷಗಳಿಂದ ಶಿಕ್ಷಣ ವಂಚಿತವಾದ ಸಮುದಾಯಗಳು 70 ವರ್ಷಗಳ ಅವಧಿಯಲ್ಲಿ ಕಡ್ಡಾಯ ಶಿಕ್ಷಣದಿಂದ ಬೆಳಕು ಕಂಡಿದ್ದವು. ಈಗ ಆ ಬೆಳಕನ್ನು ಆರಿಸಲಾಗುತ್ತಿದೆ. ಹಾಲಿ ಸಮಿತಿಯನ್ನು ವಜಾಗೊಳಿಸಬೇಕು' ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಆಗ್ರಹಿಸಿದರು.

ಲೇಖಕಿ ವಸುಂಧರಾ ಭೂಪತಿ, 'ಮಹಿಳಾ, ದಲಿತ, ಮುಸ್ಲಿಂ ಸಂವೇದನೆ ಪರಿಷ್ಕೃತ ಪಠ್ಯಗಳಲ್ಲಿಲ್ಲ. ಮಹಿಳಾ ಪ್ರಾತಿನಿಧ್ಯವನ್ನು ಕಡೆಗಣಿಸಲಾಗಿದೆ. ಬನ್ನಂಜೆ ಗೋವಿಂದಾಚಾರ್ಯರ 'ಸುಖನಾಥನ ಉಪದೇಶ' ಅಧ್ಯಾಯದಲ್ಲಿ ಲಕ್ಷ್ಮೀ ಬಗ್ಗೆ ಕೆಟ್ಟದಾಗಿ ವರ್ಣಿಸಲಾಗಿದೆ. ಕೀಳು ಮಟ್ಟದಲ್ಲಿ ಹೆಣ್ಣನ್ನು ಬಿಂಬಿಸುವ ಪಠ್ಯ ಅದಾಗಿದೆ. ಅದನ್ನು ರದ್ದುಮಾಡಬೇಕು' ಎಂದು ಒತ್ತಾಯಿಸಿದರು.

ಸಿದ್ಧಾಂತಗಳನ್ನು ಅವಸರದಲ್ಲಿ ಹೇರುವ ಪ್ರಕ್ರಿಯೆ ನಡೆಯುತ್ತಿದೆ. ಪಠ್ಯವು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಇರಬೇಕು. ಪಠ್ಯದಲ್ಲಿ ತಪ್ಪಿದ್ದರೆ ತಿರಸ್ಕರಿಸುವ ಕೆಲಸ ಆಗಬೇಕು

ರಾಜೇಂದ್ರ ಚೆನ್ನಿ, ವಿಮರ್ಶಕ

ಮನೆಗೆ ಮತ್ತು ಮನಸ್ಸಿಗೆ ಬೆಂಕಿ ಹಚ್ಚುವ ಕೆಲಸ ಒಟ್ಟಿಗೆ ನಡೆಯುತ್ತಿದೆ. ಪರಿಷ್ಕೃತ ಪಠ್ಯಕ್ಕೆ ಪೂರಕ ಪಠ್ಯ ನಿರ್ಮಾಣ ಮಾಡುವ ಅವಕಾಶ ನಮಗಿದ್ದು, ಅದನ್ನು ಮಾಡೋಣ.

ಎಚ್.ಎಸ್. ರಾಘವೇಂದ್ರರಾವ್, ವಿಮರ್ಶಕ

ಪಠ್ಯಪುಸ್ತಕದಲ್ಲಿ ಪ್ರಾದೇಶಿಕವಾದಕ್ಕೆ ತಕರಾರು: ಕರವೇ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾದೇಶಿಕವಾದದಿಂದ ರಾಷ್ಟ್ರದ ಏಕತೆ ಮತ್ತು ಹಿತಾಸಕ್ತಿಗಳಿಗೆ ಧಕ್ಕೆಯಾಗುತ್ತದೆ ಎಂದು ಪಠ್ಯಪುಸ್ತಕಗಳಲ್ಲಿ ಉಲ್ಲೇಖಿಸಿರುವುದಕ್ಕೆ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಆಕ್ಷೇಪ ವ್ಯಕ್ತಪಡಿಸಿದೆ.

10ನೇ ತರಗತಿಯ ಪರಿಷ್ಕರಣೆಗೊಂಡಿರುವ ಪಠ್ಯಪುಸ್ತಕದಲ್ಲಿ ಹೊಸ ಆವೃತ್ತಿಯ ರಾಜ್ಯಶಾಸ್ತ್ರ ವಿಷಯದ 'ಭಾರತಕ್ಕಿರುವ ಸವಾಲುಗಳು ಹಾಗೂ ಅವುಗಳ ಪರಿಹಾರೋಪಾಯಗಳು' ಕುರಿತು ಅಧ್ಯಾಯದಲ್ಲಿ ಪ್ರಾದೇಶಿಕವಾದದ ಬಗ್ಗೆ ಪ್ರಸ್ತಾಪಿಸಲಾಗಿದೆ.

'ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನೇ ಅತ್ಯಂತ ಗಾಢವಾಗಿ ಪ್ರೀತಿಸಿ, ಕೇವಲ ಆ ಭಾಗದ ಬಗ್ಗೆಯೇ ಅತಿಯಾದ ಅಭಿಮಾನವನ್ನು ಬೆಳೆಸಿಕೊಂಡರೆ ಅದನ್ನು ಪ್ರಾದೇಶಿಕವಾದ ಎಂದು ಕರೆಯಬಹುದು. ಭಾರತದಂತಹ ವಿಶಾಲ ರಾಷ್ಟ್ರ ಸಹಜವಾಗಿ ಹಲವಾರು ಪ್ರಾದೇಶಿಕ ವಿಭಿನ್ನತೆಯನ್ನು ಹೊಂದಿದ ದೇಶ. ಒಂದು ನಿರ್ದಿಷ್ಟ ಹಂತದವರೆಗೆ ಈ ಪ್ರಾದೇಶಿಕವಾದ ಸಹನೆಗೆ ಯೋಗ್ಯ ಎನಿಸುತ್ತದೆ. ತಮ್ಮದೇ ಪ್ರದೇಶದ ಸರ್ವತೋಮುಖ ಬೆಳವಣಿಗೆಗೆ ಪ್ರಯತ್ನಿಸಲು ಈ ಭಾವನೆ ಪ್ರೇರಣೆ ನೀಡುತ್ತದೆ. ಆದರೆ, ಈ ಪ್ರಾದೇಶಿಕ ಮನೋಭಾವ ತೀರಾ ಹೆಚ್ಚು ಎನಿಸಿದರೆ ಅದು ರಾಷ್ಟ್ರದ ಏಕತೆ ಹಾಗೂ ಹಿತಾಸಕ್ತಿಗಳಿಗೆ ಧಕ್ಕೆ ಒದಗಿಸುತ್ತದೆ. ಆದುದರಿಂದ ಆಯಾ ಪ್ರದೇಶದ ಜನಸಮುದಾಯ ತಮ್ಮದೇ ಪ್ರಾದೇಶಿಕ ಮನೋಭಾವ ಹೊಂದುವ ಜೊತೆ ಜೊತೆಗೇ ಸಮಗ್ರ ದೇಶದ ಪ್ರಗತಿಯ ಬಗೆಗೂ ಚಿಂತನೆ ಹರಿಸುವಿಕೆ ಅತ್ಯಗತ್ಯ' ಎಂದು ಪಠ್ಯದಲ್ಲಿ ವಿವರಿಸಲಾಗಿದೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ, 'ಭಾಷಾ ಅಭಿಮಾನ, ಪ್ರಾದೇಶಿಕವಾದ ದೇಶ ಎದುರಿಸುತ್ತಿರುವ ಸಮಸ್ಯೆಗಳು. ರಾಷ್ಟ್ರವಾದಕ್ಕೆ ಇವು ಕಂಟಕ ಎಂದು ಪಠ್ಯಪುಸ್ತಕದಲ್ಲಿ ಸೇರಿಸಲಾಗಿದೆ. ನಾಡದ್ರೋಹಿಗಳಷ್ಟೇ ಇಂಥ ವಾದ ಮಾಡುತ್ತಾರೆ. ಕನ್ನಡತನ ಎಂಬುದು ಭಾರತೀಯತೆಗೆ ಪೂರಕವೇ ಹೊರತು ಮಾರಕವಲ್ಲ' ಎಂದು ಪ್ರತಿಪಾದಿಸಿದ್ದಾರೆ.

'ಭಾಷಾಭಿಮಾನ ರಾಷ್ಟ್ರೀಯತೆಯ ಶತ್ರು ಎಂದು ಹೇಳುವ ಪಠ್ಯವನ್ನು ಕನ್ನಡಿಗರು ಯಾಕೆ, ಹೇಗೆ ಸಹಿಸಿಕೊಳ್ಳಬೇಕು? ಮ. ರಾಮಮೂರ್ತಿ, ಅ.ನ. ಕೃಷ್ಣರಾಯರು, ಡಾ.ರಾಜಕುಮಾರ್ ಸೇರಿದಂತೆ ಕನ್ನಡ ಚಳವಳಿ ಕಟ್ಟಿಬೆಳೆಸಿದ ಸಾವಿರಾರು ಮಹಾನಾಯಕರಿಗೆ ಮಾಡಿದ ಅವಮಾನವಿದು. ಪ್ರಾದೇಶಿಕವಾದವು ದೇಶದ ಸಮಸ್ಯೆ ಎಂದು ಬಿಂಬಿಸಿರುವ ಪಾಠವನ್ನು ಈ ಕೂಡಲೇ ಕಿತ್ತುಹಾಕಬೇಕು' ಎಂದು ಆಗ್ರಹಿಸಿದ್ದಾರೆ.

ಪಠ್ಯಪುಸ್ತಕ: ಗೊಂದಲ ನಿವಾರಣೆಗೆ ಆಗ್ರಹ

ಬೆಂಗಳೂರು: ಶಾಲಾ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲ ನಿವಾರಿಸಲು ಮಧ್ಯಸ್ಥಿಕೆ ವಹಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಆಗ್ರಹಿಸಿದೆ.

ಈ ಬಗ್ಗೆ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಅವರು ಮಹೇಶ ಜೋಶಿಗೆ ಪತ್ರ ಬರೆದಿದ್ದಾರೆ. 'ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಕೆಲವು ಶಿಫಾರಸುಗಳ ಬಗ್ಗೆ ಕೆಲ ಸಾಹಿತಿಗಳು, ಚಿಂತಕರು, ವಕೀಲರು ವಿರೋಧ ವ್ಯಕ್ತಪಡಿಸಿದ್ದಾರೆ. ಬ್ರಾಹ್ಮಣ್ಯ ಮತ್ತು ಶೂದ್ರರ ಪಠ್ಯಗಳೆಂದು ಪರಸ್ಪರ ಗುದ್ದಾಡುವ ಪರಿಸ್ಥಿತಿ ಬಂದಿರುವುದು ನಾಡಿನ ದುರ್ದೈವ. ಇಲ್ಲಿನ ಮಕ್ಕಳಿಗೆ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ, ರಾಜ್ಯ ಮತ್ತು ದೇಶದ ಏಳ್ಗೆಗೆ ದುಡಿದ ಮಹನೀಯರ ಜೀವನದ ಶ್ರೇಷ್ಠತೆ ಸಾರುವ ವಿಷಯಗಳನ್ನು ಪಠ್ಯಪುಸ್ತಕದಲ್ಲಿ ಜಾತ್ಯತೀತವಾಗಿ ಪರಿಚಯ ಮಾಡುವ ಬದಲು, ಶ್ರೇಷ್ಠರೆನಿಸಿಕೊಂಡಿರುವ ಬುದ್ಧಿವಂತರು ಬೀದಿ ಕಾಳಗ ಮಾಡುತ್ತಿರುವುದು ಶೋಚನೀಯ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಏಳು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಮಧ್ಯ ಪ್ರವೇಶಿಸಿ, ಈ ವಿವಾದಕ್ಕೆ ತೆರೆ ಎಳೆಯಬೇಕು. ಶಿಕ್ಷಣದ ಗುಣಮಟ್ಟಕ್ಕೆ ತಕ್ಕಂತೆ ಪರಿಷ್ಕರಣೆ ಮಾಡಲು ಸೂಚಿಸಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಜೆಡಿಎಸ್‌ನ ಶರವಣ ಶ್ರೀಮಂತ ಅಭ್ಯರ್ಥಿ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಕಣದಲ್ಲಿರುವ ಏಳು ಅಭ್ಯರ್ಥಿಗಳ ಪೈಕಿ, ಜೆಡಿಎಸ್‌ನ ಟಿ.ಎ. ಶರವಣ ಅತ್ಯಂತ ಶ್ರೀಮಂತ ಅಭ್ಯರ್ಥಿ. ನಂತರದ ಸ್ಥಾನದಲ್ಲಿ ಬಿಜೆಪಿಯ ಲಕ್ಷ್ಮಣ ಸವದಿ ಇದ್ದಾರೆ.

ಶರವಣ ಅವರು ಸುಮಾರು ₹ 41.55 ಕೋಟಿಯ ಆಸ್ತಿ ಘೋಷಿಸಿದರೆ, ಲಕ್ಷ್ಮಣ ಸವದಿ ತಮ್ಮ ಬಳಿ ಸುಮಾರು ₹ 36.37 ಕೋಟಿ ಆಸ್ತಿ ಇರುವುದಾಗಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ತಾವು ₹ 8 ಕೋಟಿಯ ಸಾಲ ಹೊಂದಿದ್ದು, ಕುಟುಂಬದ ಬಳಿ ₹ 10.98 ಕೋಟಿ ಮೌಲ್ಯದ ಚರಾಸ್ತಿ ಇದೆ. ಅದರಲ್ಲಿ ₹ 89 ಲಕ್ಷ ಮೌಲ್ಯದ ಆಭರಣಗಳಿವೆ ಎಂದು ಶರವಣ ತಿಳಿಸಿದ್ದಾರೆ. ₹ 6.48 ಕೋಟಿಯ ಚರಾಸ್ತಿ ಹೊಂದಿರುವ ಸವದಿ, ₹ 1.81 ಕೋಟಿ ಸಾಲವೂ ಎಂದು ಘೋಷಿಸಿಕೊಂಡಿದ್ದಾರೆ.

ಉಳಿದಂತೆ ಕಾಂಗ್ರೆಸ್‌ನ ನಾಗರಾಜ್ ಯಾದವ್ ಚರಾಸ್ತಿ ಮತ್ತು ಸ್ಥಿರಾಸ್ತಿ ಸೇರಿ ಸುಮಾರು ₹ 7.20 ಕೋಟಿ ಆಸ್ತಿ ಹೊಂದಿದ್ದರೆ, ಅದೇ ಪಕ್ಷದ ಅಬ್ದುಲ್ ಜಬ್ಬಾರ್ ಅವರು ₹ 6.95 ಕೋಟಿ ಆಸ್ತಿ ಹೊಂದಿದ್ದಾರೆ. ನಾಗರಾಜ್ ಅವರು ₹ 3.10 ಲಕ್ಷ ಮತ್ತು ಜಬ್ಬಾರ್ ₹ 71.36 ಲಕ್ಷ ಸಾಲ ಇದೆ ಎಂದೂ ತಿಳಿಸಿದ್ದಾರೆ.

ಬಿಜೆಪಿಯ ಕೇಶವ ಪ್ರಸಾದ್ ₹ 4.04 ಕೋಟಿ, ಛಲವಾದಿ ನಾರಾಯಣಸ್ವಾಮಿ ₹ 6.33 ಕೋಟಿ, ಹೇಮಲತಾ ನಾಯಕ್ ₹ 70.80 ಲಕ್ಷದ ಆಸ್ತಿ ಇದೆ. ಈ ಪೈಕಿ ಕೇಶವ ಪ್ರಸಾದ್ ₹ 13.50 ಲಕ್ಷ ಸಾಲ ಹೊಂದಿದ್ದರೆ, ಉಳಿದವರು ಯಾವುದೇ ಸಾಲ ಇಲ್ಲ ಎಂದು ತಿಳಿಸಿದ್ದಾರೆ.

ಬಿಜೆಪಿ ಮುಖಂಡ ಆತ್ಮಹತ್ಯೆ: ಗೆಳತಿಗೆ ಜಾಮೀನು

ಬೆಂಗಳೂರು: ಹೆರೋಹಳ್ಳಿ ವಾರ್ಡ್‌ನ ಬಿಜೆಪಿ ಮುಖಂಡ ಬಿ.ಪಿ.ಅನಂತರಾಜು (46) ಆತ್ಮಹತ್ಯೆ ಪ್ರಕರಣ ಸಂಬಂಧ ಬಂಧನಕ್ಕೊಳಗಾಗಿದ್ದ ರೇಖಾ (38) ಎಂಬುವರಿಗೆ ಸೆಷನ್ಸ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಕೆ.ಆರ್.ಪುರ ನಿವಾಸಿಯಾದ ರೇಖಾ ತನ್ನ ಪತಿಯನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿದ್ದರು. ಹೀಗಾಗಿಯೇ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಆರೋಪಿಸಿ ಅನಂತರಾಜು ಪತ್ನಿ ದೂರು ನೀಡಿದ್ದರು. ರೇಖಾ ಅವರ ಪತಿ ವಿನೋದ್, ಗೆಳತಿ ಸ್ಪಂದನಾಗೆ ನಿರೀಕ್ಷಣಾ ಜಾಮೀನು ಲಭಿಸಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಗ್ರರ ಗುಂಡಿಗೆ ಕಲಾವಿದೆ ಬಲಿ

ಶ್ರೀನಗರ (ಪಿಟಿಐ): ಮಹಿಳೆಯೊಬ್ಬರನ್ನು ಉಗ್ರರು ಗುಂಡಿಕ್ಕಿ ಕೊಂದಿರುವ ಘಟನೆ ಜಮ್ಮು ಮತ್ತು ಕಾಶ್ಮೀರದ ಬದ್ಗಾಮ್ ಜಿಲ್ಲೆಯಲ್ಲಿ ಬುಧವಾರ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತ ಮಹಿಳೆಯನ್ನು ಕಿರುತೆರೆ ಕಲಾವಿದೆ ಅಮ್ರೀನ್ ಭಟ್ ಎಂದು ಗುರುತಿಸಲಾಗಿದೆ. ಅಮ್ರೀನ್ ಜಿಲ್ಲೆಯ ಚಡೂರ ಪ್ರದೇಶದ ಹುಶ್ರೂ ನಿವಾಸಿ. ಅಮ್ರೀನ್ ಅವರ ಮನೆಯ ಬಳಿಯೇ ಉಗ್ರರು ಅವರ ಮೇಲೆ ರಾತ್ರಿ 8 ಗಂಟೆಗೆ ಗುಂಡಿನ ದಾಳಿ ನಡೆಸಿದ್ದಾರೆ. ದಾಳಿ ವೇಳೆ ಅಮ್ರೀನ್ ಜೊತೆ ಅವರ ಸೋದರ ಸಂಬಂಧಿ ಫರಾನ್ ಝುಬೈರ್ ಕೂಡಾ ಗಾಯಗೊಂಡಿದ್ದರು. ಅಮ್ರೀನ್ ಅವರನ್ನು ಚಡೂರದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರು ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದರು.

ತಾಜ್ಯ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರಕ್ಕೆ ಒತ್ತಾಯ

ಕಸ ಸಮಸ್ಯೆ: ಪ್ರಧಾನಿಗೆ ನಟ ಅನಿರುದ್ಧ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಕಸ ವಿಲೇವಾರಿ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಒತ್ತಾಯಿಸಿ ನಟ ಅನಿರುದ್ಧ ಜತ್ಕರ್ ಅವರು ಪ್ರಧಾನಿ ಕಚೇರಿಗೆ ಪತ್ರ ಬರೆದಿದ್ದಾರೆ.

ಪತ್ರದ ಪ್ರತಿಯನ್ನು ಅನಿರುದ್ಧ ತಮ್ಮ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ. 'ಸ್ವಚ್ಛತೆ, ನಗರದ ಸೌಂದರ್ಯ ಹಾಗೂ ಪರಿಸರ ಸಂರಕ್ಷಣೆ ಹಾಗೂ ಜನರ ಸುರಕ್ಷತೆಗಾಗಿ ಪ್ರತ್ಯೇಕ ಸಚಿವಾಲಯದ ಅವಶ್ಯಕತೆ ಇದೆ' ಎಂದು ಆಗ್ರಹಿಸಿದ್ದಾರೆ.



ಅನಿರುದ್ಧ ಜತ್ಕರ್

ಎರಡು ವರ್ಷಗಳಿಂದ '#ಸ್ವಚ್ಛತೆಗಾಗಿ ನಾನೂ ಸಹಭಾಗಿ' ಎಂಬ ಹ್ಯಾಷ್‌ಟ್ಯಾಗ್ ನಡಿ ರಸ್ತೆಯಲ್ಲಿ ಎಸೆದಿರುವ ಕಸದ ಚಿತ್ರ ಹಾಗೂ ವಿಡಿಯೊಗಳನ್ನು ಅನಿರುದ್ಧ ಅವರು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದಾರೆ. ಈ ಅಭಿಯಾನದಡಿ ಹಲವರು ಇದೇ ಹ್ಯಾಷ್‌ಟ್ಯಾಗ್ ಬಳಸಿ ತಮ್ಮ ನಗರಗಳಲ್ಲಿನ ಕಸ ನಿರ್ವಹಣೆ ಲೋಪವನ್ನು ಸ್ಥಳೀಯ ಆಡಳಿತ ಸಂಸ್ಥೆಯ ಮುಂದಿಡುತ್ತಿದ್ದಾರೆ.

'ಬೆಂಗಳೂರಿನಲ್ಲಿ ಹದಗೆಟ್ಟಿರುವ ಕಸ ನಿರ್ವಹಣೆಯ ಬಗ್ಗೆ ತಮ್ಮ ಗಮನಸೆಳೆಯಲು ಈ ಪತ್ರ ಬರೆದಿದ್ದೇನೆ. ನಗರದ ಬಹುತೇಕ ರಸ್ತೆಗಳು ಕಸದ ತೊಟ್ಟಿಯಂತಾಗಿದ್ದು, ನಗರದ ಸೌಂದರ್ಯವನ್ನು ಕೆಡಿಸುವುದಲ್ಲದೆ ಜನರ ಆರೋಗ್ಯಕ್ಕೂ ಇವು ಹಾನಿಕರವಾಗಿವೆ. ಕಸ ಸುರಿದಿರುವ ಚಿತ್ರಗಳನ್ನು ಅಪ್‌ಲೋಡ್ ಮಾಡಿದ ಬಳಿಕ ಬಿಬಿಎಂಪಿ ಆ ಸ್ಥಳಗಳನ್ನು ಸ್ವಚ್ಛ ಮಾಡುತ್ತಿದೆ. ಆದರೆ, ಕೆಲ ದಿನಗಳಲ್ಲಿ ಅದೇ ಸ್ಥಳ ಮತ್ತೆ ಕಸದ ತೊಟ್ಟಿಯಾಗುತ್ತಿದೆ. ಈ ಅಭಿಯಾನದ ಜತೆಗೆ ಪಾದಚಾರಿ ಮಾರ್ಗದ ಒತ್ತುವರಿ, ತಡೆಗೋಡೆಗಳಿಲ್ಲದ ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ '#ಸುರಕ್ಷತೆಗಾಗಿ ನಾನೂ ಸಹಭಾಗಿ' ಮತ್ತು '#ಸೌಂದರ್ಯಕ್ಕಾಗಿ ನಾನೂ ಸಹಭಾಗಿ' ಎಂಬ ಅಭಿಯಾನವನ್ನೂ ನಾನು ಆರಂಭಿಸಿದ್ದೆ. ಈ ಎಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರದ ಅಗತ್ಯವಿದ್ದು, ಪ್ರತ್ಯೇಕ ಸಚಿವಾಲಯಗಳಿದ್ದರಷ್ಟೇ ಇವು ಸಾಧ್ಯ' ಎಂದು ಅನಿರುದ್ಧ ಅವರು ಪತ್ರದಲ್ಲಿ ವಿವರಿಸಿದ್ದಾರೆ.

ರಫ್ತು ಮೇಲಿನ ತೆರಿಗೆ ಹೆಚ್ಚಳ: ಮತ್ತೆ ಸಂಕಷ್ಟಕ್ಕೆ ಸಿಲುಕಿದ ಗಣಿ ಉದ್ಯಮಿಗಳು

ರಾಜ್ಯದ ಅದಿರು ರಫ್ತು ಪ್ರಕ್ರಿಯೆಗೆ ಹಿನ್ನಡೆ

• ಹೊನಕೆರೆ ನಂಜುಂಡೇಗೌಡ

ಮುಖ್ಯಾಂಶಗಳು

- 1 ಕೋಟಿ ಟನ್‌ಗೂ ಅಧಿಕ ಅದಿರು ದಾಸ್ತಾನು
- ಕೇಂದ್ರಕ್ಕೆ ಮೊರೆ ಹೋಗಲಿರುವ 'ಫಿಮಿ'
- ಸಿ ವರ್ಗದ ಗಣಿಗಳಲ್ಲೂ 10 ಲಕ್ಷ ಟನ್ ಅದಿರು

ಪ್ರಜಾವಾಣಿ ವಿಶೇಷ

ಬಳ್ಳಾರಿ: ಅದಿರು ರಫ್ತಿಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿರುವುದರ ಹಿಂದೆಯೇ ಕೇಂದ್ರ ಸರ್ಕಾರ ಅದಿರು ರಫ್ತು ಮೇಲಿನ ತೆರಿಗೆ ಏರಿಸಿರುವುದರಿಂದ ರಾಜ್ಯದ ಗಣಿಗಳಲ್ಲಿ ದಶಕದಿಂದ ಬಿದ್ದಿರುವ ಸುಮಾರು ಒಂದು ಕೋಟಿ ಟನ್ ಅದಿರು ರಫ್ತು ಪ್ರಕ್ರಿಯೆ ಪುನರಾರಂಭಕ್ಕೆ ಹಿನ್ನಡೆಯಾಗಿದೆ. ಇದರಿಂದ ಗಣಿ ಉದ್ಯಮಿಗಳು ಮತ್ತೆ ಸಂಕಷ್ಟಕ್ಕೆ ಸಿಕ್ಕಿದ್ದಾರೆ.

ಅದಿರು ರಫ್ತಿಗೆ ಸುಪ್ರೀಂ ಕೋರ್ಟ್ ಹಸಿರು ನಿಶಾನೆ ತೋರಿಸಿದ ಮರು ದಿನವೇ ಕಾಕತಾಳೀಯ ಎಂಬಂತೆ ಕೇಂದ್ರ ಸರ್ಕಾರ ಅದಿರು ರಫ್ತು ಮೇಲಿನ ತೆರಿಗೆ ಏರಿಸಿದೆ. ಅದಿರು ರಫ್ತಿನ ಮೇಲಿನ ತೆರಿಗೆ ಈ ಮೊದಲು ಶೇ 30ರಷ್ಟಿತ್ತು. ಈಗ ಅದನ್ನು ಶೇ 50ಕ್ಕೆ ಏರಿಸಲಾಗಿದೆ. ಈ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಮನವಿ ಮಾಡಿ 'ಭಾರತೀಯ ಖನಿಜ ಉದ್ಯಮಗಳ ಒಕ್ಕೂಟ' (ಎಫ್‌ಐಎಂಐ–ಫಿಮಿ) ಪ್ರಧಾನ ಮಂತ್ರಿಗೆ ಪತ್ರ ಬರೆಯಲು ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಗಣಿಗಳಲ್ಲಿ ವ್ಯಾಪಕ ಅಕ್ರಮಗಳು ನಡೆದ ಕಾರಣಕ್ಕೆ 2011ರಲ್ಲಿ ಅದಿರು ರಫ್ತು ನಿಷೇಧಿಸಲಾಗಿತ್ತು. ಅಂದಿನಿಂದ 'ಫಿಮಿ' ಅದಿರು ರಫ್ತಿಗೆ ಅನುಮತಿ ನೀಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸಿತ್ತು.

ಗಣಿ ಬಾಧಿತ ಮೂರು ಜಿಲ್ಲೆಗಳಲ್ಲಿ ನಡೆದಿರುವ ಅಕ್ರಮಗಳ ಪ್ರಮಾಣದ ಆಧಾರದಲ್ಲಿ ಗಣಿಗಳನ್ನು ಎ, ಬಿ ಮತ್ತು ಸಿ ಎಂದು ವರ್ಗೀಕರಿಸಲಾಗಿದ್ದು, ಎ ಮತ್ತು ಬಿ ವರ್ಗದ ಗಣಿಗಳಲ್ಲಿ 2022ರ ಮಾರ್ಚ್ 31ರವರೆಗೆ ಸುಮಾರು 83 ಲಕ್ಷ ಟನ್ ಅದಿರು ದಾಸ್ತಾನಿದೆ. ಗುತ್ತಿಗೆ ಅವಧಿ ಮುಗಿದು ಮರು ಹರಾಜಾದ ಎ ಹಾಗೂ ಬಿ ವರ್ಗದ ಗಣಿಗಳಲ್ಲಿ 2.33 ಲಕ್ಷ ಟನ್ ಅದಿರು ದಾಸ್ತಾನಿದೆ ಎಂದು 'ಫಿಮಿ' ಮೂಲಗಳು ತಿಳಿಸಿವೆ. ವ್ಯಾಪಕ ಅಕ್ರಮಗಳಿಗೆ ಸಾಕ್ಷಿಯಾದ ಸಿ ವರ್ಗದ ಗಣಿಗಳಲ್ಲಿ 12.25 ಲಕ್ಷ ಟನ್ ಅದಿರಿದೆ. ಈ ಅದಿರು ಸರ್ಕಾರದ ವಶದಲ್ಲಿದ್ದು, ಅದರ ಮಾರಾಟ ಅಧಿ ಕಾರವೂ ಸರ್ಕಾರಕ್ಕಿದೆ. ಇ–ಹರಾಜಿನ ಮೂಲಕ ಮಾರಾಟ ಮಾಡುವುದೇ ಇಲ್ಲವೆ ಬೇರೆ ವಿಧಾನ ಅನುಸರಿಸುವುದೇ ಎಂಬುದು ಇನ್ನಷ್ಟೇ ತಿಳಿಯಬೇಕಿದೆ.

ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ ಹೊರಗೆ ಅಂದರೆ ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲೂ ಅದಿರು ದಾಸ್ತಾನಿದೆ. 2022ರ ಮಾರ್ಚ್ 31ರವರೆಗೆ ರಾಜ್ಯದಲ್ಲಿ ಸುಮಾರು 1.20ಕೋಟಿ ಟನ್ ಅದಿರು ದಾಸ್ತಾನಿದ್ದು, ಕೇಂದ್ರ ಸರ್ಕಾರ ರಫ್ತು ಮೇಲಿನ ತೆರಿಗೆ ಕಡಿಮೆ ಮಾಡದಿದ್ದರೆ ಗಣಿಗಳಲ್ಲೇ ಅದಿರು ಉಳಿಯಲಿದೆ ಎಂಬುದು ಗಣಿ ಉದ್ಯಮಿಗಳ ಆತಂಕ.

ಕೇಳುವವರಿಲ್ಲದೆ ಬಿದ್ದಿದೆ ಅದಿರು!

ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಗಣಿ ಗುತ್ತಿಗೆ ಪರವಾನಗಿಗಳ ಪೈಕಿ 15ಕ್ಕೂ ಹೆಚ್ಚಿನ ಗಣಿಗಳಲ್ಲಿ 1 ಲಕ್ಷ ಟನ್‌ನಿಂದ ಹಿಡಿದು 25 ಲಕ್ಷ ಟನ್‌ವರೆಗೆ ಅದಿರು ದಾಸ್ತಾನಿದೆ.

ಎ ಹಾಗೂ ಬಿ ಗಣಿಗಳಲ್ಲೇ 1 ಕೋಟಿ ಟನ್ ಅದಿರು ದಾಸ್ತಾನಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.



ಬಳ್ಳಾರಿ ಜಿಲ್ಲೆಯ ಅದಿರು ಗಣಿಯೊಂದರ ಸಂಗ್ರಹ ಚಿತ್ರ

ಅದಿರು ರಫ್ತಿನ ಮೇಲಿನ ತೆರಿಗೆ ಹೆಚ್ಚಿಸಿರುವುದರಿಂದ ಪ್ರತಿಕೂಲ ಪರಿಣಾಮ ಆಗಲಿದೆ. ಫಿಮಿ ಕೇಂದ್ರ ಸಮಿತಿಯು ಕೇಂದ್ರ ಸರ್ಕಾರದ ಜತೆ ಚರ್ಚಿಸಲಿದೆ

ಖಯೂಂ ಅಲಿ, ಫಿಮಿ ಬೆಂಗಳೂರು

ಹಣದುಬ್ಬರ ನಿಯಂತ್ರಿಸಲು ಸರ್ಕಾರ ರಫ್ತು ತೆರಿಗೆ ಹೆಚ್ಚಿಸಿದೆ. ಮುಂಬರುವ ದಿನಗಳಲ್ಲಿ ಕಡಿಮೆ ಗುಣಮಟ್ಟದ ಅದಿರಿನ ಮೇಲಿನ ತೆರಿಗೆ ಇಳಿಸಬಹುದು

ವಸಂತ ಪೊದ್ದಾರ್, ಫಿಮಿ ಸದಸ್ಯ

ಮತ್ತೆ ಸಿಐಡಿ ವಶಕ್ಕೆ ಆರ್‌.ಡಿ. ಪಾಟೀಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪಿಎಸ್‌ಐ ಅಕ್ರಮದ ಪ್ರಮುಖ ಆರೋಪಿ
- ಏಳು ದಿನಗಳ ಕಾಲ ವಶಕ್ಕೆ ಪಡೆದ ಅಧಿಕಾರಿಗಳು

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದ ಪ್ರಮುಖ ಆರೋಪಿ ಅಫಜಲಪುರ ತಾಲ್ಲೂಕು ಸೊನ್ನ ಗ್ರಾಮದ ಆರ್‌.ಡಿ. ಪಾಟೀಲ ಅವರನ್ನು ಸಿಐಡಿ ಅಧಿಕಾರಿಗಳು ಮತ್ತೆ ಏಳು ದಿನ ವಶಕ್ಕೆ ಪಡೆದಿದ್ದಾರೆ.

ಕಲಬುರಗಿಯ ಎಂ.ಎಸ್. ಇರಾನಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪಿಎಸ್‌ಐ ಪರೀಕ್ಷೆಯಲ್ಲಿ ಬ್ಲೂಟೂತ್ ಮೂಲಕ ಅಕ್ರಮ ನಡೆಸಲು ನೆರವಾದ ಆರೋಪದ ವಿಚಾರಣೆಗಾಗಿ ಮತ್ತೆ ವಶಕ್ಕೆ ಪಡೆಯಲಾಗಿದೆ ಎಂದು ಸಿಐಡಿ ಅಧಿಕಾರಿಗಳು ತಿಳಿಸಿದ್ದಾರೆ.

ಸಿಐಡಿಯಿಂದ ಬಂಧಿತರಾಗಿದ್ದ ಆರ್‌.ಡಿ. ಪಾಟೀಲ ಅವರನ್ನು ವಿಚಾ ರಣೆಯ ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆಯ ಜೂನಿಯರ್ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್ ಪರೀಕ್ಷೆಯಲ್ಲಿ ನಡೆದ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಆರ್‌.ಡಿ. ಪಾಟೀಲರನ್ನು ವಶಕ್ಕೆ ತೆಗೆದು ವಿಚಾ ರಣೆಗೆ ಕರೆದೊಯ್ದಿದ್ದರು.

ಬೆಂಗಳೂರು ಪೊಲೀಸರು ವಿಚಾರಣೆ ಪೂರ್ಣಗೊಳಿಸಿದ ನಂತರ ಆರ್‌.ಡಿ. ಪಾಟೀಲರನ್ನು ತಮ್ಮ ವಶಕ್ಕೆ ನೀಡುವಂತೆ ಸಿಐಡಿ ಅಧಿಕಾರಿಗಳು ಇಲ್ಲಿನ ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿದ್ದರು. ನ್ಯಾಯಾಧೀಶ ಸಂತೋಷ ಶ್ರೀವಾಸ್ತವ ಅವರು ಆರೋಪಿಯನ್ನು ಏಳು ದಿನ ಸಿಐಡಿ ಕಸ್ಟಡಿಗೆ ನೀಡಿದ್ದಾರೆ.

'ಎಂ.ಎಸ್. ಇರಾನಿ ಕಾಲೇಜಿನ ಕೇಂದ್ರದಲ್ಲಿ ನಗರದ ಪ್ರಭು ಎಂಬ ಅಭ್ಯರ್ಥಿ ಬ್ಲೂಟೂತ್ ಬಳಸಿ ಪರೀಕ್ಷೆ ಬರೆದಿದ್ದ. ಆತನ ಹೆಸರು ಪಿಎಸ್‌ಐ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿತ್ತು. ಸಿಐಡಿ ಅಧಿಕಾರಿಗಳು ಬಂಧಿಸಿ ವಿಚಾರಣೆ ನಡೆಸಿದಾಗ ಈ ಕೃತ್ಯದಲ್ಲಿ ಆರ್‌.ಡಿ. ಪಾಟೀಲ ಪಾತ್ರ ಇರುವುದರ ಬಗ್ಗೆ ಬಾಯಿ ಬಿಟ್ಟಿದ್ದ. ಹೀಗಾಗಿ, ಪಾಟೀಲ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಸಿಐಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಆರ್‌.ಡಿ. ಪಾಟೀಲ

ಎಂ.ಎಸ್.ಇರಾನಿ ಪರೀಕ್ಷಾ ಕೇಂದ್ರದಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಈಗಾಗಲೇ ಅಭ್ಯರ್ಥಿ ಪ್ರಭು, ಆತನ ತಂದೆ ಶರಣಪ್ಪ ಹಾಗೂ ಈ ವ್ಯವಹಾರಕ್ಕೆ ನೆರವು ನೀಡಿದ ಆರೋಪದ ಮೇರೆಗೆ ಆರ್‌.ಡಿ. ಪಾಟೀಲ ಲೆಕ್ಕ ಪರಿಶೋಧಕ ಚಂದ್ರ ಕಾಂತ ಕುಲಕರ್ಣಿ ಅವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಪುತ್ರನ ಪಬ್‌ಜಿ ಗೀಳಿಗೆ ತಾಯಿ ಬಲಿ

ಚಿಕ್ಕಮಗಳೂರು: ಪುತ್ರನ ಪಬ್‌ಜಿ ಆಟದ ಗೀಳು ತಾಯಿಯನ್ನು ಬಲಿ ಪಡೆದ ಘಟನೆ ತಾಲ್ಲೂಕಿನ ಗಿರಿಶ್ರೇಣಿಯ ಅಗಲಖಾನ್ ಎಸ್ಟೇಟ್‌ನಲ್ಲಿ ಮಂಗಳವಾರ ನಡೆದಿದೆ.

ಪತಿ ಇಮ್ತಿಯಾಜ್ ಗುಂಡಿಗೆ ಮೈಮುನ್ನಾ ಬಲಿಯಾಗಿದ್ದಾರೆ. ಎಸ್ಟೇಟ್ ಮಾಲೀಕ ಸಿ.ಎಸ್. ಪವನ್ ಪೊಲೀಸರಿಗೆ ದೂರು ನೀಡಿದ್ದಾರೆ.

ಇಮ್ತಿಯಾಜ್‌ಗೆ ತೋಟದಲ್ಲಿನ ಕಿತ್ತಳೆ ಹಣ್ಣುಗಳ ನಿಗಾ ಕೆಲಸ ವಹಿಸಿದ್ದರು. ಇಮ್ತಿಯಾಜ್‌ಗೆ ಗುತ್ತಿಗೆದಾರ ತೌಫೀಕ್ ಬಂದೂಕು ಕೊಟ್ಟಿದ್ದರು. 'ಯಾವಾಗಲೂ ಪಬ್ ಜಿ ಆಟದಲ್ಲಿ ತೊಡಗಿರುತ್ತೀಯಾ' ಎಂದು ಪುತ್ರನಿಗೆ ಇಮ್ತಿಯಾಜ್ ಅವರು ಮಂಗಳವಾರ ಕೋವಿ ಹಿಡಿದು ಜೋರು ಮಾಡುವಾಗ ಮೈಮುನ್ನಾ ಮಧ್ಯ ಪ್ರವೇಶಿಸಿದ್ದಾರೆ. ಪುತ್ರನ ಪರ ವಹಿಸುತ್ತೀಯಾ ಎಂದು ಪತ್ನಿಗೆ ಇಮ್ತಿಯಾಜ್ ಗುಂಡು ಹಾರಿಸಿದ್ದಾರೆ. ತಕ್ಷಣವೇ ಅವರನ್ನು ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು. ಮೈಮುನ್ನಾ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು. ಆರೋಪಿಗಳಾದ ಇಮ್ತಿಯಾಜ್ ,ತೌಫಿಕ್‌ರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಏರೋಕಾನ್' ಸಮ್ಮೇಳನ ಜೂನ್ 2ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ವೈಮಾಂತರಿಕ್ಷ ಸಮ್ಮೇಳನವು ಜೂನ್ 2 ಮತ್ತು 3ರಂದು ಬೆಂಗಳೂರಿನಲ್ಲಿ ನಡೆಯಲಿದೆ.

'ಎಸ್‌ಎಇ ಇಂಡಿಯಾ' ಆಯೋಜಿಸಿರುವ ಈ ಸಮ್ಮೇಳನವು ಎರಡನೇಯ ಆವೃತ್ತಿಯಾಗಿದೆ. ಎಚ್‌ಎಎಲ್ ಮ್ಯಾನೇಜ್‌ಮೆಂಟ್ ಅಕಾಡೆಮಿ ಹಾಗೂ 'ಎಸ್‌ಎಇ ಇಂಟರ್‌ನ್ಯಾಷನಲ್' ಸಹಭಾಗಿತ್ವದಲ್ಲಿ ಈ ಸಮ್ಮೇಳನ ಆಯೋಜಿಸಲಾಗಿದೆ.

ವೈಮಾಂತರಿಕ್ಷ ವಲಯದಲ್ಲಿನ ಪ್ರಮುಖ ಬೆಳವಣಿಗೆಗಳು, ಸವಾಲುಗಳು ಮತ್ತು ಅವಕಾಶಗಳು ಹಾಗೂ ಕೋವಿಡ್ ನಂತರದ ಉದ್ಯಮದ ಭವಿಷ್ಯದ ಕುರಿತು ಸಮ್ಮೇಳನದಲ್ಲಿ ಪ್ರಮುಖವಾಗಿ ತಜ್ಞರು ಚರ್ಚಿಸಲಿದ್ದಾರೆ. ವೈಮಾಂತರಿಕ್ಷ ವೃತ್ತಿಪರರಿಗೆ ಹಾಗೂ ರಾಷ್ಟ್ರೀಯ ರಕ್ಷಣಾ ಪ್ರಯೋಗಾಲಯಗಳ ತಜ್ಞರಿಗೆ ಈ ಸಮ್ಮೇಳನವು ಹಲವು ಅವಕಾಶಗಳನ್ನು ಒದಗಿಸಲಿದೆ.

'2020ರಲ್ಲಿ ನಡೆಸಿದ ಸಮ್ಮೇಳನ ಯಶಸ್ವಿಯಾಗಿತ್ತು. ಈ ಬಾರಿ ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್, ಎಲೆಕ್ಟ್ರಿಕ್ ಮೊಬಿಲಿಟಿ, ರೊಬೊಟಿಕ್ಸ್ ಸೇರಿದಂತೆ ಉದ್ಯಮದಲ್ಲಿನ ಪ್ರಸ್ತುತ ಬೆಳವಣಿಗೆ ಹಾಗೂ ಡ್ರೋನ್‌ಗಳ ಬಗ್ಗೆ ಸಮ್ಮೇಳನದಲ್ಲಿ ಚರ್ಚೆಗಳು ನಡೆಯಲಿವೆ' ಎಂದು ಎಸ್‌ಇಎ ಇಂಡಿಯಾ ಉಪ ಮಹಾನಿರ್ದೇಶಕ ವೆಂಕಟಗಿರಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬೋಯಿಂಗ್ ಇಂಡಿಯಾ ಮುಖ್ಯ ಎಂಜಿನಿಯರ್ ಅಹ್ಮದ್ ಎಲ್ಬೆರ್ಬಿನಿ, 'ಏರೋಕಾನ್–2022ನಲ್ಲಿ ಅತ್ಯುತ್ತಮ ತಜ್ಞರು, ಸಂಶೋಧಕರು ಪಾಲ್ಗೊಳ್ಳಲಿದ್ದಾರೆ. ಭಾರತದಲ್ಲಿನ ವೈಮಾನಿಕ ಕ್ಷೇತ್ರವು ಸಾಧಿಸುತ್ತಿರುವ ಪ್ರಗತಿಯಲ್ಲಿ ನಾವು ಸಹಭಾಗಿತ್ವ ಹೊಂದಲು ಹೆಮ್ಮೆ ಪಡುತ್ತೇವೆ' ಎಂದರು.



ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಕೊಡಿಗೇಹಳ್ಳಿಯಲ್ಲಿ ಗ್ರಾಮದೇವತೆಯ ಪೂಜಾ ಮಹೋತ್ಸವ ಹಾಗೂ ಊರಹಬ್ಬ ವಿಜೃಂಭಣೆಯಿಂದ ನಡೆಯಿತು.

ಪುಟ್ಟೇನಹಳ್ಳಿ ಜಂಕ್ಷನ್ ಕೆಳ ಸೇತುವೆ: 10 ವರ್ಷ ಹಳೆಯ ಬಿಲ್ ಪಾವತಿಗೆ ಸೂಚನೆ

ವರದಿ ಪರಿಣಾಮ

ಬೆಂಗಳೂರು: ಬಿಬಿಎಂಪಿ 10 ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದ ಪುಟ್ಟೇನಹಳ್ಳಿ ಜಂಕ್ಷನ್‌ನಲ್ಲಿ ಕೆಳ ಸೇತುವೆ (ಜಿ.ಆರ್.ವಿಶ್ವನಾಥ್ ಕೆಳಸೇತುವೆ) ಕಾಮಗಾರಿಯ ಅಂತಿಮ ಬಿಲ್ ಅನ್ನು ಎಂಜಿನಿಯರಿಂಗ್ ಪ್ರಾಜೆಕ್ಟ್ಸ್ (ಇಂಡಿಯಾ) ಲಿಮಿಟೆಡ್ ಸಂಸ್ಥೆಗೆ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಬಿಬಿಎಂಪಿಗೆ ಸೂಚಿಸಿದೆ.

ಈ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಮಂಗಳವಾರ (ಮೇ 24) ಪತ್ರ ಬರೆದಿದ್ದಾರೆ. ಬಿಬಿಎಂಪಿಯು ಈ ಕಾಮಗಾರಿಯನ್ನು ಕೇಂದ್ರ ಸರ್ಕಾರ ಸ್ವಾಮ್ಯದ ಮಿನಿರತ್ನ ಸಂಸ್ಥೆಯಾದ ಇಪಿಐಗೆ 2008ರಲ್ಲಿ ಗುತ್ತಿಗೆ ನೀಡಿತ್ತು. ಕಾಮಗಾರಿಗೆ ಸಂಬಂಧಿಸಿದ ₹7.48 ಕೋಟಿ ಬಾಕಿ ಬಿಲ್ ಅನ್ನು ಪಾವತಿಸುವಂತೆ ಒತ್ತಾಯಿಸಿ ಇಪಿಐ ಸಂಸ್ಥೆಯ ಹಿರಿಯ (ತಾಂತ್ರಿಕ) ವ್ಯವಸ್ಥಾಪಕ ಎಂ.ತಾವಸಿ ರಾಜನ್ ಅವರು ಪಾಲಿಕೆಯ ಮುಖ್ಯ ಆಯುಕ್ತರಿಗೆ ಮೇ 5ರಂದು ಪತ್ರ ಬರೆದಿದ್ದರು. 'ಗುತ್ತಿಗೆ ಕರಾರಿಗೆ ಅನುಗುಣವಾಗಿಯೇ ಎಲ್ಲ ಕಾಮಗಾರಿ ಪೂರ್ಣಗೊಳಿಸಿದರೂ ಹಳೆ ಬಾಕಿ ಪಾವತಿ ಆಗಿಲ್ಲ' ಎಂದಿದ್ದರು.

ಈ ಪ್ರಕರಣದ ಬಗ್ಗೆ 'ಪ್ರಜಾವಾಣಿ'ಯು '**10 ವರ್ಷ ಹಳೆಯ ಬಿಲ್ ಬಾಕಿ:** ಇಪಿಐ–ಬಿಬಿಎಂಪಿ ತಿಕ್ಕಾಟ' ಶೀರ್ಷಿಕೆಯಡಿ ಮೇ 6ರಂದು ವಿಶೇಷ ವರದಿ ಪ್ರಕಟಿಸಿತ್ತು.

ಕಾಬೂಲ್‌ನಲ್ಲಿ ಸ್ಫೋಟ: 14 ಸಾವು

ಇಸ್ಲಾಮಾಬಾದ್(ಎಪಿ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿರುವ ಮಸೀದಿಯಲ್ಲಿ ಸೇರಿದಂತೆ ಹಲವೆಡೆ ಬುಧವಾರ ಸರಣಿ ಬಾಂಬ್ ಸ್ಫೋಟಗಳು ಸಂಭವಿಸಿದ್ದು, ಪ್ರಾರ್ಥನೆ ಸಲ್ಲಿಸುತ್ತಿದ್ದ ಐವರು ಸೇರಿದಂತೆ ಕನಿಷ್ಠ 14 ಮಂದಿ ಮೃತಪಟ್ಟಿದ್ದಾರೆ.

ಬುಧವಾರ ಸಂಜೆ ವೇಳೆಗೆ ಪ್ರಾರ್ಥನೆ ನಡೆಯುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಬಾಂಬ್ ಸ್ಫೋಟದಲ್ಲಿ ಸಿಲುಕಿದ್ದ 22 ಮಂದಿ ಸಂತ್ರಸ್ತರನ್ನು ಕಾಬೂಲ್‌ನ ತುರ್ತು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಾಲಿಬಾನ್ ಪೊಲೀಸ್ ವಕ್ತಾರ ತಿಳಿಸಿದ್ದಾರೆ.

ಬಿಬಿಎಂಪಿ ಅಧಿಕಾರಿಗಳಿಗೆ ವಸತಿ ಸಚಿವ ವಿ.ಸೋಮಣ್ಣ ಎಚ್ಚರಿಕೆ

ನೀರು ನುಗ್ಗದ ಮನೆಗೆ ಪರಿಹಾರ ನೀಡಿದರೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಶ್ಚಿಮ ವಲಯದಲ್ಲಿ 1,369 ಮನೆಗಳಿಗೆ ನೀರು ನುಗ್ಗಿ ತೊಂದರೆ ಆಗಿರುವುದನ್ನು ಗುರುತಿಸಲಾಗಿದೆ. ಅವರ ಬ್ಯಾಂಕ್ ಖಾತೆಗೆ ಶೀಘ್ರವೇ ತಲಾ ₹25 ಸಾವಿರ ವರ್ಗಾವಣೆ ಮಾಡಲಾಗುವುದು. ನೀರು ನುಗ್ಗದಿರುವ ಮನೆಯವರಿಗೂ ಪರಿಹಾರ ನೀಡಿದರೆ ಅಂತಹ ಅಧಿಕಾರಿಗಳ ವಿರುದ್ಧಕ್ರಮ ಕೈಗೊಳ್ಳಲಾಗುತ್ತದೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಪಶ್ಚಿಮ ವಲಯದ ಕಾರ್ಯಪಡೆಯ ಮುಖ್ಯಸ್ಥರಾದ ಬಳಿಕ ಬಿಬಿಎಂಪಿ ಕಚೇರಿಯಲ್ಲಿ ಮೊದಲ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ರೈಲ್ವೆ ಸೇತುವೆಗಳು ಕಿರಿದಾಗಿರುವುದರಿಂದಲೂ ನೀರು ಬಡಾವಣೆಗಳಿಗೆ ನುಗ್ಗುತ್ತಿರುವ ದೂರುಗಳಿವೆ. ಮುಂದಿನ ಸಭೆಗೆ ರೈಲ್ವೆ ಅಧಿಕಾರಿಗಳನ್ನು ಆಹ್ವಾನಿಸುವಂತೆ ಸೂಚಿಸಿದ್ದೇನೆ' ಎಂದರು.

'ಪಶ್ಚಿಮ ವಲಯದ ಕಾರ್ಯಪಡೆ 15 ದಿನಗಳಿಗೊಮ್ಮೆ ಸಭೆ ನಡೆಸಲಿದೆ. ವಲಯ ಆಯುಕ್ತರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದ್ದು, ₹1 ಕೋಟಿ ತನಕ ತುರ್ತು ಕಾಮಗಾರಿ ಕೈಗೆತ್ತಿಕೊಳ್ಳಲು ಸ್ಥಳದಲ್ಲೇ ಆದೇಶ ನೀಡುವ ಅಧಿಕಾರ ಕೊಡಲಾಗಿದೆ. ಇದರಿಂದ ಪ್ರವಾಹ ಸಂದರ್ಭದಲ್ಲಿ ಪರಿಹಾರ ಕಾರ್ಯವನ್ನು ವೇಗವಾಗಿ ಕೈಗೊಳ್ಳಲು ಸಾಧ್ಯ' ಎಂದರು.

ಅಭಿವೃದ್ಧಿ ಕಾಮಗಾರಿಗಳನ್ನು ವಿಳಂಬ ಮಾಡುವ ಬೇಜವಾಬ್ದಾರಿ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಅಧಿಕಾರವನ್ನೂ ವಲಯ ಆಯುಕ್ತರಿಗೆ ನೀಡಲಾಗಿದೆ ಎಂದು ಹೇಳಿದರು.

'ಪ್ರಾಥಮಿಕ ಮತ್ತು ಎರಡನೇ ಹಂತದ ಕಾಲುವೆಗಳ ಹೂಳು ತೆಗೆಯುವ ಕೆಲಸವನ್ನು ಆದ್ಯತೆ ಮೇರೆಗೆ ನಿರ್ವಹಿಸಲಾಗುವುದು. ಎಲ್ಲೆಲ್ಲಿ ರಾಜಕಾಲುವೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ಪ್ರವಾಹ ಸಾಧ್ಯತೆ ಇರುವ ಸ್ಥಳಗಳನ್ನು ಗುರುತಿಸಿ ಸರಿಪಡಿಸುವ ಕೆಲಸ ಮಾಡಲಾಗುವುದು' ಎಂದರು.

ಅಬಕಾರಿ ಸಚಿವ ಕೆ.ಗೋಪಾಲಯ್ಯ, ಸಂಸದ ತೇಜಸ್ವಿಸೂರ್ಯ, ಶಾಸಕ ದಿನೇಶ್ ಗುಂಡೂರಾವ್, ವಿಧಾನ ಪರಿಷತ್ತಿನ ಸದಸ್ಯ ಪುಟ್ಟಣ್ಣ ಇದ್ದರು.



ಬಿಬಿಎಂಪಿ ಪಶ್ಚಿಮ ವಲಯ ಕಾರ್ಯಪಡೆ ಸಭೆಯಲ್ಲಿ ಸಚಿವ ವಿ.ಸೋಮಣ್ಣ ಮಾತನಾಡಿದರು. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಅಬಕಾರಿ ಸಚಿವ ಕೆ.ಗೋಪಾಲಯ್ಯ ಇದ್ದರು

ಎಸ್‌ಪಿ ಬೆಂಬಲದಿಂದ ಸ್ವತಂತ್ರ ಅಭ್ಯರ್ಥಿಯಾಗಿ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆ

ಕಾಂಗ್ರೆಸ್ ತೊರೆದ ಕಪಿಲ್ ಸಿಬಲ್

ಪ್ರಜಾವಾಣಿ ವಾರ್ತೆ

ಲಖನೌ/ನವದೆಹಲಿ: ಕಪಿಲ್ ಸಿಬಲ್ ಅವರು ಉತ್ತರ ಪ್ರದೇಶದಿಂದ ಬುಧವಾರ ರಾಜ್ಯಸಭೆ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಅಖಿಲೇಶ್ ಯಾದವ್ ಅವರ ಸಮಾಜವಾದಿ ಪಕ್ಷವು (ಎಸ್‌ಪಿ) ಅವರಿಗೆ ಬೆಂಬಲ ಸೂಚಿಸಿದೆ.

2 ವರ್ಷಗಳಿಂದ ಪಕ್ಷದ ನಾಯಕತ್ವದೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದ ಹಿರಿಯ ಸಂಸದ ಕಪಿಲ್ ಸಿಬಲ್ ಅವರು ಕಾಂಗ್ರೆಸ್ ಜೊತೆಗಿನ ತಮ್ಮ 3 ದಶಕಗಳ ಕಾಲದ ಒಡನಾಟವನ್ನು ಕೊನೆಗೊಳಿಸಿರುವುದಾಗಿ ಬುಧವಾರ ಘೋಷಿಸಿದ್ದಾರೆ. ಮೇ 16ರಂದೇ ಕಾಂಗ್ರೆಸ್ ತೊರೆದಿರುವುದಾಗಿ 74 ವರ್ಷದ ಖ್ಯಾತ ವಕೀಲ, ರಾಜಕಾರಣಿ ಸಿಬಲ್ ಹೇಳಿದ್ದಾರೆ.

ಚುನಾವಣೆಗಳಲ್ಲಿ ಸೋಲನುಭವಿಸಿ ಜರ್ಜರಿತವಾಗಿರುವ ಕಾಂಗ್ರೆಸ್‌ನ ತಮ್ಮ ನಿರ್ಗಮನವು ಮತ್ತೊಂದು ಆಘಾತವಾಗಿದೆ ಎಂದು ಸಿಬಲ್ ತಿಳಿಸಿದ್ದಾರೆ.

ಪಂಜಾಬ್ ಕಾಂಗ್ರೆಸ್ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಸುನಿಲ್ ಜಾಖಡ್ ಹಾಗೂ ಪಾಟೀದಾರ್ ಮೀಸಲಾತಿ ಪರ ಹೋರಾಟಗಾರ ಹಾರ್ದಿಕ್ ಪಟೇಲ್ ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ ಕೆಲವೇ ದಿನಗಳಲ್ಲಿ ಸಿಬಲ್ ಸಹ ಕಾಂಗ್ರೆಸ್ ತೊರೆದಿದ್ದಾರೆ.

ಲಖನೌನ ಎಸ್‌ಪಿ ಕಚೇರಿಯಲ್ಲಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರನ್ನು ಭೇಟಿ ಮಾಡಿದ ನಂತರ, ಅಖಿಲೇಶ್, ಪಕ್ಷದ ಹಿರಿಯ ಮುಖಂಡ ರಾಮ್‌ಗೋಪಾಲ್ ಯಾದವ್ ಅವರ ಸಮ್ಮುಖದಲ್ಲಿ ಸಿಬಲ್ ನಾಮಪತ್ರ ಸಲ್ಲಿಸಿದರು.

ಗಾಂಧಿ ಕುಟುಂಬದ ವಿರುದ್ಧ ತೀವ್ರ ಟೀಕೆಗಳನ್ನು ಮತ್ತು ಕಾಂಗ್ರೆಸ್ ನಾಯಕತ್ವದಿಂದ ಗಾಂಧಿ ಕುಟುಂಬವನ್ನು ಬದಲಿಸಬೇಕು ಎಂದು ಬಹಿರಂಗವಾಗಿ ಹೇಳಿಕೆ ನೀಡಿದ್ದ ಸಿಬಲ್ ಅವರ ಕಾಂಗ್ರೆಸ್ ರಾಜ್ಯಸಭಾ ಸದಸ್ಯತ್ವದ ಅವಧಿ ಮುಂದಿನ ತಿಂಗಳು ಕೊನೆಗೊಳ್ಳಲಿದೆ. ಉತ್ತರ ಪ್ರದೇಶದಲ್ಲಿ 111 ಶಾಸಕರನ್ನು ಹೊಂದಿರುವ ಸಮಾಜವಾದಿ ಪಕ್ಷವು ಮುಂದಿನ ತಿಂಗಳು ನಡೆಯಲಿರುವ ಚುನಾವಣೆಯಲ್ಲಿ ಮೂರು ರಾಜ್ಯಸಭಾ ಸ್ಥಾನಗಳನ್ನು ಪಡೆಯುವ ಸ್ಥಿತಿಯಲ್ಲಿದೆ. ಆಡಳಿತಾರೂಢ ಬಿಜೆಪಿ 255 ಮತ್ತು ಮಿತ್ರಪಕ್ಷಗಳ 20 ಶಾಸಕರ ಬಲವನ್ನು ಹೊಂದಿದ್ದು, ಉಳಿದ ಎಂಟು ಸ್ಥಾನಗಳನ್ನು ಪಡೆಯಲಿದೆ.

ಕಾಂಗ್ರೆಸ್‌ನ ಭಿನ್ನಮತೀಯ ಗುಂಪು ಜಿ-23ಯಲ್ಲಿ ಪ್ರಮುಖರಾಗಿದ್ದ ಸಿಬಲ್ ಅವರು ಪಕ್ಷದ ಪುನರ್‌ರಚನೆಗೆ ಒತ್ತಾಯಿಸಿದ್ದರು. ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಅವರು, 'ಪಕ್ಷದ ಸದಸ್ಯರಾದರೆ ಅದರ ಶಿಸ್ತನ್ನು ಪಾಲಿಸಬೇಕಾಗುತ್ತದೆ. ಹೀಗಾಗಿಯೇ ಸ್ವತಂತ್ರ ಅಭ್ಯರ್ಥಿಯಾಗಿ ಹೋರಾಡುತ್ತಿದ್ದೇನೆ' ಎಂದು ಹೇಳಿದ್ದಾರೆ.

'ನನಗೆ ಕಾಂಗ್ರೆಸ್ ಜೊತೆ 30-31 ವರ್ಷಗಳ ಸಂಬಂಧವಿದೆ. ಈ ಸಂಬಂಧವನ್ನು ಕಡಿದುಕೊಳ್ಳುವುದು ಅಷ್ಟು ಸುಲಭವಲ್ಲ. ರಾಜೀವ್‌ಜಿ (ಮಾಜಿ ಪ್ರಧಾನಿ ರಾಜೀವ್ ಗಾಂಧಿ) ಕಾರಣದಿಂದ ನಾನು ಕಾಂಗ್ರೆಸ್ ಸೇರಿದ್ದೆ' ಎಂದು ನಾಮಪತ್ರ ಸಲ್ಲಿಸಿದ ನಂತರ ಸಿಬಲ್ ಸುದ್ದಿಗಾರರಿಗೆ ತಿಳಿಸಿದರು.



ಲಖನೌದ ವಿಧಾನ ಭವನದಲ್ಲಿ ಸಮಾಜವಾದಿ ಪಕ್ಷದ ಬೆಂಬಲದೊಂದಿಗೆ ಕಪಿಲ್ ಸಿಬಲ್ ಅವರು ರಾಜ್ಯಸಭೆ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಬುಧವಾರ ನಾಮಪತ್ರ ಸಲ್ಲಿಸಿದರು. ಅಖಿಲೇಶ್ ಯಾದವ್ ಇದ್ದಾರೆ –ಪಿಟಿಐ ಚಿತ್ರ

ಪಕ್ಷಕ್ಕೆ ನಷ್ಟವಿಲ್ಲ: ಕಾಂಗ್ರೆಸ್

ಕೊಚ್ಚಿ (ಪಿಟಿಐ): 'ಸಿಬಲ್ ಅವರು ಪಕ್ಷ ತೊರೆದಿದ್ದರಿಂದ ಯಾವುದೇ ನಷ್ಟವುಂಟಾಗುವುದಿಲ್ಲ. ರಾಷ್ಟ್ರದ ರಾಜಕೀಯದಲ್ಲಿ ಕಾಂಗ್ರೆಸ್ ದೊಡ್ಡ ಪಕ್ಷವಾಗಿದೆ. ವಿವಿಧ ರಾಜ್ಯಗಳಲ್ಲಿ ಬೇರೆ ಪಕ್ಷಗಳಿಂದ ಕಾಂಗ್ರೆಸ್ ಸೇರುವ ಅನೇಕ ನಾಯಕರ ಮೇಲೆ ಇದೇನೂ ಪರಿಣಾಮ ಬೀರುವುದಿಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದರು.

ಪಾಕ್ ಉಗ್ರರ ಹತ್ಯೆ; ಪೊಲೀಸ್ ಸಾವು

ಪ್ರಜಾವಾಣಿ ವಾರ್ತೆ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲ ಜಿಲ್ಲೆಯಲ್ಲಿ ಬುಧವಾರ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಮೂವರು ಪಾಕಿಸ್ತಾನದ ಭಯೋತ್ಪಾದಕರು ಹತರಾಗಿದ್ದು, ಪೊಲೀಸ್ ಸಿಬ್ಬಂದಿ ಮುದಾಸೀರ್ ಅಹ್ಮದ್ ಅವರು ಕೂಡ ಮೃತಪಟ್ಟಿದ್ದಾರೆ.

ಯಾಸಿನ್ ಬೆಂಬಲಿಗರು, ಭದ್ರತಾಪಡೆಗಳ ನಡುವೆ ಸಂಘರ್ಷ

ಶ್ರೀನಗರದ ಅಲ್ಲಲ್ಲಿ ಪ್ರತಿಭಟನೆ

ಶ್ರೀನಗರ (ಪಿಟಿಐ): ನಿಷೇಧಿತ ಜೆಕೆಎಲ್‌ಎಫ್ ಮುಖ್ಯಸ್ಥ ಯಾಸಿನ್ ಮಲಿಕ್ ಬೆಂಬಲಿಗರು, ಭದ್ರತಾಪಡೆಗಳ ನಡುವೆ ಶ್ರೀನಗರದಲ್ಲಿ ಬುಧವಾರ ಘರ್ಷಣೆ ನಡೆಯಿತು. ಇಡೀ ನಗರದಲ್ಲಿ ಅಘೋಷಿತ ಬಂದ್ ವಾತಾವರಣ ಇದ್ದ ಸಮಯದಲ್ಲಿ ಮೈಸುಮಾ ಪ್ರದೇಶದಲ್ಲಿ ಪ್ರತಿಭಟನೆ ಭುಗಿಲೆದ್ದಿತು.

ಲಾಲ್ ಚೌಕ್ ಸಮೀಪದ ಮೈಸುಮಾದಲ್ಲಿ ಇರುವ ಮಲಿಕ್ ನಿವಾಸದ ಬಳಿ ಮಹಿಳೆಯರೂ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ಜನರು ಮಲಿಕ್ ಪರವಾಗಿ ಘೋಷಣೆಗಳನ್ನು ಕೂಗಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜನರು ಇಡೀ ಪ್ರದೇಶದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೈಸುಮಾ ಚೌಕ್ ಕಡೆಗೆ ಮೆರವಣಿಗೆ ನಡೆಸಲು ಮುಂದಾದಾಗ, ಭದ್ರತಾ ಪಡೆಗಳ ಜೊತೆ ಸಂಘರ್ಷ ನಡೆಯಿತು.



ಶ್ರೀನಗರದಲ್ಲಿ ಭದ್ರತಾಪಡೆಗಳ ಮೇಲೆ ಯಾಸಿನ್ ಮಲಿಕ್ ಬೆಂಬಲಿಗರು ಕಲ್ಲು ತೂರಾಟ ನಡೆಸಿದರು –ಎಎಫ್‌ಪಿ ಚಿತ್ರ

ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ

ಒಂದನೇ ಪುಟದಿಂದ...

ಮರಣದಂಡನೆ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಮಲಿಕ್, ಯಾವುದಕ್ಕೂ ನಾನು ಬೇಡಿಕೆಯಿಡುವುದಿಲ್ಲ. ಕೋರ್ಟ್ ನಿರ್ಧಾರ ತೆಗೆದುಕೊಳ್ಳಲಿ. ವಿ.ಪಿ. ಸಿಂಗ್‌ರಿಂದ ಅಟಲ್ ಬಿಹಾರಿ ವಾಜಪೇಯಿ ಅವರವರೆಗೆ ಎಲ್ಲ ಪ್ರಧಾನಿಗಳನ್ನು ಭೇಟಿಯಾಗಿದ್ದೇನೆ. ಅವರು ನನ್ನ ರಾಜಕೀಯ ಅಭಿಪ್ರಾಯ ಹಂಚಿಕೊಳ್ಳಲು ವೇದಿಕೆ ನೀಡಿದ್ದರು ಎಂದು ಯಾಸಿನ್ ಮಲಿಕ್ ಹೇಳಿದ್ದಾನೆ.

'ಗಾಂಧಿ ತತ್ವಗಳಾದ ಅಹಿಂಸೆ,ಶಾಂತಿ ಪರಿಪಾಲನೆ ಮಾಡುತ್ತಿರುವುದಾಗಿ ದೋಷಿ ಹೇಳಿದ್ದಾನೆ. ಆದರೆ ಇಡೀ ಚಳವಳಿಯು ಹಿಂಸಾತ್ಮಕ ಉದ್ದೇಶದಿಂದ ಕೂಡಿತ್ತು. ಇಡೀ ಕಣಿವೆಯಲ್ಲಿ ದೊಡ್ಡ ಮಟ್ಟದ ಹಿಂಸಾಚಾರ ನಡೆದರೂ ದೋಷಿಯು ಅದನ್ನು ಖಂಡಿಸಲಿಲ್ಲ' ಎಂದು ಕೋರ್ಟ್ ಹೇಳಿತು.

ಭಾರತವು ಯಾಸಿನ್‌ನನ್ನು ಜೈಲಿಗೆ ಹಾಕಬಹುದು. ಆದರೆ, ಆತ ಪ್ರತಿನಿಧಿಸುವ ಸ್ವಾತಂತ್ರ್ಯದ ಧ್ಯೇಯವನ್ನು ಸೆರೆಯಲ್ಲಿ ಇಡಲಾಗದು ಎಂದು ಪಾಕಿಸ್ತಾನ ಪ್ರಧಾನಿ ಶಾಹಬಾಝ್ ಷರೀಫ್ ಟ್ವೀಟ್ ಮಾಡಿದ್ದಾರೆ.

ಯಾಸಿನ್ ಮಲಿಕ್ ಶಿಕ್ಷೆ ವಿವರ

- ಯುದ್ಧಕ್ಕೆ ಯತ್ನ (ಐಪಿಸಿ ಸೆ. 121): ಜೀವಾವಧಿ ಶಿಕ್ಷೆ (₹10 ಸಾವಿರ ದಂಡ)
- ಭಯೋತ್ಪಾದಕ ಚಟುವಟಿಕೆಗೆ ಹಣ ಸಂಗ್ರಹ (ಯುಎಪಿಎ ಸೆ. 17): ಜೀವಾವಧಿ ಶಿಕ್ಷೆ (₹10 ಲಕ್ಷ ದಂಡ)
- ಕ್ರಿಮಿನಲ್ ಸಂಚು (ಐಪಿಸಿ 120 ಬಿ): 10 ವರ್ಷ ಜೈಲು (₹10 ಸಾವಿರ ದಂಡ)
- ಯುದ್ಧ ನಡೆಸಲು ಸಂಚು (ಐಪಿಸಿ ಸೆ. 121ಎ): 10 ವರ್ಷ ಜೈಲು (₹10 ಸಾವಿರ ದಂಡ)
- ಕಾನೂನು ಬಾಹಿರ ಚಟುವಟಿಕೆ (ಯುಎಪಿಎ ಸೆ. 13): 5 ವರ್ಷ ಜೈಲು (₹5 ಸಾವಿರ ದಂಡ)
- ಭಯೋತ್ಪಾದನಾ ಕೃತ್ಯ (ಯುಎಪಿಎ ಸೆ.16/ ಐಪಿಸಿ ಸೆ.120ಬಿ): 10 ವರ್ಷ ಜೈಲು (₹10 ಸಾವಿರ ದಂಡ)
- ಸಂಚು (ಯುಎಪಿಎ ಸೆ. 18): 10 ವರ್ಷ ಜೈಲು (₹10 ಸಾವಿರ ದಂಡ)
- ಭಯೋತ್ಪಾದನಾ ಗುಂಪಿನ ಸದಸ್ಯ (ಯುಎಪಿಎ ಸೆ.20): 10 ವರ್ಷ ಜೈಲು (₹10 ಸಾವಿರ ದಂಡ)
- ಭಯೋತ್ಪಾದನಾ ಗುಂಪಿನ ಸದಸ್ಯನಿಗೆ ಶಿಕ್ಷೆ (ಯುಎಪಿಎ ಸೆ.38) 5 ವರ್ಷ ಜೈಲು (₹5 ಸಾವಿರ ದಂಡ)
- ಭಯೋತ್ಪಾದನಾ ಸಂಘಟನೆಗೆ ಬೆಂಬಲ (ಯುಎಪಿಎ ಸೆ.39): 5 ವರ್ಷ ಜೈಲು (₹5 ಸಾವಿರ ದಂಡ)

ಶಾಂತಿ ಪ್ರಯತ್ನಕ್ಕೆ ಹಿನ್ನಡೆ:ಪಿಎಜಿಡಿ

ಶ್ರೀನಗರ: 'ದೆಹಲಿ ಎನ್‌ಐಎ ನ್ಯಾಯಾಲಯವು ಜೆಕೆಎಲ್‌ಎಫ್ ಮುಖ್ಯಸ್ಥ ಯಾಸಿನ್ ಮಲ್ಲಿಕ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿರುವುದು ದುರದುಷ್ಟಕರ ಹಾಗೂ ಶಾಂತಿ ಸ್ಥಾಪನೆಯ ಪ್ರಯತ್ನಗಳಿಗೆ ಆದ ಹಿನ್ನಡೆ' ಎಂದು ಗುಪ್ಕಾರ್ ಕೂಟ(ಪಿಎಜಿಡಿ) ಹೇಳಿದೆ.

ಈ ಕುರಿತು ಹೇಳಿಕೆ ನೀಡಿರುವ ಪಿಎಜಿಡಿ ವಕ್ತಾರ ಮೊಹಮ್ಮದ್ ಯುಸುಫ್ ತರಿಗಾಮಿ, 'ಎನ್‌ಐಎ ಕೋರ್ಟ್ ತನ್ನ ತೀರ್ಪು ನೀಡಿದೆ ಆದರೆ ನ್ಯಾಯ ನೀಡಿಲ್ಲ. ನ್ಯಾಯಾಲಯದ ತೀರ್ಪು ಪರಕೀಯತೆ ಮತ್ತು ಪ್ರತ್ಯೇಕತಾವಾದಿ ಭಾವನೆಗಳನ್ನು ಉತ್ತೇಜಿಸುತ್ತಿದೆ' ಎಂದು ಹೇಳಿದ್ದಾರೆ.

ಚೆನ್ನೈಗೆ ಮೋದಿ ಭೇಟಿ ಇಂದು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇಂದು (ಗುರುವಾರ) ಚೆನ್ನೈ, ಹೈದರಾಬಾದ್‌ಗೆ ಭೇಟಿ ನೀಡಲಿದ್ದು, ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಚೆನ್ನೈನಲ್ಲಿ ಪ್ರಧಾನ ಮಂತ್ರಿ ಆವಾಸ ಯೋಜನೆ (ನಗರ) ಅಡಿಯಲ್ಲಿ 'ಲೈಟ್ ಹೌಸ್ ಪ್ರಾಜೆಕ್ಟ್–ಚೆನ್ನೈ'ನ ಭಾಗವಾಗಿ ₹ 116 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ 1,152 ಮನೆಗಳನ್ನು ಮೋದಿ ಉದ್ಘಾಟಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಎಸ್‌ಬಿ ಸಂಭ್ರಮಾಚರಣೆ: ಹೈದರಾಬಾದ್‌ನ ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್ (ಐಎಸ್‌ಬಿ) 20ನೇ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಮೋದಿ ಅವರು ಪಾಲ್ಗೊಳ್ಳಲಿದ್ದಾರೆ.

ಬಿಜೆಪಿ ಸದಸ್ಯನ ಹತ್ಯೆ

ಚೆನ್ನೈ: ನಗರದ ಅಣ್ಣ ಸಲಾಯ್ ರಸ್ತೆಯಲ್ಲಿ ಬಿಜೆಪಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಬಾಲಚಂದರ್ ಅವರನ್ನು ಬುಧವಾರ ಇರಿದು ಹತ್ಯೆಗೈಯಲಾಗಿದೆ. ಬಾಲಚಂದರ್ ವಿರುದ್ಧ ಏಳು ಮೊಕದ್ದಮೆಗಳು ದಾಖಲಾಗಿದ್ದವು. ಇದು ವೈಯಕ್ತಿಕ ದ್ವೇಷಕ್ಕೆ ಆಗಿರುವ ಕೊಲೆ ಎಂದು ಪೊಲೀಸರು ಶಂಕಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಿ.ಸಿ.ಜಾರ್ಜ್‌ಗೆ ನೀಡಿದ್ದ ಜಾಮೀನು ರದ್ದು

ತಿರುವನಂತಪುರ(ಪಿಟಿಐ): ಮುಸ್ಲಿಮರ ವಿರುದ್ಧ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ಬಂಧನಕ್ಕೊಳಗಾಗಿದ್ದ ಹಿರಿಯ ರಾಜಕಾರಣಿ ಪಿ.ಸಿ.ಜಾರ್ಜ್ ಅವರಿಗೆ ನೀಡಲಾಗಿದ್ದ ಜಾಮೀನನ್ನು ಕೇರಳದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಬುಧವಾರ ರದ್ದುಗೊಳಿಸಿದೆ.

ಜಾಮೀನು ನೀಡುವ ವೇಳೆ ವಿಧಿಸಿದ ನಿಯಮ ಉಲ್ಲಂಘಿಸಿ, ಜಾರ್ಜ್ ಅವರು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಮತ್ತು ಕೋಮು ದ್ವೇಷ ಹರಡುವ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಮೂಲಕ ಜಾಮೀನು ನೀಡುವಾಗ ವಿಧಿಸಲಾಗಿದ್ದ ನಿಯಮಗಳನ್ನು ಉಲ್ಲಂಘಿಸಿದ್ದು, ಅವರ ಜಾಮೀನು ರದ್ದುಗೊಳಿಸಬೇಕು ಎಂಬ ಪೊಲೀಸರ ಕೋರಿಕೆಯನ್ನು ನ್ಯಾಯಾಲಯ ಪುರಸ್ಕರಿಸಿದೆ. ತೀರ್ಪು ಬಂದ ಕೆಲ ಹೊತ್ತಲ್ಲೇ ಜಾರ್ಜ್ ಅವರನ್ನು ಮತ್ತೆ ಬಂಧಿಸಲಾಗಿದೆ.

ಕಾರ್ತಿ ಚಿದಂಬರಂ ವಿರುದ್ಧ ಇ.ಡಿ ಪ್ರಕರಣ

ನವದೆಹಲಿ (ಪಿಟಿಐ): ಚೀನಾದ 263 ಮಂದಿಗೆ ವೀಸಾ ಕೊಡಿಸಿದ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಕಾರ್ತಿ ಅವರು 2011ರಲ್ಲಿ ತಮ್ಮ ತಂದೆ ಚಿದಂಬರಂ ಅವರು ಗೃಹ ಸಚಿವರಾಗಿದ್ದ ಅವಧಿಯಲ್ಲಿ ಚೀನಾದ 263 ಮಂದಿಗೆ ವೀಸಾ ಕೊಡಿಸಿದ್ದರು. ಇದರಲ್ಲಿ ಕಾರ್ತಿ ಮತ್ತು ಅವರ ಆಪ್ತ ಎಸ್.ಭಾಸ್ಕರ ರಾಮನ್ ವಿರುದ್ಧ ₹50 ಲಕ್ಷ ಲಂಚ ಪಡೆಯಲಾಗಿದೆ ಎಂಬ ಆರೋಪವಿದ್ದು, ಅವರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ.

ಯುದ್ಧ ವಿಮಾನದ ಮೊದಲ ಮಹಿಳಾ ಪೈಲಟ್ ಅಭಿಲಾಷಾ

ನವದೆಹಲಿ (ಪಿಟಿಐ): ಕ್ಯಾ. ಅಭಿಲಾಷಾ ಬಾರಕ್ ಅವರು ಭಾರತೀಯ ಸೇನೆಯ ಯುದ್ಧವಿಮಾನದ ಪ್ರಥಮ ಮಹಿಳಾ ಪೈಲಟ್ ಆಗಿ ಆಗಿದ್ದಾರೆ.

ನಾಸಿಕ್‌ನ ಯುದ್ಧ ವಿಮಾನ ತರಬೇತಿ ಸಂಸ್ಥೆಯಲ್ಲಿ ನಡೆದ ಸಮಾರಂಭದಲ್ಲಿ ಅವರು ಇತರ 36 ಸೇನಾ ಪೈಲಟ್‌ಗಳ ಜೊತೆ ಯುದ್ಧ ವಿಮಾನ ಪೈಲಟ್ ಆಗಿ ಪದವಿ ಪಡೆದರು.

ಕ್ಯಾ. ಅಭಿಲಾಶಾ ಅವರು ಮೂಲತಃ ಹರಿಯಾಣಾದವರು. ನಿವೃತ್ತ ಕರ್ನಲ್ ಓಮ್ ಸಿಂಗ್ ಅವರ ಮಗಳು. 2018ರ ಸೆಪ್ಟೆಂಬರ್‌ನಲ್ಲಿ ಅವರು ಸೇನಾ ವಾಯು ರಕ್ಷಣಾ ಕಾರ್ಪ್ಸ್‌ಗೆ ಸೇರಿದರು. ಸೇನಾ ವಾಯು ರಕ್ಷಣಾ ಕಾರ್ಪ್ಸ್‌ಗೆ ಸೇರ್ಪಡೆಯಾಗುವ ಮೊದಲು ಸೇನೆಯ ಹಲವು ತರಬೇತಿಗಳನ್ನು ಪಡೆದಿದ್ದಾರೆ.

ಕೊರೊನಾ: ಮಹಾರಾಷ್ಟ್ರದಲ್ಲಿ 470 ಹೊಸ ಪ್ರಕರಣ

ಮುಂಬೈ: ಎರಡು ತಿಂಗಳ ಬಳಿಕ ಮಹಾರಾಷ್ಟ್ರದಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಅಲ್ಪಮಟ್ಟಿಗೆ ಏರಿಕೆಯಾಗಿದೆ. ಬುಧವಾರ ರಾಜ್ಯದಲ್ಲಿ 470 ಪ್ರಕರಣಗಳು ಪತ್ತೆಯಾಗಿವೆ.

ಈ ಪೈಕಿ ಮುಂಬೈ ಮಹಾನಗರ ಪಾಲಿಕೆ ಪ್ರದೇಶದಲ್ಲಿ 372, ಪುಣೆಯಲ್ಲಿ 68 ಪ್ರಕರಣಗಳು ದೃಢಪಟ್ಟಿವೆ ಎಂದು ಸಾರ್ವಜನಿಕ ಆರೋಗ್ಯ ಇಲಾಖೆ ತಿಳಿಸಿದೆ.

ಜ್ಞಾನವಾಪಿ: ಅರ್ಜಿ ತ್ವರಿತ ನ್ಯಾಯಾಲಯಕ್ಕೆ ವರ್ಗಾವಣೆ

ವಾರಾಣಸಿ(ಪಿಟಿಐ): ಇಲ್ಲಿನ ಜ್ಞಾನವಾಪಿ ಮಸೀದಿಯ ಆವರಣದಲ್ಲಿ ಪತ್ತೆಯಾಗಿದೆ ಎನ್ನಲಾದ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಜಿಲ್ಲಾ ನ್ಯಾಯಾಲಯವು ತ್ವರಿತ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿದೆ.

ಈ ಅರ್ಜಿ ವಿಚಾರಣೆಯನ್ನು ತ್ವರಿತ ನ್ಯಾಯಾಲಯವು ಮೇ 30ರಂದು ನಡೆಸಲಿದೆ ಎಂದು ಸರ್ಕಾರದ ಪರ ವಕೀಲ ರಾಣಾ ಸಂಜೀವ್ ಸಿಂಗ್ ಅವರು ಬುಧವಾರ ಮಾಹಿತಿ ನೀಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ: ರಾಗಾವಿ/ಪ್ರೊಕ್/ಎಸ್‌ಎಂಹೆಚ್/10/2022–23 ದಿನಾಂಕ:24.05.2022

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ರಾ.ಗಾ.ಆ.ವಿ.ವಿಗೆ ಭದ್ರತಾ ಸಿಬ್ಬಂದಿ, (Menial Staffs) ಮತ್ತು ಸ್ವಚತ್ತಾ ಸಿಬ್ಬಂದಿಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	24/05/2022 ಮಧ್ಯಾಹ್ನ 3:36:56 ಗಂಟೆಗೆ
ಪೂರ್ವ ಬಿಡ್ ಸಭೆಯ ದಿನಾಂಕ	03/06/2022 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	24/06/2022 ಮಧ್ಯಾಹ್ನ 3:00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	27/06/2022 ಬೆಳಿಗ್ಗೆ 10:30 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://eproc.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾ.ಸಾ.ಸಂ.ಇ/647/2022–23

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು– 560010 ಟೆಲಿಫ್ಯಾಕ್ಸ್ : 080–22024000 ಇ–ಮೇಲ್ : mdkrdcl@gmail.com cekrdcl@gmail.com ವೆಬ್‌ಸೈಟ್ : http: // www.krdcl.in

ಸಂಖ್ಯೆ : ಕರಅನಿನಿ/ಐಎಫ್‌ಬಿ/2022–23/04 ದಿನಾಂಕ : 25.05.2022

ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲೂಕು ಹಿತ್ತಲಹಳ್ಳಿ ಗ್ರಾಮದ ಬಳಿ ಬರುವ ಗಣೇಶ್ ಫಾಲ್ಸ್ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಗೆ ಟರ್ನ್ ಕೀ ಮತ್ತು ಗುತ್ತಿಗೆದಾರರ ಸ್ವಂತ ವಿನ್ಯಾಸದ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು http//eproc.karnataka.gov.in ವೆಬ್‌ಸೈಟ್ ಮೂಲಕ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : 10.06.2022ರ 17.30 ಗಂಟೆವರೆಗೆ ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ 13.06.2022ರ 11.30 ಗಂಟೆಗೆ ತೆರೆಯಲಾಗುತ್ತದೆ.

ಗಮನಿಸಿ : ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಇ–ಪೋರ್ಟಲ್/ಕರಅನಿನಿ ವೆಬ್‌ಸೈಟ್: http//www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
DIPR/CP/Sreshta/662/ 2022-23
ಸಹಿ/– ಮುಖ್ಯ ಅಭಿಯಂತರರು ಕರಅನಿನಿ, ಬೆಂಗಳೂರು

ಕರ್ನಾಟಕ ಸರ್ಕಾರ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಾರ್ಯಾಲಯ (ರಾಜ್ಯ ವಲಯ), ಗದಗ–582103, ಜಿಲ್ಲೆ: ಗದಗ,
Ph: 08372-200271, 200272 E-mail: adhssgadag@gmail.com
ಕ್ರ.ಸಂ.ಹಿಸತೋನಿ/ರಾ.ವ/ಗ/ /2022–23 ದಿನಾಂಕ : 24–05–2022

ವಾಹನ ಬಾಡಿಗೆ ಟೆಂಡರ್ ಪ್ರಕಟಣೆ

ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ), ಗದಗ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯ ವಲಯ), ಗದಗ ಕಚೇರಿಗಳಿಗೆ 2022–23 ನೇ ಸಾಲಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಮಾರುತಿ ಸುಜಕಿ ಟೂರ್ಸ್ / ಮಾರುತಿ ಟೂರ್ಸ್ / ಸ್ವಿಫ್ಟ್ ಡಿಜೈರ್ / ಟೋಯೋಟೊ ಇಟಿಯೋಸ್/ ಎರಡು ವಾಹನಗಳನ್ನು ಒದಗಿಸಲು ಮೊಹರಾದ ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಪ್ರತ್ಯೇಕ ಇ.ಎಂ.ಡಿ ಮೊತ್ತ 5,000/– ರೂ. ಖಾಲಿ ಟೆಂಡರ್ ಫಾರ್ಮ ಬೆಲೆ ಪ್ರತಿ ಒಂದಕ್ಕೆ 500/– ರೂ. ಇದ್ದು ದಿ. 25.05.2022 ರಿಂದ ದಿ. 02.06.2022 ರವರೆಗೆ ಕಚೇರಿಯಲ್ಲಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರ್ಮ ಸಲ್ಲಿಸಲು ದಿ. 03.06.2022 ಮಧ್ಯಾಹ್ನ 3 ಗಂಟೆವರೆಗೆ ಅವಕಾಶವಿದೆ. ದಿನಾಂಕ : 04.06.2022 ರಂದು ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯನ್ನು (ಮೋಬೈಲ್ ನಂಬರ್– 9980354739/08372–200272) ಸಂಪರ್ಕಿಸಬಹುದು.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ), ಗದಗ
ವಾಸಾಸಂಇ/ಗದಗ/ಎಂ.ಸಿ.ಎ/97/2022–23

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ, ಈ ಕೆಳಕಂಡ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ವಿಚಾರಣೆ ಸಂಖ್ಯೆ	ವಿವರ
ಬೆವಿಕಂ/ಪ್ರ.ವ್ಯ (ಮಾ&ವಾ)/104/ ಬಿಎಮ್/2022–23	ಬೆವಿಕಂನ ಬೆಂ.ಮ.ಕ್ಷೇ.ವಲಯ ಮತ್ತು ಬೆಂ.ಗ್ರಾ.ಕ್ಷೇ. ವಲಯ ವ್ಯಾಪ್ತಿಯಲ್ಲಿರುವ ಬೌಂಡರಿ ಪಾಯಿಂಟ್ ಗಳಲ್ಲಿ ಬೌಂಡರಿ ಮೀಟರಿಂಗ್ ಕ್ಯೂಬಿಕಲ್‌ಗಳ (ಮಾಪಕಗಳನ್ನು ಒಳಗೊಂಡಂತೆ) ಪೂರೈಕೆ, ಅಳವಡಿಕೆ ಹಾಗೂ ಚಾಲನೆಗಾಗಿ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಪ್ರತಿ ಸಾಮಗ್ರಿಗಳ ಆಧಾರದಲ್ಲಿ ಶೇಕಡಾವಾರು ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.
ಬೆವಿಕಂ/ಪ್ರ.ವ್ಯ (ಮಾ&ವಾ)/105/ ಬಿಎಮ್/2022–23	ಬೆವಿಕಂನ ಚಿತ್ರದುರ್ಗ. ಕ್ಷೇ.ವಲಯ ವ್ಯಾಪ್ತಿಯಲ್ಲಿರುವ ಬೌಂಡರಿ ಪಾಯಿಂಟ್‌ಗಳಲ್ಲಿ ಬೌಂಡರಿ ಮೀಟರಿಂಗ್ ಕ್ಯೂಬಿಕಲ್‌ಗಳ (ಮಾಪಕಗಳನ್ನು ಒಳಗೊಂಡಂತೆ) ಪೂರೈಕೆ, ಅಳವಡಿಕೆ ಹಾಗೂ ಚಾಲನೆಗಾಗಿ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಪ್ರತಿ ಸಾಮಗ್ರಿಗಳ ಆಧಾರದಲ್ಲಿ ಶೇಕಡಾವಾರು ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಸ್ತಾವೇಜುಗಳನ್ನು ದಿನಾಂಕ 27.05.2022 ರಂದು ಅಥವಾ ನಂತರ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ https://eproc.karnataka.gov.in ನಿಂದ ಪಡೆಯಬಹುದು. ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ನಂತರ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 080–25501216, 080–25501227 ಗೆ ಕರೆಮಾಡಿ ಸಹಾಯ ಪಡೆಯಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಮಾ & ವಾ),
ಬೆವಿಕಂ, 1ನೇ ಮಹಡಿ, ಕೆ.ಆರ್. ವೃತ್ತ, ಬೆಂಗಳೂರು–560001.
ದೂರವಾಣಿ: 080–22341177.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಎಕ್ಸಿಕ್ಯೂಟೀವ್ ಇಂಜನೀಯರವರ ಕಚೇರಿ, ಕೃಭಾಜನಿನಿ, ನಾಬದಂ ಕಾಲುವೆ, ವಿಭಾಗ–5, ರೋಡಲಬಂಡಾ.
ಸಂ :ಕೃಭಾಜನಿನಿ/ನಾಬದಂಕಾ/ವಿ–5/ಯೋಶಾ/2022–23/104 ದಿನಾಂಕ:21–05–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ 2021–22 ನೇ ಸಾಲಿನ ವಾರ್ಷಿಕ ಕಾರ್ಯಕ್ರಮ ಪಟ್ಟಿಯ ಕಾಮಗಾರಿಗೆ ಶೇಕಡಾವಾರು ಟೆಂಡರ್‌ಗಳನ್ನು ಈ ಕೆಳಗೆ ತಿಳಿಸಿರುವಂತೆ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಹ್ವಾನಿಸಲಾಗಿದೆ. ರವರೆಗೆ
1) ಕಾಮಗಾರಿಯ ಸಂಖ್ಯೆಗಳು : **01,** 2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **08–06–2022 ಸಂಜೆ 5.00 ರವರೆಗೆ,** 3) ಪ್ರೀ–ಬಿಡ್ ದಿನಾಂಕ : **01–06–2022 ಬೆಳಗ್ಗೆ 11.00 ಗಂಟೆಗೆ,** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10–06–2022 ಬೆಳಗ್ಗೆ 11.00 ಗಂಟೆಗೆ,** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : **15–06–2022 ಬೆಳಗ್ಗೆ 11.00 ಗಂಟೆಗೆ.**

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಂತರ್ ಜಾಲ ವಿಳಾಸ www.eproc.karnataka.gov.in ದಲ್ಲಿ ಅಥವಾ ಈ ಕೆಳಸಹಿದಾರರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಎಕ್ಸಿಕ್ಯೂಟೀವ್ ಇಂಜನೀಯರ್
ಕೃಭಾಜನಿನಿ, ನಾಬದಂಕಾಲುವೆ, ವಿಭಾಗ–5 ರೋಡಲಬಂಡಾ.
ವಾ.ಸಾ.ಸಂ.ಇ/ರಾಯಚೂರು/95/ಎಂ.ಸಿ.&ಎ/2022–23

ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ.
(ಕರ್ನಾಟಕ ಸರ್ಕಾರದ ಉದ್ಯಮ)
ಪ್ಲಾಟ್ ನಂ.42 ಕಾಟನ್ ಮಾರ್ಕೆಟ್, ಎಪಿಎಂಸಿ ಯಾರ್ಡ್, ನೆಹರು ಗಂಜ್, ಕಲಬುರಗಿ–585104
Phone No. 08472-256776, E-mail : mdktamlglb@gmail.com
ಸಂ.ಕರಾದ್ವಿಧಾಅಮಂನಿ/ಆಡಳಿತ/2022–23 ದಿನಾಂಕ:21–05–2022

:: ಇ–ಪ್ರೋಕ್ಯೂರ್‌ಮೆಂಟ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ::

ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿ., ಕಲಬುರಗಿ ಸಂಸ್ಥೆ, ದ್ವಿದಳ ಧಾನ್ಯ ಸಂಸ್ಕರಣೆ ಮತ್ತು ಮೌಲವರ್ಧನೆಯಲ್ಲಿ ಉತ್ಕೃಷ್ಟತೆಯ ಕೇಂದ್ರವನ್ನು ಸ್ಥಾಪಿಸಲು ತಾಂತ್ರಿಕ ಸಲಹಾ ಸೇವೆಗಳ ಸಂಪೂರ್ಣ ಶ್ರೇಣಿಯನ್ನು ಒಳಗೊಂಡ ಸಲಹಾ ಸೇವೆಗಳನ್ನು ಒದಗಿಸಲು ಸಮರ್ಥ ಮತ್ತು ಅನುಭವಿ ಸಲಹೆಗಾರರನ್ನು ಅಥವಾ ಸಲಹಾ ಸಂಸ್ಥೆಯನ್ನು ಆಯ್ಕೆ ಮಾಡಲು ಆಸಕ್ತಿಯುಳ್ಳ ಅಭಿವ್ಯಕ್ತಿಯನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಮರು ಟೆಂಡರ್ ಆಹ್ವಾನಿಸಲಾಗಿದೆ.
1) ಸೇವೆ ವಿವರ : ಆಸಕ್ತಿಯುಳ್ಳ ಟೆಂಡರದಾರರು, (EXPRESSION OF INTEREST), 2) ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ: **23–05–2022,** 3) ಪೂರ್ವ ಬಿಡ್ ಸಭೆಯ ದಿನಾಂಕ: **31–05–2022,** 4) ಟೆಂಡರ್‌ನಲ್ಲಿಯ ವಿವರಗಳ ಸಷ್ಟೀಕರಣಕ್ಕಾಗಿ ನಿಗದಿಪಡಿಸಿದ ದಿನಾಂಕ: **04–06–2022,** 5) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **06–06–2022**, 6) ಟೆಂಡರ್ ತೆರೆಯುವ ದಿನಾಂಕ: **08–06–2022ರ (ತಾಂತ್ರಿಕ ಬಿಡ್),** 7) ಹಣಕಾಸಿನ ಬಿಡ್ ತೆರೆಯುವ ದಿನಾಂಕ: **10–06–2022,** 8) ಹೆಚ್ಚಿನ ಮಾಹಿತಿಗಾಗಿ Website:http://eproc.karnataka.gov.in ಮೂಲಕ ಸಂಪರ್ಕಿಸಬಹುದು. 9) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08472–256776, 9964474444 E-mail ID : mdktamlglb@gmail.com
ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿ., ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/195/ಎಂ.ಸಿ&ಎ/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
ಫೋನ್ ನಂ: 08338–275101 ಇ–ಮೇಲ್ : ee.rdws.ckd@gmail.com
ಸಂಖ್ಯೆ: ಗ್ರಾಕುನೀ&ನೈ/ಚಿಕ್ಕೋಡಿ/ಪಿಬಿ/ಕು.ನೀ.ಸ.ಯೋ/ಕೆಡಬ್ಲ್ಯು 1/ಟೆಂಡರ್–21/2022–23/540 ದಿನಾಂಕ: 23–05–2022

ಮರುಕರೆ ಟೆಂಡರ್ ಪ್ರಕಟಣೆ ಸಂಖ್ಯೆ: 21–01/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಜಲ ಜೀವನ್ ಮಿಷನ್ ಅಡಿಯಲ್ಲಿ ಗ್ರಾಮಗಳ ಕ್ರಿಯಾ ಯೋಜನೆಗಳು (VAP) ಮಾಹಿತಿ ಹಾಗೂ ಸಂವಹನ (ICE) ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಚಟುವಟಿಕೆಗಳನ್ನು ನಿರ್ವಹಿಸಲು ನುರಿತ ಅನುಷ್ಠಾನ ಬೆಂಬಲ ಸಂಸ್ಥೆಗಳನ್ನು (ISRA) ನೇಮಿಸುವ ಸಲುವಾಗಿ ಎಂಪ್ಯಾನೆಲ್‌ಮೆಂಟ್ ಮಾಡಿಕೊಳ್ಳುವ ಸಲುವಾಗಿ ಸೇವಾ ಟೆಂಡರ್ ಡಾಕ್ಯುಮೆಂಟ್ KC ನಿಬಂಧನೆಗೊಳಪಟ್ಟಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಒದಗಿಸಬೇಕಾಗಿರುವ ಸೇವೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ	ಕಾಲಾವಧಿ	ಅರ್ಹತೆ ಸಂಸ್ಥೆಗಳು
1	Selection and Empanelement of Implementation Support Agencies (NGOs/VOs/SHGs) for providing services related to IEC & HRD activities under jaljeevan Mission (JJM) in rural under areas Rural Drinking Water & Sanitation Department. **(RDW&S/DIV/CKD/2021-22/ INDENT-21/call02)**	123.70	2,52,000/–	1 ವರ್ಷ	Societies Act 1860 / Public Trust Act 1982 / under Section 8 of Companies Act or Experienced Self Helf Ground within districts ರಡಿಯಲ್ಲಿ ನೊಂದಾಯಿತ ಸಂಸ್ಥೆಗಳು

1	ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ.&ನೈ ವಿಭಾಗ ಚಿಕ್ಕೋಡಿ ಇವರ ಕಚೇರಿಯಲ್ಲಿ	:	31–05–2022 ಬೆಳಿಗ್ಗೆ 11:00 ಗಂಟೆಯವರೆಗೆ
2	ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	:	09–06–2022 ಸಾಯಂಕಾಲ 05:00 ಗಂಟೆಯವರೆಗೆ
3	ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	:	10–06–2022 ಸಾಯಂಕಾಲ 05:30 ಗಂಟೆಯವರೆಗೆ
4	ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	:	ತಾಂತ್ರಿಕ ಬಿಡ್ ಅನುಮೋದಿಸಿದ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ. ವಿಭಾಗ, ಚಿಕ್ಕೋಡಿ.
DIPO/RO No. 283/2022-23

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
#10, 3ನೇ ಮಹಡಿ, ಖಾದಿಭವನ, ಜಸ್ಮಾದೇವಿಭವನ ರಸ್ತೆ, ವಸಂತನಗರ, ಬೆಂಗಳೂರು–52
ದೂರವಾಣಿ ಸಂಖ್ಯೆ: 080–29901193, ಇ–ಮೇಲ್: mdkmvstdc@gmail.com
WEB: http://www.karnataka.gov.in/kmvstdcl/Pages/home.aspx
ಸಂಖ್ಯೆ: ಕಮವಾಪಪಂಅನಿನಿ/ಲೆ.ವಿ./ತರಬೇತಿ/ಸಿ.ಆರ್.09/2021–22 ದಿನಾಂಕ: 23.05.2022

ಪ್ರಕಟಣೆ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಡಿ ಕೈಮಗ್ಗ ಮತ್ತು ಜವಳಿ ಇಲಾಖೆ ಹಾಗೂ ಕಿಯೋನಿಕ್ಸ್ ಸಂಸ್ಥೆ ರವರ ಸಹಯೋಗದೊಂದಿಗೆ 2021–22ನೇ ಸಾಲಿಗೆ ಪರಿಶಿಷ್ಟ ಪಂಗಡದ ಯುವಕ/ಯುವತಿಯರಿಗೆ **"ಟೈಲರಿಂಗ್ ಮತ್ತು ಫ್ಯಾಷನ್ ಡಿಜೈನಿಂಗ್"** ತರಬೇತಿ ಕಾರ್ಯಕ್ರಮಕ್ಕೆ ಫಲಾಪೇಕ್ಷಿಗಳಿಂದ ಉಚಿತ ಅರ್ಜಿಗಳನ್ನು ರಾಜ್ಯದ್ಯಂತ ಆಹ್ವಾನಿಸಲಾಗಿದೆ.

ನಿಗಮ ಮತ್ತು ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಸಹಯೋಗದೊಂದಿಗೆ ಟೈಲರಿಂಗ್ ತರಬೇತಿಯನ್ನು ಬೆಂಗಳೂರು ಕೇಂದ್ರದಲ್ಲಿ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು

1. ಫಲಾಪೇಕ್ಷಿಯ ವಯೋಮಿತಿ – 18 ರಿಂದ 45 ವರ್ಷಗಳು ನಿಗದಿಪಡಿಸಲಾಗಿದೆ.
2. ಫಲಾಪೇಕ್ಷಿಯ ವಿದ್ಯಾರ್ಹತೆ ಕನಿಷ್ಟ 5ನೇ ತರಗತಿ ಉತ್ತೀರ್ಣರಾಗಿರಬೇಕು.
3. ಫಲಾಪೇಕ್ಷಿಯ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶವಾದಲ್ಲಿ ರೂ.1,50,000/– ಹಾಗೂ ನಗರ ಪ್ರದೇಶವಾದಲ್ಲಿ ರೂ.2,00,000/– ಮಿತಿಯೊಳಗಿರಬೇಕು.
4. ಫಲಾಪೇಕ್ಷಿಯ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.
5. ಫಲಾಪೇಕ್ಷಿ ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದ ಯಾವುದೇ ಯೋಜನೆಯಡಿ ಸೌಲಭ್ಯ ಪಡೆದಿರಬಾರದು.
6. ಜಿಲ್ಲೆಯಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಈಗಾಗಲೇ ನೊಂದಣೆ ಮಾಡಿಕೊಂಡ ಪರಿಶಿಷ್ಟ ಪಂಗಡದ ಅಂಗವಿಕಲ ಫಲಾನುಭವಿಗಳ ಲಭ್ಯವಿರುವ ಪಟ್ಟಿಯಿಂದ ಅಂಗವಿಕಲರನ್ನು ನೇರವಾಗಿ ಸಂದರ್ಶನ ಮಾಡಿ ಸೌಲಭ್ಯ ಕಲ್ಪಿಸಲಾಗುವುದು

ನಿಗಮ ಮತ್ತು ಕಿಯೋನಿಕ್ಸ್ ಸಂಸ್ಥೆ ಇವರ ಸಹಯೋಗದೊಂದಿಗೆ ಟೈಲರಿಂಗ್ ಮತ್ತು ಫ್ಯಾಷನ್ ಡಿಜೈನಿಂಗ್ ತರಬೇತಿಯನ್ನು ದಾವಣಗೆರೆ ಮತ್ತು ಧಾರವಾಡ ಕೇಂದ್ರದಲ್ಲಿ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು.

1. ಫಲಾಪೇಕ್ಷಿಯ ವಯೋಮಿತಿ – 18 ರಿಂದ 40 ವರ್ಷಗಳು ನಿಗಧಿಪಡಿಸಲಾಗಿದೆ.
2. ಫಲಾಪೇಕ್ಷಿಯ ವಿದ್ಯಾರ್ಹತೆ ಕನಿಷ್ಟ 10ನೇ ತರಗತಿ ಉತ್ತೀರ್ಣರಾಗಿರಬೇಕು.
3. ಫಲಾಪೇಕ್ಷಿಯ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶವಾದಲ್ಲಿ ರೂ.1,50,000/– ಹಾಗೂ ನಗರ ಪ್ರದೇಶವಾದಲ್ಲಿ ರೂ.2,00,000/– ಮಿತಿಯೊಳಗಿರಬೇಕು.
4. ಫಲಾಪೇಕ್ಷಿಯ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.
5. ಫಲಾಪೇಕ್ಷಿ ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದ ಯಾವುದೇ ಯೋಜನೆಯಡಿ ಸೌಲಭ್ಯ ಪಡೆದಿರಬಾರದು.
6. ಜಿಲ್ಲೆಯಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಈಗಾಗಲೇ ನೊಂದಣೆ ಮಾಡಿಕೊಂಡ ಪರಿಶಿಷ್ಟ ಪಂಗಡದ ಅಂಗವಿಕಲ ಫಲಾನುಭವಿಗಳ ಲಭ್ಯವಿರುವ ಪಟ್ಟಿಯಿಂದ ಅಂಗವಿಕಲರನ್ನು ನೇರವಾಗಿ ಸಂದರ್ಶನ ಮಾಡಿ ಸೌಲಭ್ಯ ಕಲ್ಪಿಸಲಾಗುವುದು.

ಫಲಾಪೇಕ್ಷಿಯು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು

1. ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ.
2. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ
3. ಪಡಿತರ ಚೀಟಿ / ಆಧಾರ್ ಕಾರ್ಡ್/ ಮತದಾರರ ಗುರುತಿನ ಚೀಟಿ.
4. ಅರ್ಜಿದಾರರು ಹೊಂದಿರುವ ಬ್ಯಾಂಕ್ ಉಳಿತಾಯ ಖಾತೆಯ ವಿವರಗಳನ್ನೊಳಗೊಂಡ ಪಾಸ್ ಬುಕ್‌ನ ಮೊದಲ ಪುಟದ ಪ್ರತಿ.

ಸಂಪರ್ಕಿಸಬಹುದಾದ ನಿಗಮದ ಜಿಲ್ಲಾ ಕಛೇರಿಗಳ ದೂರವಾಣಿ ಸಂಖ್ಯೆಗಳು: • **ಬೆಂಗಳೂರು ನಗರ:** 080–22220867 • **ಬೆಂಗಳೂರು ಗ್ರಾಮಾಂತರ:** 080–22220867 • **ಬಾಗಲಕೋಟೆ:** 08354–235016 • **ಬೀದರ್:** 8482–233147 • **ವಿಜಯಪುರ:** 08352–276743 • **ಬಳ್ಳಾರಿ:** 08392–245551 • **ಬೆಳಗಾವಿ:** 0831–2451252 • **ಚಾಮರಾಜನಗರ:** 08226–223856 • ಚಿಕ್ಕಮಗಳೂರು: 08262–220717 • **ಚಿತ್ರದುರ್ಗ:** 08194–221055 • **ಚಿಕ್ಕಬಳ್ಳಾಪುರ:** 08156–277161 • ದಾವಣಗೆರೆ: 08192–233309 • **ಧಾರವಾಡ:** 0836–2460855 • **ಗದಗ** : 08372–239557 • **ಕಲಬುರ್ಗಿ** 08472–221331 • **ಹಾಸನ:** 08172–235336 • **ಹಾವೇರಿ:** 08375–234408 • **ಕಾರವಾರ** : 08382–226903 • **ಕೋಲಾರ** : 08152–222561 • **ಕೊಪ್ಪಳ** : 08539–221176 • **ಮಂಡ್ಯ** : 08232–221157 • **ಮಂಗಳೂರು** : 0824–2420114 • **ಮಡಿಕೇರಿ** : 08272–229983 • **ಮೈಸೂರು:** 0821–2430022 • **ರಾಯಚೂರು:**08532–220486 • **ರಾಮನಗರ** : 080–29782111 • **ಶಿವಮೊಗ್ಗ** : 08182–276776 • **ತುಮಕೂರು:** 0816–2280165 • **ಉಡುಪಿ** : 0820–2574884 • **ಯಾದಗಿರಿ:** 08473–253271

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಕಛೇರಿಯಿಂದ ಹಾಗೂ ನಿಗಮದ ವೆಬ್ ಸೈಟ್ www.karnataka.gov.in/kmvstdcl. ನಿಂದ ಪಡೆಯಬಹುದು.
* ಆನ್‌ಲೈನ್ ಅರ್ಜಿ ದಿನಾಂಕ: **26–05–2022** ರಿಂದ ಕೊನೆಯ ದಿನಾಂಕ:**15–06–2022**ರ ವರೆಗೆ ಇರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು
DIPR/CP/641/Yakshi/2022-23
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದೇವನೂರ ಮಹಾದೇವರ ಮನವೊಲಿಸುತ್ತೇನೆ: ನಾಗೇಶ್

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: 'ಪರಿಷ್ಕೃತ ಪಠ್ಯ ಪುಸ್ತಕದಿಂದ ತಮ್ಮ ಪಾಠ ತೆಗೆಯುವಂತೆ ಮನವಿ ಮಾಡಿರುವ ದೇವನೂರ ಮಹಾದೇವ ಅವರ ಮನವೊಲಿಸುತ್ತೇನೆ. ಯಾವ ಒತ್ತಡದಲ್ಲಿ ಹೇಳಿದ್ದಾರೋ ತಿಳಿಯದು. ಈ ಸಂಬಂಧ ಅವರನ್ನು ಖುದ್ದಾಗಿ ಭೇಟಿಯಾಗುತ್ತೇನೆ' ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.



ಬಿ.ಸಿ.ನಾಗೇಶ್

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿ ರಚಿಸಿ ಏಳು ತಿಂಗಳಾಗಿದೆ. ಇದು ಇಡೀ ದೇಶಕ್ಕೆ ಗೊತ್ತಿದೆ. ಪಠ್ಯ ಪುಸ್ತಕ ಮುದ್ರಣವಾಗಿ ಸದ್ದಿಲ್ಲದೆ ಮಕ್ಕಳ ಕೈ ಸೇರಲಿದ್ದು, ಈಗ ಏನು ಮಾಡಲು ಸಾಧ್ಯ? ದೇವನೂರ ಮಹಾದೇವ ಹಿರಿಯರು, ಯಾವ ಕಾರಣಕ್ಕೆ ಅವರಿಗೆ ಅಸಮಾಧಾನವಾಗಿದೆ ಎಂಬುದನ್ನು ಕೇಳಿ ಒಪ್ಪಿಸುವ ಪ್ರಯತ್ನ ಮಾಡುತ್ತೇನೆ' ಎಂದರು.

'ದೇವನೂರ ಹೇಳಿದ್ದು ಸತ್ಯ. ಅಟಲ್ ಬಿಹಾರಿ ವಾಜಪೇಯಿ ಬರುವವರೆಗೆ ಈ ದೇಶವನ್ನು ಒಂದೇ ಸಂಸ್ಥೆಯ ರಾಜಕೀಯ ಪಕ್ಷಗಳು ಆಳಿವೆ. ಬ್ರಿಟಿಷರು ಬರೆದ ಪಠ್ಯ ಪುಸ್ತಕ ಆಧಾರದ ಮೇಲೆ ಬೇರೆ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಪಠ್ಯ ಪುಸ್ತಕ ಮತ್ತಷ್ಟು ವಿಚಾರಗಳಲ್ಲಿ ಬದಲಾವಣೆ ಆಗುತ್ತಿದೆ' ಎಂದು ನುಡಿದರು.

'ಪುಸ್ತಕ ನೋಡದೇ ಚರ್ಚೆ ಶುರು ಮಾಡಿದ ರಾಜಕೀಯ ಪಕ್ಷ ಕಾಂಗ್ರೆಸ್. ತಾನು ಮಾಡಿದ ಅಧ್ವಾನ ಸುಳ್ಳು ಎಂಬುದು ಗೊತ್ತಾಗುವ ವ್ಯಕ್ತಿಯನ್ನು ವಿರೋಧಿಸುವ ನೀತಿ ಕೆಲಸಕ್ಕೆ ಮುಂದಾಗಿದೆ. ಪಠ್ಯದಲ್ಲಿ ವಿಚಾರಗಳ ಬಗ್ಗೆ ಬೇಕಾದರೆ ಚರ್ಚಿಸಲಿ ಅದಕ್ಕೆ ನಾವು ಸಿದ್ಧ' ಎಂದು ಸವಾಲು ಹಾಕಿದರು.

ಆರ್‌ಎಸ್‌ಎಸ್‌ನವರು ಶಿಕ್ಷಣ ಸಚಿವರ ದಾರಿ ತಪ್ಪಿಸಿದ್ದಾರೆಯೇ?: ದೇವನೂರ

ಪ್ರಜಾವಾಣಿ ವಾರ್ತೆ


ಮೈಸೂರು: 'ಪಠ್ಯಪುಸ್ತಕದಿಂದ ನನ್ನ ಕಥನದ ಭಾಗವನ್ನು ಕೈಬಿಡಬೇಕೆಂಬ ನಿಲುವಿಗೆ ಬದ್ಧನಾಗಿದ್ದೇನೆ. ಈ ವಿಚಾರದಲ್ಲಿ ಯಾರೂ ನನ್ನ ದಾರಿ ತಪ್ಪಿಸಿಲ್ಲ' ಎಂದು ಲೇಖಕ ದೇವನೂರ ಮಹಾದೇವ ಸ್ಪಷ್ಟಪಡಿಸಿದರು.

'ಕೆಲವರು ದೇವನೂರ ಅವರ ದಾರಿ ತಪ್ಪಿಸಿರುವ ಸಾಧ್ಯತೆಯಿದೆ' ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿರುವುದಕ್ಕೆ ಬುಧವಾರ ಇಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, 'ಸಂಘ ಪರಿವಾರದವರು ಅವರ ದಾರಿ ತಪ್ಪಿಸಿದ್ದಾರೋ ಎಂದು ನಾವು ಪ್ರಶ್ನಿಸಬೇಕಾಗುತ್ತದೆ' ಎಂದು ತಿರುಗೇಟು ನೀಡಿದರು.

'ಪಠ್ಯಪುಸ್ತಕ ಮುದ್ರಣಗೊಂಡು ಈಗಾಗಲೇ ಮಕ್ಕಳ ಕೈಸೇರಿದ್ದು, ನನ್ನ ಕಥನದ ಪಾಠ ಮಾಡಬೇಡಿ ಎಂದು ಶಿಕ್ಷಕರಿಗೆ ಸೂಚಿಸಲಿ. ಸಚಿವರು ನನ್ನ ಜತೆ ಮಾತನಾಡಿ ಮನವೊಲಿಸುವುದಾದರೆ ತುಂಬಾ ಸಂತೋಷ' ಎಂದರು.

'ಅಧಿಕಾರ ನಡೆಸುತ್ತಿರುವವರು ಕುರುಡರಾಗಿದ್ದಾರೆ. ಕುರುಡು ಎತ್ತು ಬೇಕಾದಂತೆ ಡಿಕ್ಕಿ ಹೊಡೆಯಬಹುದು. ಇತ್ತು ಅಂತಹ ಕೆಲಸ ಆಗುತ್ತಿದೆ. ಅವರು ನಮ್ಮನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗುತ್ತಿದ್ದಾರೆ. 'ಇರಲಿ, ಅವರು ಮಾಡುವುದನ್ನು ಮಾಡಲಿ. ನಾವು ಅದಕ್ಕೆ ಪರ್ಯಾಯವಾಗಿ ಮಕ್ಕಳಿಗೆ ಸಂವಿಧಾನದ ಪಾಠ ಕಲಿಸಿಕೊಡುತ್ತೇವೆ' ಎಂದು ಹೇಳಿದರು.

'ಪಠ್ಯ ಪುಸ್ತಕ ಪರಿಷ್ಕರಣೆ ಮೂಲಕ ಅವರು ಮಾಡಿರುವ ತಪ್ಪುಗಳನ್ನು ಸರಿಪಡಿಸುತ್ತೇವೆ. 5ನೇ ತರಗತಿಯಿಂದ ಎಸ್ಸೆಸ್ಸೆಲ್ಸಿವರೆಗಿನ ಮಕ್ಕಳಿಗೆ ತಜ್ಞರ ನೆರವಿನಿಂದ ಆನ್‌ಲೈನ್ ಮೂಲಕ ಸಂವಿಧಾನದ ಪಾಠ ಕಲಿಸಿಕೊಡುತ್ತೇವೆ. ಮಕ್ಕಳು ಪ್ರಶ್ನಿಸುವ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ಮೂಢನಂಬಿಕೆಗಳಿಗೆ ಬಲಿಯಾಗಬಾರದು' ಎಂದರು.



ದೇವನೂರ ಮಹಾದೇವ


ಹೊಸ ಪಠ್ಯಪುಸ್ತಕ ತಡೆಹಿಡಿಯಿರಿ: ಹಂಪನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲೆಗಳು ಪ್ರಾರಂಭವಾಗಿವೆ. ಆದರೆ, ಪಠ್ಯಪುಸ್ತಕ ವಿವಾದ ಚಕ್ರತೀರ್ಥದಲ್ಲಿ ಒದ್ದಾಡುತ್ತ, ಸರ್ಕಾರವನ್ನು ಪೇಚಿಗೆ ಸಿಲುಕಿಸಿದೆ. ಪಠ್ಯ ಪರಿಷ್ಕರಣೆಗೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳು ಅಂತ್ಯ ಕಾಣುವವರೆಗೆ ಹೊಸ ಪಠ್ಯಪುಸ್ತಕ ತಡೆಹಿಡಿಯಬೇಕು' ಎಂದು ಸಾಹಿತಿ ಹಂ.ಪ.ನಾಗರಾಜಯ್ಯ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಂಪನಾ ಪತ್ರ ಬರೆದಿದ್ದಾರೆ.

'ಶಾಲೆ ಆರಂಭವಾಗಿರುವ ಹೊತ್ತಿನಲ್ಲಿ ಉಂಟಾಗಿರುವ ಗೊಂದಲಗಳು ವಿದ್ಯಾರ್ಥಿಗಳು ಹಾಗೂ ಪೋಷಕರ ತಳಮಳಕ್ಕೆ ಕಾರಣವಾಗಿವೆ. ವ್ಯಕ್ತಿಗಳನ್ನು ಅನಗತ್ಯವಾಗಿ ನಿಂದನೆ ಮಾಡುವ ಅಪಾಯದ ಪ್ರವೃತ್ತಿ ಹಬ್ಬುತ್ತಿದೆ. ಕವಿ ಕುವೆಂಪು ಅವರ ಕುರಿತು ಅವಹೇಳನಕಾರಿ ಬರಹಗಳು ಹರಿದಾಡುತ್ತಿವೆ. ದಿನದಿಂದ ದಿನಕ್ಕೆ ಪರ ವಿರೋಧದ ಚರ್ಚೆಗಳು ತೂಕ ತಪ್ಪಿ ಬಿಸಿ ಏರುತ್ತಿದೆ' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.



ಹಂಪನಾ

'ಶಾಲಾ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳು ತಾರ್ಕಿಕ ಅಂತ್ಯ ಕಾಣುವವರೆಗೆ ಹೊಸ ಪಠ್ಯವನ್ನು ತಡೆಹಿಡಿದು, ಹಿಂದಿನ ಪಠ್ಯವನ್ನೇ ಮುಂದುವರಿಸಲು ಸುತ್ತೋಲೆ ಹೊರಡಿಸಬೇಕು. ಈ ಮೂಲಕ ಕಲುಷಿತ ವಾತಾವರಣ ತಿಳಿಗೊಳಿಸಬೇಕು' ಎಂದು ಸಲಹೆ ನೀಡಿದ್ದಾರೆ.

'ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಈ ಅನಾರೋಗ್ಯಕರ ಬೆಳವಣಿಗೆಗಳ ಬಗ್ಗೆ ಸರ್ಕಾರ ತಟಸ್ಥವಾಗಿರಬಾರದು. ಕೂಡಲೇ ಕಾರ್ಯಪ್ರವೃತ್ತರಾಗಿ ಮಧ್ಯಪ್ರವೇಶಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಕುವೆಂಪು ಪರಿಚಯ ನಾವು ಬರೆದಿಲ್ಲ'

'ನಾಲ್ಕನೇ ತರಗತಿಯ ಪರಿಸರ ಅಧ್ಯಯನ ಪಠ್ಯಕ್ರಮದಲ್ಲಿ ಕುವೆಂಪು ಅವರ ಕುರಿತ ಪರಿಚಯವು ಪಠ್ಯಪುಸ್ತಕದ ಮೂಲ ರಚನೆಯ ಸಂದರ್ಭದಲ್ಲೇ ಬರೆಯಲಾಗಿದೆ' ಎಂದು ಸಾಹಿತಿ ಹಾಗೂ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಪ್ರೊ.ಬರಗೂರು ರಾಮಚಂದ್ರಪ್ಪ ಸ್ಪಷ್ಟಪಡಿಸಿದ್ದಾರೆ.

'ಪಠ್ಯಕ್ರಮದಲ್ಲಿರುವ ಕುವೆಂಪು ಅವರ ಕುರಿತ ಪರಿಚಯವನ್ನು ನನ್ನ ನೇತೃತ್ವದ ಸಮಿತಿಯು ಬರೆದಿದೆ ಎಂದು ಹೇಳಲಾಗುತ್ತಿದೆ. ಆದರೆ, ಈ ಪರಿಚಯವು ಪಠ್ಯಪುಸ್ತಕದ ಮೂಲ ರಚನೆಯಲ್ಲಿ ಬರೆಯಲಾಗಿದೆ. ನಮ್ಮ ಕಾಲದ ಪರಿಷ್ಕರಣೆಯಲ್ಲಿ ಬರೆದದ್ದಲ್ಲ. ಇಷ್ಟಕ್ಕೂ ಕುವೆಂಪು ಅವರ 'ಮನುಜ ಮತ ವಿಶ್ವಪಥ' ಸಂದೇಶದ ಬೆಳಕಿನಲ್ಲಿ ಸಾಗುತ್ತಿರುವ ನಾನು ಮತ್ತು ನನ್ನಂಥವರು ಅವರ ಅಪೂರ್ವ ಸಾಧನೆಯನ್ನು ಸ್ವಲ್ಪವೂ ಕಡೆಗಣಿಸಲು ಸಾಧ್ಯವೇ ಇಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬರಗೂರು ರಾಮಚಂದ್ರಪ್ಪ

'ಪಠ್ಯಪುಸ್ತಕಗಳ ವಿಷಯದಲ್ಲಿ ಈಗ ನಡೆಯುತ್ತಿರುವ ವಿವಾದಕ್ಕೆ ತೆರೆ ಎಳೆಯಲು ಮುಖ್ಯಮಂತ್ರಿ ಅವರು ಮಧ್ಯಪ್ರವೇಶಿಸಬೇಕು. ವಿದ್ಯಾರ್ಥಿಗಳು ಮತ್ತು ಪೋಷಕರಲ್ಲದೆ ಸಾರ್ವಜನಿಕರಲ್ಲಿ ಶಿಕ್ಷಣ ಕ್ಷೇತ್ರದ ಬಗ್ಗೆ ಅಪನಂಬಿಕೆ ಮೂಡದಂತೆ ನೋಡಿಕೊಳ್ಳಬೇಕು' ಎಂದು ಕೋರಿದ್ದಾರೆ.

ಕುವೆಂಪು ಪರಿಚಯ: ಈ ಪಠ್ಯದಲ್ಲಿ ಕೃತಿಕಾರರ ಪರಿಚಯ ಶೀರ್ಷಿಕೆ ಅಡಿಯಲ್ಲಿ ಕುವೆಂಪು ಅವರ ವ್ಯಕ್ತಿತ್ವ, ಸಾಹಿತ್ಯ ಮತ್ತು ಸಾಧನೆಯನ್ನು ಪರಿಚಯ ಮಾಡುವ ಪ್ರಯತ್ನ ಮಾಡಲಾಗಿದೆ.

ಕುವೆಂಪು ಅವರ ರಚಿಸಿರುವ ಪ್ರಮುಖ ಕೃತಿಗಳು, ಪ್ರಮುಖ ಪ್ರಶಸ್ತಿಗಳು ಹಾಗೂ 1992ರಲ್ಲಿ ಕರ್ನಾಟಕ ರತ್ನ ಪ್ರಶಸ್ತಿ ಲಭಿಸಿರುವುದನ್ನು ಉಲ್ಲೇಖಿಸಲಾಗಿದೆ. ಕುವೆಂಪು ಅವರ ಪಕ್ಷಿಕಾಶಿ ಕವನ ಸಂಕಲನದಿಂದ ಪದ್ಯಭಾಗವನ್ನು ಆಯ್ದುಕೊಂಡಿರುವುದನ್ನು ಸಹ ಈ ಪಠ್ಯದಲ್ಲಿ ಉಲ್ಲೇಖಿಸಲಾಗಿದೆ.

ಎಲ್ಲಾ ತೀರ್ಮಾನ 'ಕೇಶವ ಕೃಪಾ'ದಲ್ಲಿ: ಎಚ್‌ಡಿಕೆ

ಮೈಸೂರು/ಹಾಸನ: 'ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಕೇಶವಕೃಪಾದಲ್ಲಿ ತೆಗೆದುಕೊಳ್ಳುವ ತೀರ್ಮಾನದಂತೆ ನಡೆದುಕೊಳ್ಳುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಮಂಗಳೂರಿನ ಮಳಲಿ ಮಸೀದಿ ತಾಂಬೂಲ ಪ್ರಶ್ನೆ ವಿಚಾರದ ಕುರಿತು ಬುಧವಾರ ಇಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, 'ತಾಂಬೂಲ ಪ್ರಶ್ನೆಗಿಂತ ಕೇಶವಕೃಪಾದಲ್ಲಿ ತೆಗೆದುಕೊಳ್ಳುವ ನಿರ್ಧಾರವೇ ಮುಖ್ಯವಾಗುತ್ತದೆ. ಅಲ್ಲಿಂದ ಬರುವ ಸಂದೇಶಗಳನ್ನು ಇವರು ಪಾಲಿಸುವರು. ಇಂತಹ ವಾತಾವರಣದಿಂದ ದೇಶಕ್ಕೆ ಉತ್ತಮ ಭವಿಷ್ಯ ಇಲ್ಲ. ಇನ್ನೂ ಒಂದು ವರ್ಷ ಈ ರೀತಿಯ ಬೆಳವಣಿಗೆಗಳು ನಡೆಯುತ್ತಿರುತ್ತವೆ. ಶಾಂತಿ, ಸಾಮರಸ್ಯ ಮತ್ತಷ್ಟು ಹದಗೆಡಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣದ ಜಾಮಿಯಾ ಮಸೀದಿ ವಿವಾದದ ಬಗ್ಗೆ ಪ್ರತಿಕ್ರಿಯಿಸಿ, 'ದೇವರು ಕನಸಲ್ಲಿ ಬಂದು ನನ್ನ ಮೂಲ ಸ್ಥಾನ ಇಲ್ಲಿದೆ ಅಂತ ಇವರಿಗೆ ಹೇಳಿದನಾ? ಟಿಪ್ಪು ಕಾಲದಲ್ಲಿ ಹಲವು ಹಿಂದೂ ದೇವಾಲಯಗಳಿಗೆ ಭೂಮಿ ದಾನ ಮಾಡಿದ್ದ. ಆ ಸಮಾಜದವರು ಬಂದು ಕೇಳಿದರೆ ನೀವು ಭೂಮಿ ಬಿಟ್ಟುಕೊಡ್ತೀರಾ? ಇಂತಹ ವಿವಾದಗಳನ್ನು ಬದಿಗಿಟ್ಟು, ಜನರ ಬದುಕು ಕಟ್ಟಿಕೊಡಿ' ಎಂದು ಸಲಹೆ ನೀಡಿದರು.

ತಮ್ಮ ಪಾಠ ಕೈಬಿಡಬೇಕೆಂಬ ದೇವನೂರ ಮಹಾದೇವ ಮನವಿ ಕುರಿತು ಪ್ರತಿಕ್ರಿಯಿಸಿ, 'ಇದು ಅವರ ವೈಯಕ್ತಿಕ ವಿಚಾರ. ತಮ್ಮ ಭಾವನೆಗಳನ್ನು ಯಾವುದಕ್ಕೂ ಉಪಯೋಗ ಮಾಡಿಕೊಳ್ಳಬಾರದೆಂದು ಲೇಖಕರು ಹೇಳಿದ್ದರೆ ಅದನ್ನು ಗೌರವಿಸಬೇಕು' ಎಂದರು.

'ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆ ಹೆಸರಿನಲ್ಲಿ ಭಾವೈಕ್ಯ ಹಾಳುಗೆಡುವುವ ಸನ್ನಿವೇಶವನ್ನು ಸರ್ಕಾರ ಹುಟ್ಟು ಹಾಕಿದೆ' ಎಂದು ದೂರಿದರು.

'ಪಠ್ಯ ಪುಸ್ತಕಗಳಲ್ಲಿ ಕೆಲವರ ವಿಷಯಗಳನ್ನು ವೈಭವೀಕರಿಸಲಾಗುತ್ತಿದೆ. ಹಲವು ಮಹನೀಯರ ಸಂಗತಿಗಳನ್ನು ಕೈ ಬಿಡಲಾಗುತ್ತಿದೆ. ಸತ್ಯಾಂಶ ತಿರುಚುವ ಮೂಲಕ ಶಾಲಾ ಪಠ್ಯ ಪುಸ್ತಕದಲ್ಲಿ ಬದಲಾವಣೆ ತರಲು ಹೊರಟಿದ್ದಾರೆ' ಎಂದು ಕಿಡಿಕಾರಿದರು.

'ಪಠ್ಯದಲ್ಲಿ ಹೆಡಗೇವಾರ್: ಕಾಂಗ್ರೆಸ್ ಪ್ರತಿಭಟಿಸದಿರುವುದು ಸೋಜಿಗ'

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): 'ರಾಷ್ಟ್ರ ಧ್ವಜದ ಬಗ್ಗೆ ಕಿಂಚಿತ್ತೂ ಗೌರವ ಇಲ್ಲದ ಮತ್ತು ಕೋಮುವಾದವನ್ನು ಜೀವಾಳ ಮಾಡಿಕೊಂಡಿದ್ದ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ವಿಚಾರಗಳು ಪಠ್ಯ ಸೇರುತ್ತಿದ್ದರೂ ಕಾಂಗ್ರೆಸ್ ಪಕ್ಷ ಪ್ರತಿಭಟಿಸದಿರುವುದು ಸೋಜಿಗ' ಎಂದು ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ.

ಬುಧವಾರ ಇಲ್ಲಿ ನಡೆದ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳು ಓದುವ ಪಠ್ಯಪುಸ್ತಕಗಳಲ್ಲಿ ಕೋಮುವಾದಿಗಳ ಅಟ್ಟಹಾಸ ಮೆರೆಯುತ್ತಿದೆ ಎಂದರು.

'ಮಕ್ಕಳಿಗೆ ವಿಷ ಉಣಿಸಲಾಗುತ್ತಿದೆ. ಇಂತಹ ಸಮಯದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಆ ಹೊತ್ತಿನ ಗಂಜಿ ಹುಡುಕಿಕೊಳ್ಳುತ್ತಿವೆ. ಈ ಪಕ್ಷಗಳಿಗೆ ಕೇವಲ ಹೊತ್ತು ಹೊತ್ತಿಗೆ ಗಂಜಿಯೇ ಮುಖ್ಯವಾಗಿದೆ' ಎಂದು ಅವರು ಅಸಮಾಧಾನ ಹೊರಹಾಕಿದರು.

'ದೇಶದ ಆಡಳಿತ ಇಂದು ಬಹುವೇಷ ತೊಟ್ಟವರು, ಬಹುಮೂರ್ತಿಗಳದ್ದೇ ಆಗಿದೆ. ಜನಹಿತಕ್ಕಿಂತ ಜನರನ್ನು ಮರುಳುಮಾಡುವ ಮಾತುಗಳೇ ಅಧಿಕವಾಗಿವೆ. ಇದೊಂದು ಬುಡುಬುಡಿಕೆ ಆಳ್ವಿಕೆ' ಎಂದು ಟೀಕಿಸಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ತುಂಬಾ ಉಪಯೋಗವಾಗಿದೆ



'ಪ್ರಜಾವಾಣಿ' ಸಂಸ್ಥೆ ನೀಡಿದ ವಿದ್ಯಾರ್ಥಿ ವೇತನದಿಂದ ಮುಂದಿನ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಲು ಬೇಕಾದ ಪುಸ್ತಕಗಳನ್ನು ಖರೀದಿಸಿದೆ. ವಿದ್ಯಾರ್ಥಿ ವೇತನ ತುಂಬಾ ಉಪಯೋಗವಾಗಿದೆ. ನಮ್ಮಂತಹವರನ್ನು ಗುರುತಿಸಿ ಹಣ ನೀಡಿದ ಪತ್ರಿಕೆಗೆ ಧನ್ಯವಾದಗಳು. ಹಲವು ವಿದ್ಯಾರ್ಥಿಗಳಿಗೆ ಈ ಸೌಲಭ್ಯ ದೊರೆಯಲಿ.

ಎಂ.ಎನ್‌.ಲೋಹಿತ್‌ಗೌಡ, ತುಮಕೂರು

ಪುಸ್ತಕ ಖರೀದಿ



ಪಿಯುಸಿ ವಿದ್ಯಾಭ್ಯಾಸದ ನಂತರ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ ತೆಗೆದುಕೊಳ್ಳಬೇಕು. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಅಗತ್ಯವಿರುವ ಪುಸ್ತಕಗಳನ್ನು ಖರೀದಿಸಿದೆ. ಸದ್ಯ ದ್ವಿತೀಯ ಪಿಯು ವಿದ್ಯಾಭ್ಯಾಸಕ್ಕೆ ಉಪಯೋಗವಾಗುವ ಪುಸ್ತಕಗಳನ್ನು ಕೂಡ ಇದೇ ಹಣದಲ್ಲಿ ಖರೀದಿ ಮಾಡಿದ್ದೇನೆ. ಕಾಲೇಜಿನ ಸಮವಸ್ತ್ರ ಸೇರಿದಂತೆ ವಿದ್ಯಾಭ್ಯಾಸಕ್ಕೆ ಹಣ ಬಳಕೆ ಮಾಡಿದ್ದೇನೆ.

ಡಿ.ಧ್ರುವ, ತುಮಕೂರು

ಜೂನ್ 3ರಿಂದ ರಾಜ್ಯ ಮಟ್ಟದ ಭಗೀರಥ ಜಯಂತಿ

ಹೊಸದುರ್ಗ: ತಾಲ್ಲೂಕಿನ ಭಗೀರಥ ಪೀಠದಲ್ಲಿ ಜೂನ್ 3 ಮತ್ತು 4ರಂದು ಎಲ್ಲ ಸಮುದಾಯದವರನ್ನು ಒಳಗೊಂಡು ಅದ್ದೂರಿಯಾಗಿ ಅಖಿಲ ಭಾರತ ಭಗೀರಥ ಜಯಂತ್ಯುತ್ಸವ, ಭಗೀರಥ ದೇವಸ್ಥಾನ ಲೋಕಾರ್ಪಣೆ ಹಾಗೂ ಉಪ್ಪಾರರ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಭಗೀರಥ ಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಸಮುದಾಯದ ಮುಖಂಡರ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ಜೂನ್ 3ರಂದು ಎಲ್ಲ ಸಂತರ ಭಾವಚಿತ್ರಗಳ ಮೆರವಣಿಗೆ ನಡೆಯಲಿದೆ. ಪ್ರತಿಭಾ ಪುರಸ್ಕಾರ, ಉಚಿತ ಸಾಮೂಹಿಕ ವಿವಾಹ ನಡೆಯಲಿದೆ. ಜೂನ್ 4ರಂದು ಆಯೋಜಿಸಿರುವ ಜಯಂತಿ, ದೇವಸ್ಥಾನ ಲೋಕಾರ್ಪಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಎ.ನಾರಾಯಣ ಸ್ವಾಮಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಪಿ.ಪಾಟೀಲ್, ವಿವಿಧ ಮಠಾಧೀಶರು ಭಾಗವಹಿಸುವರು ಎಂದು ತಿಳಿಸಿದರು.

ಎಸ್ಸೆಸ್ಸೆಲ್ಸಿ: ಬ್ಲ್ಯಾಕ್‌ಮೇಲ್ ಮಾಡಿ ಸಿಕ್ಕಿಬಿದ್ದರು!

ಪ್ರಜಾವಾಣಿ ವಾರ್ತೆ

ರಾಮನಗರ: ಏಪ್ರಿಲ್ 11ರಂದು ಎಸ್ಸೆಸ್ಸೆಲ್ಸಿಯ ವಿಜ್ಞಾನ ಪರೀಕ್ಷೆ ನಡೆದಿದ್ದು, ಅಂದು 10.30ಕ್ಕೆ ಆರೋಪಿ ರಂಗೇಗೌಡ ಪ್ರಶ್ನೆ-ಪತ್ರಿಕೆಯನ್ನು ವಾಟ್ಸ್‌ಆ್ಯಪ್‌ನಲ್ಲಿ ಕೃಷ್ಣಮೂರ್ತಿಗೆ ಕಳುಹಿಸುವ ಬದಲಾಗಿ ಶಿಕ್ಷಕರ ಗುಂಪೊಂದಕ್ಕೆ ಹಾಕಿದ್ದರು. ನಂತರ ಎಚ್ಚೆತ್ತು ಅದನ್ನು ಡಿಲೀಟ್ ಮಾಡಿದ್ದರು. ಅಷ್ಟರಲ್ಲೇ ಶಿಕ್ಷಕ ಲೋಕೇಶ್ ಗುಂಪಿನಿಂದ ಪ್ರಶ್ನೆಪತ್ರಿಕೆಯನ್ನು ತಮ್ಮ ಮೊಬೈಲ್‌ಗೆ ಡೌನ್‌ಲೋಡ್ ಮಾಡಿಕೊಂಡಿದ್ದರು.

ಇದನ್ನೇ ಇಟ್ಟುಕೊಂಡು ಶಿಕ್ಷಕ ಲೋಕೇಶ್, ರಂಗೇಗೌಡ ಅವರನ್ನು ಬ್ಲ್ಯಾಕ್‌ಮೇಲ್ ಮಾಡಿ ₹10 ಸಾವಿರ ಪಡೆದಿದ್ದರು. ಸ್ಥಳೀಯ ಪತ್ರಿಕೆಯೊಂದರ ಪತ್ರಕರ್ತ ವಿಜಯ್‌ಕುಮಾರ್ ಸಹ ರಂಗೇಗೌಡ ಅವರನ್ನು ಬೆದರಿಸಿ ಹಣ ವಸೂಲಿ ಮಾಡಿದ್ದರು. ಈ ಇಬ್ಬರು ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದು, ಇದಕ್ಕೆ ರಂಗೇಗೌಡ ಒಪ್ಪಿರಲಿಲ್ಲ. ಹೀಗಾಗಿ ಲೋಕೇಶ್ ಬೇರೊಂದು ಹೆಸರಿನಲ್ಲಿ ಮಾಗಡಿ ಪೊಲೀಸರಿಗೆ ಪತ್ರ ಬರೆದು ವಿಷಯ ಬಹಿರಂಗಪಡಿಸಿದರು ಎಂದು ತಿಳಿದುಬಂದಿದೆ.

ರಂಗೇಗೌಡ ಅವರನ್ನು ಪೊಲೀಸರು ವಶಕ್ಕೆ ಪಡೆದ ನಂತರ ಮಂಗಳವಾರ ಸಂಜೆ ರಾಮನಗರ ಡಿಡಿಪಿಐ ಗಂಗಣ್ಣಸ್ವಾಮಿ ಅವರು ಪೊಲೀಸರಿಗೆ ದೂರು ನೀಡಿದ್ದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಗಂಗಣ್ಣಸ್ವಾಮಿ ಅವರು ಕಚೇರಿಯಲ್ಲೂ ಸಿಗಲಿಲ್ಲ, ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

ಬಿಇಒ ತಲೆದಂಡ ಸಾಧ್ಯತೆ

ಅಕ್ರಮದ ಮಾಹಿತಿ ಗೊತ್ತಿದ್ದರೂ ಕ್ರಮ ಕೈಗೊಳ್ಳದ ಆರೋಪದ ಮೇಲೆ ಮಾಗಡಿ ಕ್ಷೇತ್ರ ಶಿಕ್ಷಣಾಧಿಕಾರಿ ಯತಿಕುಮಾರ್ ವಿರುದ್ಧ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ವಾಟ್ಸ್‌ಆ್ಯಪ್‌ನಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾದ ಸಂಗತಿ ಯತಿಕುಮಾರ್ ಅವರಿಗೆ ಮೊದಲೇ ತಿಳಿದಿತ್ತು. ಆರೋಪಿಗಳ ಬಗ್ಗೆ ಗೊತ್ತಿದ್ದರೂ ಅವರು ಮೇಲಧಿಕಾರಿಗಳಿಗೆ ಮಾಹಿತಿ ನೀಡಿ ಕ್ರಮಕ್ಕೆ ಮುಂದಾಗಲಿಲ್ಲ ಎಂದು ದೂರಲಾಗಿದೆ.

ಪ್ರತಿಕ್ರಿಯೆಗೆ ಯತಿಕುಮಾರ್ ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ. ಬುಧವಾರ ಇಡೀ ದಿನ ಅವರ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಗರಡಿಮನೆ ಕತೆ
https://bit.ly/3wLNxqr
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ ಸಚಿವಾಲಯ ಬಂದ್‌ಗೆ ಕರೆ ಕೊಟ್ಟ ನೌಕರರು

ಬೆಂಗಳೂರು: ಸಚಿವಾಲಯದ 542 ಕಿರಿಯ ಸಹಾಯಕರ ಹುದ್ದೆಗಳನ್ನು ಕಡಿತಗೊಳಿಸುವ ಪ್ರಸ್ತಾವನೆ ಕೈಬಿಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇದೇ 27ರಂದು ಸಚಿವಾಲಯ ಬಂದ್ ಮಾಡಲು ಕರ್ನಾಟಕ ಸರ್ಕಾರ ಸಚಿವಾಲಯದ ನೌಕರರ ಸಂಘ ನಿರ್ಧರಿಸಿದೆ.

'ಆಡಳಿತ ಸುಧಾರಣೆಯ ನೆಪದಲ್ಲಿ ಸಚಿವಾಲಯದ ಹಲವು ಶಾಖೆಗಳನ್ನು ವಿಲೀನ ಅಥವಾ ರದ್ದುಗೊಳಿಸಲು ಸರ್ಕಾರ ಮುಂದಾಗಿದೆ. ಅಲ್ಲದೆ, ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವಿರುದ್ಧವಾಗಿ ಕೆಲವು ಕ್ರಮಗಳನ್ನು ಅನುಸರಿಸುತ್ತಿರುವ ಸರ್ಕಾರದ ನೌಕರ ವಿರೋಧಿ ಧೋರಣೆಯನ್ನು ವಿರೋಧಿಸಿ ಶುಕ್ರವಾರದಂದು ಸಾಮೂಹಿಕವಾಗಿ ರಜೆ ಹಾಕುವ ಮೂಲಕ ಸಚಿವಾಲಯ ಬಂದ್ ಮಾಡಲು ನಿರ್ಧರಿಸಿದ್ದೇವೆ' ಎಂದು ಸಂಘದ ಅಧ್ಯಕ್ಷ ಪಿ. ಗುರುಸ್ವಾಮಿ ತಿಳಿಸಿದರು.

'ನಿವೃತ್ತಿಯಾದ ಅಧಿಕಾರಿ, ನೌಕರರ ಮರು ನೇಮಕಾತಿ ರದ್ದು ಮಾಡಬೇಕು, ಸಚಿವಾಲಯ ಅಧಿಕಾರಿಗಳು ನಿಯೋಜನೆ ಮೇರೆಗೆ ಇತರೆ ಇಲಾಖೆಗೆ ಹೋಗುವ ಅವಕಾಶ ಮರುಸ್ಥಾಪಿಸಬೇಕು, ಯಾವುದೇ ಇಲಾಖೆಯಲ್ಲಿ ಹುದ್ದೆಗಳ ಕಡಿತ ಪ್ರಸ್ತಾವನ ಕೈಬಿಡಬೇಕು ಮುಂತಾದ ಬೇಡಿಕೆಗಳನ್ನು ಈಡೇರಿಸುವಂತೆ ನಾವು ಹಲವು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಆದರೆ, ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸಿಲ್ಲ' ಎಂದು ಹೇಳಿದರು.

ಕಾನೂನು ಆದೇಶ ಪಾಲಿಸುವುದಾಗಿ ಭರವಸೆ ನೀಡಿದ ಮಸೀದಿ ಆಡಳಿತ ಮಂಡಳಿ

ಮಳಲಿ ಮಸೀದಿಯಲ್ಲಿ ದೈವ ಸಾನ್ನಿಧ್ಯ: ಜ್ಯೋತಿಷಿ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ತೆಂಕ ಉಳಿಪಾಡಿ ಮಳಲಿ ಪೇಟೆಯ ಜುಮ್ಮಾ ಮಸೀದಿ ನವೀಕರಣದ ವೇಳೆ ಒಳಗಡೆ ದೇವಾಲಯದ ರಚನೆಗಳು ಕಂಡುಬಂದ ಹಿನ್ನೆಲೆಯಲ್ಲಿ ವಿವಿಧ ಹಿಂದುತ್ವ ಸಂಘಟನೆಗಳು ಬುಧವಾರ ತಾಂಬೂಲ ಪ್ರಶ್ನೆ ಹಮ್ಮಿಕೊಂಡಿದ್ದವು. ಇದರಲ್ಲಿ ಪಾಲ್ಗೊಂಡಿದ್ದ ಕೇರಳದ ಜ್ಯೋತಿಷಿಗಳು, 'ಇಲ್ಲಿ ದೇವರ ಸಾನ್ನಿಧ್ಯ ಇದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಸೀದಿ ಸಮೀಪದ ರಾಮಾಂಜನೇಯ ಭಜನಾ ಮಂದಿರದಲ್ಲಿ ನಡೆದ ತಾಂಬೂಲ ಪ್ರಶ್ನೆಯಲ್ಲಿ ಜ್ಯೋತಿಷಿ ಗೋಪಾಲಕೃಷ್ಣ ಪಣಿಕ್ಕರ್ ಅವರು, 'ಗ್ರಹಗತಿ ಆಧರಿಸಿ ಲೆಕ್ಕಾಚಾರ ಹಾಕಿದಾಗ ಇಲ್ಲಿ ಗುರುಮಠ ಇರುವುದು ಗೋಚರಿಸಿದೆ. ಇಲ್ಲಿ ಶಿವನ ಆರಾಧನೆಯೂ ನಡೆದಿರಬಹುದು. ಶೈವ- ವೈಷ್ಣವರ ವಿವಾದದಲ್ಲಿ ಇಲ್ಲಿನ ದೈವ ಸಾನ್ನಿಧ್ಯ ನಾಶವಾಗಿದೆ. ಹಾಗಾಗಿ ಇಲ್ಲಿ ಇದ್ದವರು ಕೂಡ ಸ್ಥಳಾಂತರಗೊಂಡಿದ್ದಾರೆ. ಆದರೆ ದೈವ ಸಾನ್ನಿಧ್ಯವು ಅಲ್ಲಿಂದ ಪೂರ್ತಿಯಾಗಿ ಹೋಗಿಲ್ಲ. ಯಾವ ಸ್ಥಳದಲ್ಲಿ ದೈವ ಸಾನ್ನಿಧ್ಯವಿದೆ ಎಂದು ಶೋಧಿಸಬೇಕು' ಎಂದು ಜ್ಯೋತಿಷಿ ಹೇಳಿದ್ದಾರೆ. ಈ ಸಂಗತಿ ಈಗ ಚರ್ಚೆಯ ವಿಷಯವಾಗಿದೆ.

ಮಸೀದಿ ನವೀಕರಣದ ವೇಳೆ ದೇವಾಲಯ ರಚನೆಗಳು ಕಂಡುಬಂದ ಕಾರಣ ಕೆಲವು ಹಿಂದುತ್ವ ಸಂಘಟನೆಗಳು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದವು. ಸ್ಥಳೀಯ ಜೆಎಂಎಫ್‌ಸಿ ನ್ಯಾಯಾಲಯವು ನವೀಕರಣಕ್ಕೆ ಸಂಬಂಧಿಸಿ, ಮುಂದಿನ ಆದೇಶದವರೆಗೆ ಯಾವುದೇ ನಿರ್ಮಾಣ ಕಾಮಗಾರಿ ಅಥವಾ ಯಾವುದೇ ಚಟುವಟಿಕೆ ನಡೆಸದಂತೆ ನಿರ್ದೇಶನ ನೀಡಿತ್ತು.

ತಾಂಬೂಲ ಪ್ರಶ್ನೆಯ ಕಾರಣಕ್ಕೆ ಮಳಲಿ ಮಸೀದಿ ಸುತ್ತಲಿನ 500 ಮೀಟರ್ ವ್ಯಾಪ್ತಿಯಲ್ಲಿ ಮೇ 24ರ ರಾತ್ರಿ 8 ಗಂಟೆಯಿಂದ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಅದು ಮೇ 26ರ ಬೆಳಿಗ್ಗೆ 8 ಗಂಟೆಯವರೆಗೆ ಮುಂದುವರಿಯಲಿದೆ.

'ಮಸೀದಿ ಆಡಳಿತ ಮಂಡಳಿಯವರು ಮತ್ತು ಪ್ರಮುಖರ ಸಭೆ ನಡೆಸಲಾಗಿದೆ. ನ್ಯಾಯಾಲಯದ ಆದೇಶ ಪಾಲಿಸುವುದರ ಜತೆಗೆ ಜಿಲ್ಲಾಡಳಿತದ ನಿರ್ದೇಶನಕ್ಕೆ ಪಾಲಿಸುವುದಾಗಿ ಮಸೀದಿ ಆಡಳಿತ ಮಂಡಳಿಯವರು ತಿಳಿಸಿದ್ದಾರೆ. ಜಿಲ್ಲೆಯ ಜನರು ಶಾಂತಿ ಕಾಪಾಡಿಕೊಳ್ಳಬೇಕು' ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ ಮನವಿ ಮಾಡಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಯ ಮಳಲಿಯಲ್ಲಿ ನಡೆದ ತಾಂಬೂಲ ಪ್ರಶ್ನೆಯಲ್ಲಿ ಕೇರಳದ ಜ್ಯೋತಿಷಿ ಗೋಪಾಲಕೃಷ್ಣ ಪಣಿಕ್ಕರ್ ಮಾತನಾಡಿದರು.

> **ಸರ್ಕಾರ ಮಧ್ಯಪ್ರವೇಶಿಸುವ ಜತೆಗೆ ವೈಯಕ್ತಿಕ ನಂಬಿಕೆಗಳನ್ನು ಬೇರೆಯವರ ಮೇಲೆ ಹೇರುವುದನ್ನು ತಡೆಯಬೇಕು. ಸರ್ಕಾರದ ವಿಚಾರದಲ್ಲಿ ಭವಿಷ್ಯ ಹೇಳುವವರನ್ನೂ ಬಂಧಿಸಬೇಕು**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> **ತಾಂಬೂಲ ಪ್ರಶ್ನೆ ಇಡುವುದು, ಅದರ ಆಧಾರದಲ್ಲಿ ಮಸೀದಿ ಹೌದೊ, ಅಲ್ಲವೊ ಎಂದು ನಿರ್ಧರಿಸಲು ಬಿಜೆಪಿಯ ಸಹೋದರ ಸಂಘಟನೆ ವಿಶ್ವಹಿಂದೂ ಪರಿಷತ್‌ನವರು ಯಾರು?**
> **ಮುನೀರ್ ಕಾಟಿಪಳ್ಳ**
> ಡಿವೈಎಫ್‌ಐ ರಾಜ್ಯಾಧ್ಯಕ್ಷ

ತಾಂಬೂಲ ಪ್ರಶ್ನೆ ಹೇಗೆ?

ವೀಳ್ಯದೆಲೆಗಳ ಲೆಕ್ಕಾಚಾರದ ಆಧಾರದಲ್ಲಿ ಗ್ರಹಗತಿಗಳ ಚಲನೆ ಮೇಲೆ, ದೈವಿ ಶಕ್ತಿ ಪತ್ತೆ ಕಾರ್ಯ ನಡೆಯುತ್ತದೆ. ತಾಂಬೂಲ ಪ್ರಶ್ನೆ ಇಡುವವರು ವೀಳ್ಯದೆಲೆಗಳನ್ನು ಜ್ಯೋತಿಷಿಗೆ ನೀಡುತ್ತಾರೆ. ಆ ವೀಳ್ಯದೆಲೆಗಳ ಲೆಕ್ಕಾಚಾರದ ಆಧಾರದಲ್ಲಿ ಅವರು ಫಲಗಳನ್ನು ಸ್ಥಳದಲ್ಲೇ ನಿರ್ಧರಿಸುತ್ತಾರೆ. ವೀಳ್ಯದೆಲೆಗಳ ಸಂಖ್ಯೆ ಆಧಾರದಲ್ಲಿ ದೇವರ ಸಾನ್ನಿಧ್ಯ ಗುರುತಿಸಲಾಗುತ್ತದೆ. ಹೆಚ್ಚಿನ ಪ್ರಶ್ನಾ ಚಿಂತನೆ ನಡೆಸಿ ಯಾವ ದಿಕ್ಕಿನಲ್ಲಿ ದೈವ ಸಾನ್ನಿಧ್ಯ ಇದೆ ಎಂಬುದನ್ನು ಜ್ಯೋತಿಷಿ ಹೇಳುತ್ತಾರೆ.

'ತಾಂಬೂಲ ಪ್ರಶ್ನೆ' ಅಲ್ಲಗಳೆಯಲ್ಲ: ಗೃಹ ಸಚಿವ

ತುಮಕೂರು: 'ದಕ್ಷಿಣ ಕನ್ನಡ ಜಿಲ್ಲೆಯ ತೆಂಕ ಉಳಿಪಾಡಿ ಮಳಲಿ ಪೇಟೆಯ ಜುಮ್ಮಾ ಮಸೀದಿ ಸಂಬಂಧ 'ತಾಂಬೂಲ ಪ್ರಶ್ನೆ' ಕೇಳಿರುವುದನ್ನು ನಾನು ಅಲ್ಲಗಳೆಯುವುದಿಲ್ಲ. ಅದು ಆ ಭಾಗದ ಜನರ ನಂಬಿಕೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ತಾಲ್ಲೂಕಿನ ಹರಳೂರಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾನೂನು ಸುವ್ಯವಸ್ಥೆ ಕಾಪಾಡಲು ಮಂಗಳೂರು ಪೊಲೀಸರು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದಾರೆ. ತಾಂಬೂಲ ಪ್ರಶ್ನೆಯನ್ನು ನಾವು ಪ್ರಶ್ನಿಸುವುದಿಲ್ಲ. ಅದು ಅವರ ವೈಯಕ್ತಿಕ ವಿಚಾರ' ಎಂದು ಸ್ಪಷ್ಟಪಡಿಸಿದರು.

ವಿಜಯೇಂದ್ರಗೆ ಕೈತಪ್ಪಿದ ಟಿಕೆಟ್: ವಿಶೇಷ ಅರ್ಥ ಬೇಡ- ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜಯೇಂದ್ರ ಅವರಿಗೆ ವಿಧಾನ ಪರಿಷತ್ ಟಿಕೆಟ್ ತಪ್ಪಿರುವುದಕ್ಕೂ ಬಿ.ಎಲ್. ಸಂತೋಷ್ ಅವರಿಗೂ ಸಂಬಂಧ ಇಲ್ಲ. ಸಾಮರ್ಥ್ಯ ಮತ್ತು ಪಕ್ಷದಲ್ಲಿ ನಿಷ್ಠೆ ಇರುವವರನ್ನು ಪಕ್ಷ ಯಾವತ್ತೂ ಕೈಬಿಡಲ್ಲ' ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಈ ಬಾರಿಯ ಚುನಾವಣೆಯಲ್ಲಿ ವಿಜಯೇಂದ್ರ ಅವರಿಗೆ ನಾನಾ ಕಾರಣಗಳಿಗಾಗಿ ಪಕ್ಷ ಟಿಕೆಟ್ ನೀಡದೇ ಇರಬಹುದು. ಭವಿಷ್ಯದಲ್ಲಿ ಅವರಿಗೆ ಹೈಕಮಾಂಡ್ ಸೂಕ್ತ ಅವಕಾಶ ಕಲ್ಪಿಸಿಕೊಡುವ ಭರವಸೆ ನನಗಿದೆ' ಎಂದು ಅವರು ಹೇಳಿದರು.

> **ಟಿಕೆಟ್ ಕೈತಪ್ಪಿದ್ದಕ್ಕೆ ಯಾವುದೇ ಬೇಸರವಿಲ್ಲ. ಎಲ್ಲದಕ್ಕೂ ಕಾಲವೇ ಉತ್ತರಿಸಲಿದೆ. ಮುಂದೆ ರಾಜಕಾರಣದಲ್ಲಿ ಸಾಕಷ್ಟು ಅವಕಾಶಗಳು ಇವೆ**
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಉಪಾಧ್ಯಕ್ಷ

'ಬಿ.ಎಲ್. ಸಂತೋಷ್ ಅವರು ವಿಜಯೇಂದ್ರ ಅವರಿಗೆ ಟಿಕೆಟ್ ತಪ್ಪಲು ಕಾರಣ ಎನ್ನುವುದೆಲ್ಲ ಮಾಧ್ಯಮಗಳು ಸೃಷ್ಟಿಸಿದ ಊಹಾಪೋಹ. ಇದಕ್ಕೂ ಅವರಿಗೂ ಸಂಬಂಧ ಕಲ್ಪಿಸುವುದು ಸರಿಯಲ್ಲ' ಎಂದರು.

ಪರಿಷತ್: ಏಳೂ ನಾಮಪತ್ರ ಕ್ರಮಬದ್ಧ

ಬೆಂಗಳೂರು: ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಜೂನ್ 3ರಂದು ನಿಗದಿಯಾಗಿರುವ ಚುನಾವಣೆಗೆ ಸಲ್ಲಿಕೆಯಾಗಿರುವ ಎಲ್ಲ ಏಳೂ ನಾಮಪತ್ರಗಳು ಕ್ರಮಬದ್ಧವಾಗಿವೆ ಮತ್ತು ಅಂಗೀಕಾರಗೊಂಡಿವೆ. ಹೀಗಾಗಿ, ಮೂರು ಪಕ್ಷಗಳ (ಬಿಜೆಪಿಯ ನಾಲ್ವರು, ಕಾಂಗ್ರೆಸ್ಸಿನ ಇಬ್ಬರು, ಜೆಡಿಎಸ್‌ನ ಒಬ್ಬ) ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವುದು ನಿಚ್ಚಳವಾಗಿದೆ.

ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆಯ ಕಾರ್ಯದರ್ಶಿ ಎಂ. ಕೆ. ವಿಶಾಲಾಕ್ಷಿ ಅವರು, ಬುಧವಾರ ನಾಮಪತ್ರಗಳ ಪರಿಶೀಲನೆ ನಡೆಸಿದರು.

ಪಿಎಸ್‌ಐ ಅಕ್ರಮ: ಮಧ್ಯವರ್ತಿಗಳ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಮಧ್ಯವರ್ತಿಗಳ ಮಾಹಿತಿ ಕಲೆಹಾಕುತ್ತಿದ್ದಾರೆ.

'ಹೇಗಾದರೂ ಮಾಡಿ ಉದ್ಯೋಗ ಗಿಟ್ಟಿಸಿಕೊಳ್ಳಬೇಕೆಂಬ ಆಸೆಯಿಂದ ಹಲವು ಅಭ್ಯರ್ಥಿಗಳು ಮಧ್ಯವರ್ತಿಗಳ ಮೂಲಕ ನೇಮಕಾತಿ ವಿಭಾಗದ ಅಧಿಕಾರಿಗಳಿಗೆ ಲಕ್ಷಾಂತರ ಮೊತ್ತ ಸಂದಾಯ ಮಾಡಿದ್ದಾರೆ. ವಿಚಾರಣೆ ವೇಳೆ ಹಲವರು ಈ ಕುರಿತ ಮಾಹಿತಿ ಬಹಿರಂಗಪಡಿಸಿದ್ದಾರೆ. ಅವರು ಸಂಪರ್ಕಿಸಿದ ವ್ಯಕ್ತಿಗಳು ಯಾರು. ಅವರಿಗೆ ನೀಡಿರುವ ಮೊತ್ತ ಎಷ್ಟು. ಎಷ್ಟು ಕಂತಿನಲ್ಲಿ ಹಣ ಸಂದಾಯ ಮಾಡಿದ್ದಾರೆ. ಅವರ ನಡುವೆ ಯಾವ ಬಗೆಯ ಒಪ್ಪಂದವಾಗಿತ್ತು ಎಂಬ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಅಕ್ರಮದಲ್ಲಿ ಮಧ್ಯವರ್ತಿಗಳ ಪಾತ್ರ ಮಹತ್ವದ್ದಾಗಿದೆ. ನೇಮಕಾತಿ ವಿಭಾಗದ ಅಧಿಕಾರಿಗಳೊಂದಿಗೆ ಉತ್ತಮ ಒಡನಾಟ ಹೊಂದಿದ್ದ ಅವರು ಅಭ್ಯರ್ಥಿಗಳನ್ನು ಸಂಪರ್ಕಿಸಿ ವ್ಯವಹಾರ ಕುದುರಿಸುತ್ತಿದ್ದುದಾಗಿ ಗೊತ್ತಾಗಿದೆ. ನಗದು ರೂಪದಲ್ಲೇ ಅವರು ಅಧಿಕಾರಿಗಳಿಗೆ ಹಣ ಸಂದಾಯ ಮಾಡುತ್ತಿದ್ದರು ಎಂಬ ಮಾಹಿತಿಯೂ ಇದೆ. ಹೀಗಾಗಿ ಕೆಲ ಮಧ್ಯವರ್ತಿಗಳ ವಿವರ ಕಲೆಹಾಕಲಾಗುತ್ತಿದೆ. ವಿಶೇಷ ತನಿಖಾ ತಂಡದವರು ಅವರ ಮೇಲೆ ನಿಗಾ ಇರಿಸಿದ್ದಾರೆ. ಸೂಕ್ತ ಪುರಾವೆಗಳು ಲಭ್ಯವಾದ ಕೂಡಲೇ ಅವರನ್ನು ಬಂಧಿಸಿ ವಿಚಾರಣೆಗೆ ಕರೆತರಲಾಗುತ್ತದೆ' ಎಂದು ತಿಳಿಸಿವೆ.

'ಪ್ರಕರಣದ ಪ್ರಮುಖ ಆರೋಪಿಯಾಗಿರುವ ಡಿವೈಎಸ್‌ಪಿ ಶಾಂತಕುಮಾರ್ ಅವರನ್ನು ಮತ್ತೆ ಮೂರು ದಿನ ಸುಪರ್ದಿಗೆ ಪಡೆಯಲಾಗಿದೆ. ಅವರ ವಿಚಾರಣೆ ಮುಂದುವರಿಸಿ ಮತ್ತಷ್ಟು ಮಾಹಿತಿ ಕಲೆಹಾಕಬೇಕಿದೆ. ಬಂಧನಕ್ಕೆ ಒಳಗಾಗಿರುವ ಅವರ ಆಪ್ತರ ವಿಚಾರಣೆಯೂ ಮುಂದುವರಿದಿದೆ. ನೇಮಕಾತಿ ವಿಭಾಗದ ಮತ್ತಷ್ಟು ಅಧಿಕಾರಿಗಳೂ ಇದರಲ್ಲಿ ಭಾಗಿಯಾಗಿರುವ ಶಂಕೆ ಇದೆ' ಎಂದೂ ಹೇಳಿವೆ.

ಸ್ಪರ್ಧಾ ವಾಣಿ



ಪದವಿ-ಸ್ನಾತಕೋತ್ತರ ಪದವಿಯಲ್ಲಿ ಚೆನ್ನಾಗಿ ಓದಿದ್ದ ಅಥವಾ ಹೆಚ್ಚು ಇಷ್ಟವಾಗುತ್ತಿದ್ದ ವಿಷಯವನ್ನೇ ಯುಪಿಎಸ್‌ಸಿ ಮುಖ್ಯ ಪರೀಕ್ಷೆಗೆ ಐಚ್ಛಿಕ ವಿಷಯವನ್ನಾಗಿ ಆಯ್ದುಕೊಳ್ಳಬಹುದು. ಇದರಿಂದ ಸುಲಭವಾಗಿ ಹೆಚ್ಚು ಅಂಕಗಳಿಸಲು ಸಹಾಯವಾಗುತ್ತದೆ. ಆದರೆ ವಿಷಯ ಆಯ್ಕೆಗೆ ಯಾವುದೇ ಫಾರ್ಮುಲ ಇಲ್ಲ.

ಗರಿಷ್ಠ ಅಂಕಕ್ಕೆ ಬೇಕು ಸೂಕ್ತ 'ಐಚ್ಛಿಕ'

ಗುರುರಾಜ್ ಎಸ್. ದಾವಣಗೆರೆ

ಮುಖ್ಯ ಪರೀಕ್ಷೆಗೆ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಪದವಿ - ಸ್ನಾತಕೋತ್ತರ ಪದವಿಯಲ್ಲಿ ಓದಿದ ವಿಷಯಗಳು ಅನಾಯಾಸವಾಗಿ ನೆನಪಾಗುತ್ತವೆ. ಜೊತೆಗೆ ಸುಲಭದ, ಇಷ್ಟದ, ವಿಷಯಗಳೂ ಕಣ್ಣ ಮುಂದೆ ಬರುತ್ತವೆ. ಈಗಾಗಲೇ ಪರೀಕ್ಷೆ ಬರೆದು ಯಶಸ್ವಿಯಾದ ಅಭ್ಯರ್ಥಿಗಳು ಯಾವ ವಿಷಯಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಂಡಿದ್ದರು ಎನ್ನುವುದೂ ಮುಖ್ಯವಾಗುತ್ತದೆ. ಅಧ್ಯಾಪಕರು, ಕೋಚಿಂಗ್ ಸೆಂಟರ್‌ನವರು ಸೂಚಿಸುವ ವಿಷಯಗಳನ್ನು ತೆಗೆದುಕೊಳ್ಳುವವರೂ ಇದ್ದಾರೆ. ಆದರೆ ಖಚಿತ ಯಶಸ್ಸಿಗೆ ಯಾವ ಐಚ್ಛಿಕ ವಿಷಯ ಸೂಕ್ತ ಎಂಬ ಪ್ರಶ್ನೆ ಎಲ್ಲ ಅಭ್ಯರ್ಥಿಗಳಲ್ಲೂ ಇರುತ್ತದೆ.

ಜನಪ್ರಿಯ ಟಾಪ್ ಟೆನ್ ವಿಷಯಗಳು

ಯುಪಿಎಸ್‌ಸಿ ಮುಖ್ಯ ಪರೀಕ್ಷೆಯಲ್ಲಿ ಆಯ್ಕೆಗೆ 27 (ಕಡ್ಡಾಯ ಭಾಷೆ ಮತ್ತು ಇಂಗ್ಲಿಷ್ ಸೇರಿದಂತೆ) ಐಚ್ಛಿಕ ವಿಷಯಗಳಿವೆ. 2013 ರವರೆಗೆ ಅಭ್ಯರ್ಥಿಗಳು ಎರಡು ಬೇರೆ ಬೇರೆ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು. ಈಗ ಒಂದೇ ವಿಷಯವನ್ನು ಆಯ್ಕೆ ಮಾಡಿಕೊಂಡು 250 ಅಂಕಗಳ ಎರಡು ಪತ್ರಿಕೆಗಳಿಗೆ ಉತ್ತರಿಸಬೇಕು. ಇದುವರೆಗೆ ನಡೆದ ಮುಖ್ಯ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಹೆಚ್ಚಾಗಿ ಇಷ್ಟಪಡುವ, ಆಯ್ಕೆ ಮಾಡಿಕೊಂಡಿರುವ ವಿಷಯಗಳು ಇಂತಿವೆ.

1. ಸಾರ್ವಜನಿಕ ಆಡಳಿತ	5. ಇತಿಹಾಸ
2. ಮಾನವ ಶಾಸ್ತ್ರ (Anthropology)	6. ಸಮಾಜಶಾಸ್ತ್ರ
3. ಭೂಗೋಳ	7. ವೈದ್ಯಕೀಯ ವಿಜ್ಞಾನ
4. ರಾಜಕೀಯ ವಿಜ್ಞಾನ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು	8. ಮನೋವಿಜ್ಞಾನ
	9. ಕಾನೂನು
	10.ಭಾಷಾ ಸಾಹಿತ್ಯ

ಪದವಿ - ಸ್ನಾತಕೋತ್ತರ ವಿದ್ಯಾಭ್ಯಾಸದಲ್ಲಿ ಮೇಲಿನ ಯಾವುದಾದರೂ ವಿಷಯವನ್ನು ಓದಿದ್ದರೆ ಅದನ್ನೇ ಐಚ್ಛಿಕ ವಿಷಯವನ್ನಾಗಿ ಆಯ್ದುಕೊಳ್ಳಬಹುದು ಮತ್ತು ಸುಲಭವಾಗಿ ಹೆಚ್ಚಿನ ಅಂಕಗಳಿಸಬಹುದು. ಆದರೆ ಹಾಗೆಯೇ ಮಾಡಬೇಕೆಂಬ ವಾಡಿಕೆಯಾಗಲಿ ಅಲಿಖಿತ ನಿಯಮವಾಗಲಿ ಇಲ್ಲ. ಮೇಲಿನ ವಿಷಯಗಳನ್ನು ಹೊರತುಪಡಿಸಿ ನೀವು ಪದವಿಯಲ್ಲಿ ಅಧ್ಯಯನ ಮಾಡಿದ ಗಣಿತ, ಭೌತವಿಜ್ಞಾನ, ಎಕನಾಮಿಕ್ಸ್, ಸಸ್ಯ - ಪ್ರಾಣಿ ವಿಜ್ಞಾನ, ತರ್ಕ, ರಸಾಯನ ವಿಜ್ಞಾನ ಇತ್ಯಾದಿಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಂಡು ಓದಬಹುದು. ಎಷ್ಟೋ ವಿಜ್ಞಾನ ಪದವೀಧರ ಅಭ್ಯರ್ಥಿಗಳು ಕಲಾ ವಿಭಾಗದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಹೆಚ್ಚು ಅಂಕಗಳಿಸಿದ ಉದಾಹರಣೆಗಳಿವೆ.

ಓದಿನ ಹಿನ್ನೆಲೆಯಂತೆ ಆಯ್ಕೆ

ಒಂದೆಡೆ ಟಾಪ್ ಟೆನ್ ವಿಷಯಗಳಿದ್ದರೆ ಇನ್ನೊಂದೆಡೆ ನೀವು ಪದವಿಯಲ್ಲಿ ಓದಿದ ವಿಷಯಗಳಿರುತ್ತವೆ. ಮೂರು - ನಾಲ್ಕು ವರ್ಷಗಳ ನಿರಂತರ ಅಧ್ಯಯನದಿಂದ ಸಾಕಷ್ಟು ಜ್ಞಾನ – ಕೌಶಲ ಸಂಪಾದಿಸಿರುತ್ತೀರಿ. ಓದಿದ ವಿಷಯಗಳಲ್ಲಿ ಯಾವುದು ಸುಲಭ, ಕ್ಲಿಷ್ಟ ಎಂಬುದು ಮೊದಲೇ ತಿಳಿದಿರುವುದರಿಂದ ಐಚ್ಛಿಕ ವಿಷಯದ ಆಯ್ಕೆ ಸುಲಭವಾಗುತ್ತದೆ. ಮತ್ತೊಂದೆಡೆ ಕಡಿಮೆ ಪಠ್ಯಕ್ರಮದ ಆಸಕ್ತಿದಾಯಕ ವಿಷಯಗಳೂ ಇರುತ್ತವೆ. ನೀವು ಸ್ಮಾರ್ಟ್ ಅಭ್ಯರ್ಥಿಯಾಗಿದ್ದರೆ ನಿಮಗೆ ಇಷ್ಟವಾದ ಮತ್ತು ನೀವು ಓದಿದ ವಿಷಯವನ್ನೇ ಆಯ್ಕೆ ಮಾಡಿಕೊಳ್ಳುತ್ತೀರಿ. ಹಾಗೆ ಮಾಡಿದಲ್ಲಿ ನೀವು ನಿಮ್ಮ ಯುಪಿಎಸ್‌ಸಿ ಪರೀಕ್ಷೆಯ ಸವಾಲನ್ನು ಅರ್ಧ ಗೆದ್ದಂತೆಯೇ! ಅದನ್ನು ಬಿಟ್ಟು ಪಠ್ಯಕ್ರಮ ಕಡಿಮೆ ಎಂಬ ಕಾರಣಕ್ಕಾಗಿ ನಿಮಗೆ ಪರಿಚಯವೇ ಇರದ, ಓದದ ವಿಷಯವನ್ನು ಆಯ್ಕೆ ಮಾಡಿಕೊಂಡರೆ ನಿಮ್ಮ ಒಂದು ಅವಕಾಶವನ್ನೇ ಕೃಷ್ಣಾರ್ಪಣ ಮಾಡಿದಂತೆ!

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ–10

ಪುನರಾವರ್ತನೆ ವಿಷಯವೇ ಸುರಕ್ಷಿತ

ನೆನಪಿರಲಿ. ಮುಖ್ಯ ಪರೀಕ್ಷೆಯಲ್ಲಿ ನೀವು 'ಸಾಮಾನ್ಯ ಅಧ್ಯಯನ'ದ (General Studies) ನಾಲ್ಕು ಪತ್ರಿಕೆಗಳಿಗೆ ಉತ್ತರ ಬರೆಯಬೇಕಿರುತ್ತದೆ. ಇವುಗಳಿಗೆ ಹೊಂದುವಂತಹ ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು. ಉದಾಹರಣೆಗೆ 'ಸಾರ್ವಜನಿಕ ಆಡಳಿತ' (Public administration) ಆಯ್ಕೆ ಮಾಡಿಕೊಂಡರೆ ಅದು ಸಾಮಾನ್ಯ ಅಧ್ಯಯನದ ಎರಡನೆಯ ಪತ್ರಿಕೆ. ಭಾರತದ ರಾಜಕೀಯ ಮತ್ತು ಆಡಳಿತಕ್ಕೆ (Polity and Governance) ತೀರಾ ಹತ್ತಿರವಿದ್ದು ಬಹುತೇಕ ವಿಷಯಗಳು ಪುನರಾವರ್ತನೆಯಾಗುತ್ತವೆ. ಆಗ ತಯಾರಿ ಸುಲಭವಾಗುತ್ತದೆ. ಇನ್ನು ಸಮಾಜಶಾಸ್ತ್ರ (Sociology) ಆಯ್ದುಕೊಂಡರೆ ಅದು ಪ್ರಬಂಧ ಮತ್ತು ಸಾಮಾನ್ಯ ಅಧ್ಯಯನದ ಪ್ರಥಮ ಪತ್ರಿಕೆ ಎದುರಿಸಲೂ ನೆರವಾಗುತ್ತದೆ. ಚರಿತ್ರೆ ಅಥವಾ ಭೂಗೋಳ ಆಯ್ದುಕೊಂಡರೆ ಅದರ ಓದು ಜನರಲ್ ಸ್ಟಡೀಸ್‌ನ ಪ್ರಥಮ ಪತ್ರಿಕೆಗೆ ತುಂಬಾ ಅನುಕೂಲ ಕಲ್ಪಿಸುತ್ತದೆ.

ಕಡಿಮೆ ಪಠ್ಯಕ್ರಮ ಹೆಚ್ಚಿನ ಸಂಪನ್ಮೂಲ

ಯುಪಿಎಸ್‌ಸಿ ಪಟ್ಟಿ ಮಾಡಿರುವ ಐಚ್ಛಿಕ ವಿಷಯಗಳ ಪೈಕಿ ಕೆಲವು ವಿಷಯಗಳ ಪಠ್ಯಕ್ರಮ(ಸಿಲಬಸ್) ಬೇರೆ ವಿಷಯಗಳಿಗೆ ಹೋಲಿಸಿದರೆ ಕಡಿಮೆ ಇರುತ್ತದೆ. ಉದಾಹರಣೆಗೆ ಸಾರ್ವಜನಿಕ ಆಡಳಿತ ವಿಷಯಕ್ಕೆ ನಿಶ್ಚಿತ ಪಠ್ಯಕ್ರಮ ಮತ್ತು ಮಿತಿ ಎರಡೂ ಇವೆ. ಓದುವುದಕ್ಕೆ ಬೇಕಾದ ಪುಸ್ತಕ, ನೋಟ್ಸ್, ಗೈಡ್, ಸಲಹೆಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಇವೆ. ಆದ್ದರಿಂದ ಅಧ್ಯಯನ ಸಾಮಗ್ರಿ ಆಯ್ಕೆ ಮಾಡಿಕೊಂಡವರು ಕೇವಲ ನಾಲ್ಕು ತಿಂಗಳಲ್ಲಿ ಸಂಪೂರ್ಣವಾಗಿ ತಯಾರಾಗಬಹುದು. ಅದರಂತೆ ಭೂಗೋಳ ವಿಷಯ ವಿಜ್ಞಾನಕ್ಕೂ ಸಂಬಂಧಿಸಿದ್ದರಿಂದ ವಿಜ್ಞಾನ, ಎಂಜಿನಿಯರಿಂಗ್ ಮತ್ತು ಮೆಡಿಕಲ್ ಓದಿದವರಿಗೂ ಅನುಕೂಲವಾಗುತ್ತದೆ. ಜೊತೆಗೆ ಯಾವ ವಿಷಯದ ಕುರಿತು ಸರಿಯಾದ ಕೋಚಿಂಗ್ ಸಿಗುತ್ತದೆ ಮತ್ತು ಹೆಚ್ಚಿನ ಅಂಕಗಳಿಸಬಹುದು ಎಂಬುದನ್ನು ಅರಿತು ಐಚ್ಛಿಕ ವಿಷಯ ಆಯ್ಕೆ ಮಾಡಿಕೊಳ್ಳಬೇಕು. ಇರುವ ಐಚ್ಛಿಕ ವಿಷಯಗಳ ಪೈಕಿ ಅತ್ಯಂತ ಕಡಿಮೆ ಪಠ್ಯಕ್ರಮ ಇರುವುದು ತತ್ವಶಾಸ್ತ್ರಕ್ಕೆ (ಫಿಲಾಸಫಿ). ಆಸಕ್ತರು ಇದರ ಸದುಪಯೋಗ ಪಡೆದುಕೊಳ್ಳಬಹುದು.

ಹೆಚ್ಚು ಅಂಕ ಗಳಿಕೆಗೆ ಸೂಕ್ತ ಆಯ್ಕೆ

ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಯಾವುದನ್ನು ತೆಗೆದುಕೊಂಡರೆ ಓದಲು ಮತ್ತು ಪ್ರಶ್ನೆಗೆ ಉತ್ತರಿಸಲು ಸುಲಭ ಎನ್ನುವುದಷ್ಟೇ ಮುಖ್ಯವಾಗಬಾರದು. ನೀವು ಬರೆಯುವ ಉತ್ತರಗಳಿಗೆ ನಿಗದಿ ಮಾಡಿದ ಅಂಕಗಳು ಪೂರ್ತಿಯಾಗಿ ಸಿಗುತ್ತವೆಯೇ ಎಂಬುದನ್ನು ಅರಿತು ವಿಷಯ ಆಯ್ಕೆ ಮಾಡಿಕೊಳ್ಳಿ. ಉದಾಹರಣೆಗೆ ವಿಜ್ಞಾನದ ವಿಷಯಗಳ ಪ್ರಶ್ನೆಗಳಿಗೆ ನಿಗದಿಗೊಳಿಸಿದ ಅಂಕಗಳಿಗನುಗುಣವಾಗಿ ನಿರ್ದಿಷ್ಟ ಉತ್ತರಗಳಿರುತ್ತವೆ. ಸರಿಯಾದ ಸೂತ್ರ ಬಳಸಿ, ಚಿತ್ರ ಬರೆದು, ಭಾಗಗಳನ್ನು ಗುರುತಿಸಿ ಹಂತ ಹಂತವಾಗಿ ಉತ್ತರ ಬರೆದರೆ ಪೂರ್ಣಾಂಕಗಳು ಸಿಗುತ್ತವೆ. ಆಗ ಅಂಕಗಳಿಕೆ ಹೆಚ್ಚಾಗುತ್ತದೆ. ಗಣಿತ, ಸ್ಟ್ಯಾಟಿಸ್ಟಿಕ್ಸ್ ತೆಗೆದುಕೊಂಡವರು ಅಂಕಗಳಿಕೆಯಲ್ಲಿ ಇತರರಿಗಿಂತ ಒಂದು ಹೆಜ್ಜೆ ಮುಂದಿರುತ್ತಾರೆ. ಭೂಗೋಳ ವಿಜ್ಞಾನ ವಿಷಯದ ಪ್ರಶ್ನೆಗಳೂ ನಿಖರ ಉತ್ತರಗಳನ್ನು ಬೇಡುವುದರಿಂದ ಅದರಲ್ಲೂ ಹೆಚ್ಚಿನ ಅಂಕಗಳಿಕೆ ಸುಲಭ.

ಆಯ್ಕೆಗೂ, ಗಳಿಕೆಗೂ ಅಂತರ

ಇಂತಿಂಥ ವಿಷಯಗಳಲ್ಲಿ ಅಂಕಗಳಿಸುವುದು ಸುಲಭ ಎನ್ನುವುದು ಎಲ್ಲ ಕಾಲಕ್ಕೂ ನಿಜವಲ್ಲ. ಹಿಂದಿನ ಸಲದ ಪ್ರಯತ್ನದಲ್ಲಿ ಹೆಚ್ಚು ಅಂಕ ಬಂದಿದ್ದರೆ, ಈ ಬಾರಿಯೂ ಹಾಗೆಯೇ ಆಗುತ್ತದೆ ಎನ್ನಲು ಯಾವ ಆಧಾರವೂ ಇಲ್ಲ. ಸುಲಭದ, ಇಷ್ಟದ, ಹೆಚ್ಚು ಸಂಪನ್ಮೂಲ ಮತ್ತು ಹೆಚ್ಚು ಅಂಕಗಳಿಸಲು ನೆರವಾಗುವ ವಿಷಯಗಳನ್ನು ಆಯ್ಕೆ ಮಾಡಿಕೊಂಡರೆ ಸಾಲದು, ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಬರೆಯಲೇಬೇಕು. ಎಷ್ಟೋ ಅಭ್ಯರ್ಥಿಗಳು ಹೆಚ್ಚಿನವರು ಆಯ್ಕೆ ಮಾಡಿಕೊಳ್ಳದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅತಿ ಹೆಚ್ಚು ಅಂಕ ಗಳಿಸಿದ ಉದಾಹರಣೆಗಳೂ ಇವೆ. ಒಂದು ಅಧ್ಯಯನದ ಪ್ರಕಾರ ಇತಿಹಾಸ, ಭೂಗೋಳ, ಸಾರ್ವಜನಿಕ ಆಡಳಿತ ಮತ್ತು ಸಮಾಜಶಾಸ್ತ್ರದ ವಿಷಯಗಳು ಬಹುಜನರ ಫೇವರೀಟ್ ಎನಿಸಿವೆ.

(ಮುಂದಿನ ವಾರ ಪಾಠ– 11 : ಸಂದರ್ಶನವೆಂಬ ವಿಶ್ವದರ್ಶನ)

ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ 'ಗ್ರೂಪ್-ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) 2021-22 ಸಾಲಿನಲ್ಲಿ ಅತಿಹೆಚ್ಚು ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸಿದ ರಾಜ್ಯ ಯಾವುದು?

ಎ) ಮಹಾರಾಷ್ಟ್ರ ಬಿ) ಕರ್ನಾಟಕ
ಸಿ) ಉತ್ತರ ಪ್ರದೇಶ ಡಿ) ಗುಜರಾತ್

ಉತ್ತರ: ಬಿ

2) ಭಾರತದ ಸಂಸತ್ತಿನಲ್ಲಿ ಮೊತ್ತಮೊದಲ ಬಾರಿಗೆ ಕನ್ನಡದಲ್ಲಿ ಮಾತನಾಡಿದವರು ಜೆ ಎಚ್ ಪಟೇಲ್. ಇತ್ತೀಚೆಗೆ ಕೆನಡಾ ದೇಶದ ಸಂಸತ್ತಿನಲ್ಲಿ ಮೊತ್ತಮೊದಲ ಬಾರಿಗೆ ಕನ್ನಡದಲ್ಲಿ ಮಾತನಾಡಿದವರು ಯಾರು?

ಎ) ಚಂದ್ರ ಆರ್ಯ ಬಿ) ನಾಗೇಂದ್ರ ಭಟ್
ಸಿ) ಎಂ ಆರ್ ಸತೀಶ್ ಡಿ) ನಾಗೇಂದ್ರ ಎಂ ಆರ್

ಉತ್ತರ: ಎ

3) 'ನಮ್ಮ ಶಾಮಣ್ಣ' , 'ಕನ್ನಡದ ಮನಸ್ಸು' ಈ ಕೃತಿಗಳನ್ನು ಬರೆದವರು ಯಾರು?

ಎ) ಜಿ. ಎಂ. ಪರಮೇಶ್ವರ
ಬಿ) ಡಿ. ಎಸ್. ನಾಗಭೂಷಣ
ಸಿ) ಎಂ. ಜಿ. ನಾಗೇಶ್
ಡಿ) ವಿಶ್ವೇಶ್ವರ ಭಟ್

ಉತ್ತರ: ಬಿ

4) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ನಮ್ಮ ರಾಜ್ಯದಲ್ಲಿ ಯುವ ನೀತಿಯ ಕರಡಿನಲ್ಲಿ, ಯುವ ಬಜೆಟ್ ಮಂಡನೆ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಆನ್ ಲೈನ್ ಶಿಕ್ಷಣ ವಿಭಾಗ ಆರಂಭ, ಉದ್ಯಮ ಶೀಲತೆ ಪ್ರೋತ್ಸಾಹಿಸಲು ರಾಜ್ಯ ಉದ್ಯಮಶೀಲತಾ ಕೇಂದ್ರ ಸ್ಥಾಪನೆ ಮತ್ತಿತರ ಅಂಶಗಳಿವೆ

2) ನಮ್ಮ ರಾಜ್ಯದಲ್ಲಿ ಯುವ ನೀತಿಯನ್ನು ರೂಪಿಸಲು ಡಾ. ಬಾಲಸುಬ್ರಮಣ್ಯಂ ಅವರ ನೇತೃತ್ವದಲ್ಲಿ 14 ಸದಸ್ಯರ ತಂಡ ರಚಿಸಲಾಗಿತ್ತು.

ಉತ್ತರ ಸಂಕೇತಗಳು
ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ)1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

5) ವಿಶ್ವ ಅತಿ ಉದ್ದದ ತೂಗು ಸೇತುವೆ 'ಸ್ಕೈ ಬ್ರಿಡ್ಜ್ 721' ಯಾವ ದೇಶದಲ್ಲಿ ನಿರ್ಮಿಸಲಾಗಿದೆ?

ಎ) ಉಕ್ರೇನ್ ಬಿ) ಜೆಕ್ ಗಣರಾಜ್ಯ
ಸಿ) ರೊಮೇನಿಯಾ ಡಿ) ಮಾಲ್ಟಾ

ಉತ್ತರ: ಬಿ

6) ಹಲ್ಲುಗಳನ್ನು ಸ್ವಚ್ಛಗೊಳಿಸಲು ಮತ್ತು ರೂಟ್‌ಕೆನಾಲ್‌ನಂತಹ ಚಿಕಿತ್ಸೆಗಳನ್ನು ಯಶಸ್ವಿಯಾಗಿ ನಿರ್ವಹಿಸುವಂತಹ ಪುಟ್ಟ (ನ್ಯಾನೊ) ರೊಬೋಟ್‌ಗಳನ್ನು ಈ ಕೆಳಗೆ ಉಲ್ಲೇಖಿಸಿರುವ ಯಾವ ಸಂಸ್ಥೆ ನಿರ್ಮಾಣ ಮಾಡಿದೆ?

ಎ) ಐಐಟಿ ಮುಂಬೈ
ಬಿ) ಅಲ್‌ಮಿನ್ ದಂತಮಹಾ ವಿದ್ಯಾಲಯ ವಿಜಯಪುರ
ಸಿ) ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಸಿ

7) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) 2021-22ನೇ ಸಾಲಿನಲ್ಲಿ ₹40,295 ಕೋಟಿ ಬ್ಯಾಂಕಿಂಗ್ ವಂಚನೆ ನಡೆಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ

2) ಪಂಜಾಬ್ ನ್ಯಾಷನಲ್ ಬ್ಯಾಂಕ್ ಅತಿಹೆಚ್ಚು ವಂಚನೆಗೆ ಒಳಗಾಗಿದೆ.

ಉತ್ತರ ಸಂಕೇತಗಳು
ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

8) ಈವೆಂಟ್ ಹಾರೈಝುನ್ ಟೆಲಿಸ್ಕೋಪ್ 'ಸಾಜಿಟೇರಿಯಸ್ ಎ' ಎಂಬ ಕಪ್ಪುಕುಳಿಯ ಚಿತ್ರವನ್ನು ಸೆರೆಹಿಡಿದಿದೆ. ಹಾಗಾದರೆ ಅದು ಎಲ್ಲಿದೆ?

ಎ) ಆಂಡ್ರೋಮಿಡಾ ಗೆಲಾಕ್ಸಿ
ಬಿ) ವಿರ್ಗೋ 'ಎ' ಗೆಲಾಕ್ಸಿ
ಸಿ) ಮೆಗಾಲಿನಿಕ್ ಕ್ಲೌಡ್ ಗೆಲಾಕ್ಸಿ
ಡಿ) ಮಿಲ್ಕಿ ವೇ ಗೆಲಾಕ್ಸಿ

ಉತ್ತರ: ಡಿ

9) ವರ್ಷದ ಯಾವ ದಿನದಂದು 'ವಿಶ್ವ ರಕ್ತದೊತ್ತಡ ದಿನ' ಆಚರಿಸುತ್ತಾರೆ?

ಎ) ಮೇ 17 ಬಿ) ಜೂನ್ 2
ಸಿ) ಏಪ್ರಿಲ್ 27 ಡಿ) ಅಕ್ಟೋಬರ್ 24

ಉತ್ತರ: ಎ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ನಿಮಗಿದು ಗೊತ್ತೆ?

ಬಿಗ್‌ಬೆನ್ ಯಾವಾಗ ನಿರ್ಮಾಣವಾಯಿತು?

ಬಿಗ್‌ಬಿನ್, ಲಂಡನ್‌ನಲ್ಲಿರುವ ಒಂದು ದೊಡ್ಡ ಗಡಿಯಾರ. ಇದರಲ್ಲಿ 13 ಟನ್ ತೂಕದ ಒಂದು ದೊಡ್ಡ ಗಂಟೆ ಇದೆ. ಈ ಗಡಿಯಾರವನ್ನು ಒಂದು ದೊಡ್ಡ ಗೋಪುರದ ಮೇಲೆ ಕೂಡಿಸಲಾಗಿದೆ. ಈ ಗಡಿಯಾರ ಗೋಪುರವು (CLOCK TOWER) ಲಂಡನ್ನಿನ ವೆಸ್ಟ್ ಮಿನಿಸ್ಟರ್‌ನಲ್ಲಿರುವ ಬ್ರಿಟಿಷ್ ಪಾರ್ಲಿಮೆಂಟ್ ಭವನದ ಪೂರ್ವ ತುದಿಯಲ್ಲಿದೆ. ಎಡ್ಮಂಡ್ ಬೆಕೆಟ್ (EDMUND BECKET) ಎಂಬುವವರು ಈ ಕ್ಲಾಕ್ ಟವರ್‌ನ ವಿನ್ಯಾಸ ಮಾಡಿದ್ದಾರೆ. 1859ರ ಮೇ 31ರಂದು ಈ ಗಡಿಯಾರದಲ್ಲಿ 'ಟಿಕ್-ಟಿಕ್' ಶಬ್ದ ಆರಂಭವಾಯಿತು. ಆಗಿನಿಂದ ಒಮ್ಮೆ ಮಾತ್ರ(1977ರಲ್ಲಿ)ಗಡಿಯಾರ ನಿಂತಿತ್ತು. ಅದು ಬಿಟ್ಟರೆ ಈ ಗಡಿಯಾರ ಈವರೆಗೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಈ ಗಂಟೆಯಿಂದ ಹೊರಹೊಮ್ಮುವ ಶಬ್ಧ ತುಂಬ ಪ್ರಸಿದ್ಧ. ಈ ಗಂಟೆಯ ಧ್ವನಿಯನ್ನು ಬಿಬಿಸಿ, ವಿಶ್ವದ ಎಲ್ಲೆಡೆ ನಿಯಮಿತವಾಗಿ ಪ್ರಸಾರ ಮಾಡುತ್ತದೆ. ಬಿಗ್‌ಬಿನ್ ಗಡಿಯಾರದ ಗೋಪುರ ಏರಲು ಸುತ್ತಾಕಾರದ ಮೆಟ್ಟಿಲುಗಳಿವೆ. ಅದನ್ನು ತಲುಪಲು 374 ಮೆಟ್ಟಿಲುಗಳನ್ನು ಹತ್ತಿಕೊಂಡು ಹೋಗಬೇಕು.

ಈ ಗಡಿಯಾರದಲ್ಲಿರುವ ರೋಮ್‌ನ ಅಂಕಿಗಳು ಎರಡು ಅಡಿಗಳಷ್ಟು ಎತ್ತರವಾಗಿವೆ. ಅದರ ಲೋಲಕ (PENDULUM) 13 ಅಡಿ ಉದ್ದವಿದೆ. ಈ ಗಡಿಯಾರವನ್ನು ಸ್ಥಾಪಿಸಿದಾಗ ಪ್ರತಿವಾರ ಇಬ್ಬರು 'ವೈಂಡ್' ಮಾಡುತ್ತಿದ್ದರು(ಕೀ ಕೊಡುತ್ತಿದ್ದರು). ಈಗ ಈ ಉದ್ದೇಶಕ್ಕಾಗಿ ವಿದ್ಯುತ್ ವ್ಯವಸ್ಥೆ ಇದೆ. ಈ ಗಡಿಯಾರ ಸ್ಥಾಪನೆ ಯಾದಾಗಿನಿಂದ ನಿಖರವಾಗಿ ಸಮಯ ತೋರಿಸುತ್ತಿದೆ. 2012ರಲ್ಲಿ ಈ ಗಡಿಯಾರದ ಗೋಪುರಕ್ಕೆ ಎಲಿಜಬೆತ್ ಟವರ್ ಎಂದೂ ಮರುನಾಮಕರಣ ಮಾಡಲಾಗಿದೆ. ಇದು 1987ರಲ್ಲಿ ಯೂನೆಸ್ಕೊ ವಿಶ್ವ ಪರಂಪರಾ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.



ಪ್ರಜಾವಾಣಿ ಉದ್ಯೋಗ ವಾರ್ತೆ

ಎಸ್‌ಬಿಐನಲ್ಲಿ ಮ್ಯಾನೇಜರ್, ಸೂಪರ್‌ವೈಸರ್ ಹುದ್ದೆಗಳು



ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಮ್ಯಾನೇಜರ್, ಸೂಪರ್‌ವೈಸರ್ ವೃಂದದ ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಸ್‌ಬಿಐನ ನಿವೃತ್ತ ಅಧಿಕಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ಸಂಖ್ಯೆ: 641

ವಿದ್ಯಾರ್ಹತೆ: ಹುದ್ದೆಗಳಿಗೆ ಅನುಸಾರವಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು.

ವೇತನ: ಮಾಸಿಕ ವೇತನಕ್ಕೆ ಸಂಬಂಧಿಸಿದ ಮಾಹಿತಿಗೆ ಈ ಕೆಳಗೆ ನೀಡಿರುವ ಎಸ್‌ಬಿಐ ವೆಬ್‌ಸೈಟ್‌ನಿಂದ ಮಾಹಿತಿ ಪಡೆಯಬಹುದು.

ನೇಮಕಾತಿ ಪ್ರಕ್ರಿಯೆ: 100 ಅಂಕಗಳಿಗೆ ಸಂದರ್ಶನ ಇದೆ. ಇದರಲ್ಲಿ ಆಯ್ಕೆಯಾದವರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನ: ಜೂನ್ 07, 2022

ಹೆಚ್ಚಿನ ಮಾಹಿತಿಗೆ: https://www.sbi.co.in



ಕಾನ್‌ಸ್ಟೆಬಲ್ ನೇಮಕಾತಿಗೆ ಅರ್ಜಿ

ದೆಹಲಿ ಪೊಲೀಸ್ ಪಡೆಯಲ್ಲಿ ಖಾಲಿ ಇರುವ ಹೆಡ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ನೇಮಕಾತಿ ಪ್ರಕ್ರಿಯೆಯನ್ನು ನಡೆಸಲಿದೆ.

ಹುದ್ದೆಗಳ ವಿವರ: 853

ವಿದ್ಯಾರ್ಹತೆ: ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಿಂದ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಪಡೆದಿರಬೇಕು.

ವೇತನ ಶ್ರೇಣಿ: ಮಾಸಿಕ ₹ 25,500 – ₹ 81,100 (ವಿವಿಧ ಭತ್ಯೆಗಳು ಸೇರಿದಂತೆ)

ವಯಸ್ಸು: ಕನಿಷ್ಠ 18 ವರ್ಷ, ಗರಿಷ್ಠ 25 ವರ್ಷ

ವಯೋಮಿತಿ ಸಡಿಲಿಕೆ: ಜೂನ್ 2022ಕ್ಕೆ ಅನ್ವಯವಾಗುವಂತೆ ಕನಿಷ್ಠ 18, ಗರಿಷ್ಠ 25 ವರ್ಷದರಾಗಿರಬೇಕು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ನೇಮಕಾತಿ ವಿಧಾನ: ದೈಹಿಕ ಪರೀಕ್ಷೆ ಹಾಗೂ ಕಂಪ್ಯೂಟರ್ ಆಧಾರಿತ ಲಿಖಿತ ಪರೀಕ್ಷೆಯ ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ₹ 100. ಎಸ್‌ಸಿ/ಎಸ್‌ಟಿ/ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

ಅರ್ಜಿ ಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ https://ssc.nic.in ಗೆ ಲಾಗಿನ್ ಆಗಿ ಅರ್ಜಿ ಸಲ್ಲಿಸುವ ಮಾಹಿತಿಯನ್ನು ಪಡೆಯಬಹುದು. ಇತರೆ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನ: ಜೂನ್ 16, 2022

ವೆಬ್‌ಸೈಟ್: https://ssc.nic.in/





5G ತಂತ್ರಜ್ಞಾನದ ಉಪಯೋಗಗಳು

ಯುಪಿಎಸ್‌ಸಿ– ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2, ಕೆಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2 ಹಾಗೂ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ತಂತ್ರಜ್ಞಾನ ಕ್ಷೇತ್ರದ ಪ್ರಚಲಿತ ವಿದ್ಯಮಾನವೊಂದರ ಮಾಹಿತಿ ಇಲ್ಲಿದೆ.

ಯು.ಟಿ.ಆಯಿಶ ಫರ್ಝಾನ

5G ನೆಟ್‌ವರ್ಕ್ ತಂತ್ರಜ್ಞಾನವು ಅಧಿಕ ವೇಗ (ಗರಿಷ್ಠ ಜಿಬಿಪಿಎಸ್ ಡೇಟಾ ವೇಗ), ವಿಳಂಬವಿಲ್ಲದ (ಅಲ್ಟ್ರಾ-ಲೋ ಲೇಟೆನ್ಸಿ), ಹೆಚ್ಚಿನ ವಿಶ್ವಾಸಾರ್ಹತೆಯ, ಬೃಹತ್ ನೆಟ್‌ವರ್ಕ್ ಸಾಮರ್ಥ್ಯ, ಹೆಚ್ಚಿನ ಲಭ್ಯತೆಯೊಂದಿಗೆ ಬಳಕೆದಾರರಿಗೆ ಏಕರೂಪದ ಬಳಕೆಯ ಅನುಭವವನ್ನು ತಲುಪಿಸುತ್ತದೆ.

- ಹೆಚ್ಚಿನ ಕಾರ್ಯಕ್ಷಮತೆ ಮತ್ತು ದಕ್ಷತೆಯು ಹೊಸ ಬಳಕೆದಾರರಿಗೆ ಸುಲಲಿತ ಅನುಭವಗಳನ್ನು ನೀಡುತ್ತದೆ ಮತ್ತು ಕೈಗಾರಿಕೋದ್ಯಮದಲ್ಲಿ ಈ ತಂತ್ರಜ್ಞಾನದ ಬಳಕೆಯು ಉತ್ಪಾದನಾ ಸಾಮರ್ಥ್ಯವನ್ನು ಬಹಳ ಎತ್ತರಕ್ಕೆ ಕೊಂಡೊಯ್ಯಬಹುದು.

5 ತಂತ್ರಜ್ಞಾನದ ವೈಶಿಷ್ಟ್ಯಗಳು

ಮಿಲಿಮೀಟರ್ ತರಂಗಾಂತರದಲ್ಲಿ (30-300 GHz) ಕಾರ್ಯನಿರ್ವಹಿಸುವುದರಿಂದ, ಇದು ಬೃಹತ್ ಪ್ರಮಾಣದ ಡೇಟಾ (Big Data)ವನ್ನು ಅತ್ಯಂತ ಹೆಚ್ಚಿನ ವೇಗದಲ್ಲಿ ಪ್ರೊಸೆಸ್ ಮಾಡುವ ಶಕ್ತಿಯನ್ನು ಹೊಂದಿದೆ.

ಬೃಹತ್ ಡೇಟಾಗೆ ಉದಾಹರಣೆ:

- ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟದಲ್ಲಿ ಆಟಗಾರನೊಬ್ಬ ಮೈದಾನದಲ್ಲಿ ಆಡುತ್ತಿರುವಾಗಲೇ, ಆತ ಹಿಂದಿನ ಎಲ್ಲಾ ಆಟಗಾರರ ದಾಖಲೆಗಳಿಗೆ ಸರಿಸಮನಾಗಲು ಅಥವಾ ದಾಖಲೆಯನ್ನು ಮುರಿಯಬೇಕಾದರೆ ಇನ್ನೆಷ್ಟು ರನ್‌ಗಳನ್ನು ಗಳಿಸಬೇಕಾಗಬಹುದು ಎಂಬ ಮಾಹಿತಿಯನ್ನು ಕ್ಷಣಗಳಲ್ಲಿ ನೀಡಲಾಗುತ್ತದೆ. ಈ ಮಾಹಿತಿಯು ಕ್ರೀಡಾಲೋಕಕ್ಕೆ ಬಹಳ ಮಹತ್ವದ್ದಾಗಿರುತ್ತದೆ.
- ಸಾರ್ವಜನಿಕ ವಲಯ, ವ್ಯಾಪಾರ ಮತ್ತು ನಿತ್ಯ ಬಳಕೆಗೆ 5G ಇಂದಿನ 4G ನೆಟ್‌ವರ್ಕ್‌ಗಳಿಗಿಂತ ಹಲವು ರೀತಿಯ ವಿಶೇಷ ಪ್ರಯೋಜನಗಳನ್ನು ಒದಗಿಸುವ ಭರವಸೆ ನೀಡುತ್ತದೆ.

ಇಂಟರ್ನೆಟ್ ಆಫ್ ಥಿಂಗ್ಸ್ (IoT)

ಉದಾ: ಮನೆಯೊಳಗೆ ಮೊಬೈಲ್‌ನಿಂದಲೇ ಹವಾನಿಯಂತ್ರಿತ ಯಂತ್ರ (ಎಸಿ), ಡೋರ್ ಲಾಕ್‌ಗಳು ಮತ್ತು ವಾಷಿಂಗ್ ಮಷಿನ್‌ನಂತಹ ಉಪಕರಣಗಳೆಲ್ಲವನ್ನೂ ನಿಯಂತ್ರಿಸಬಹುದು. ಮೊಬೈಲ್‌ಗೆ ಲಿಂಕ್ ಮಾಡಿಕೊಂಡು ದೂರದಲ್ಲಿದ್ದರೂ ಮನೆಯೊಳಗಿನ ಈ ಉಪಕರಣಗಳನ್ನು ನಿಯಂತ್ರಿಸಬಹುದು.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್

- ಸ್ಮಾರ್ಟ್ ಮೀಟರ್‌ಗಳು, ಸೆನ್ಸರ್‌ಗಳು ಮತ್ತು ಇತರ ವಿಧಾನಗಳ ಮೂಲಕ ನೀರು ಸರಬರಾಜು, ವಿದ್ಯುತ್ ಸರಬರಾಜು, ಮೂಲಸೌಕರ್ಯಗಳಂತಹ ಸಮಸ್ಯೆಗಳನ್ನು ಪರಿಹರಿಸುವಲ್ಲಿ 5G ವೇಗದ ತಂತ್ರಜ್ಞಾನ ತನ್ನದೇ ರೀತಿಯಲ್ಲಿ ನೆರವು ನೀಡುತ್ತದೆ. ಜೊತೆಗೆ, ಇದರಿಂದ ಅನವಶ್ಯಕವಾಗಿ ಹಣ ವ್ಯಯವಾಗುವುದನ್ನು ಉಳಿಸಬಹುದು.
- ಚಲನಚಿತ್ರ ಉದ್ದಿಮೆ: ಬೃಹತ್ ಚಲನಚಿತ್ರ ನಿರ್ಮಾಣಕ್ಕೆ ಹೆಚ್ಚಿನ ಸಂಖ್ಯೆಯ ಸಿಬ್ಬಂದಿ, ದುಬಾರಿ ಉಪಕರಣಗಳು ಅಗತ್ಯ. ಇದಕ್ಕಾಗಿ ದೊಡ್ಡ ಮಟ್ಟದ ಹಣಹೂಡಿಕೆಯ ಅವಶ್ಯಕತೆ ಇದೆ. ಆದರೆ ಈ 5G ತಂತ್ರಜ್ಞಾನದ ಬಳಕೆಯಿಂದ ಇವೆಲ್ಲವನ್ನೂ ಕಡಿತಗೊಳಿಸಬಹುದು.
- 5G ಸಂಪರ್ಕದ ನೆರವಿನೊಂದಿಗೆ ಆಗ್ಮೆಂಟೆಡ್ ರಿಯಾಲಿಟಿ, ಅಂದರೆ ಕಣ್ಣಿಗೆ ಕನ್ನಡಕದಂತಹ ವಸ್ತುವನ್ನು ಧರಿಸಿದಾಗ ಸಂಪೂರ್ಣ ನಮ್ಮ ಕಣ್ಣಿನ ದೃಷ್ಟಿ ಹೊರಳುವಷ್ಟೇ ವಿಶಾಲವಾಗಿ ಪರದೆಗಳನ್ನು ನೋಡಬಹುದು (ಹೆಡ್ ಫೋನ್‌ಗಳನ್ನು ಕಿವಿಗೆ ಧರಿಸಿದಾಗ ಆಲಿಸುವುದರಲ್ಲಿ ಸಿಗುವ ವಿಶೇಷ ಅನುಕೂಲಗಳ ಹಾಗೆ). ಗೇಮ್ಸ್ ಆಡುವಲ್ಲಿ ಮತ್ತು ಸಂಶೋಧನಾತ್ಮಕ ಕಲಿಕೆಯಲ್ಲಿ ಇದರ ಬಳಕೆಯು ಹೆಚ್ಚಿರುತ್ತದೆ. ಅಂತಹದೇ ಮಾದರಿಯ ವರ್ಚುವಲ್ ರಿಯಾಲಿಟಿಯಂತಹ ರಿಮೋಟ್ ಮೂಲಕ ಸಾಧಿಸಬಹುದಾದ ಅಪ್ಲಿಕೇಶನ್‌ಗಳನ್ನು 5ಜಿ ಲಭ್ಯವಾಗಿಸುತ್ತದೆ, ಮಾತ್ರವಲ್ಲ, ಸುಲಭವಾಗಿ ಕೈಗೆಟುಕುವಂತೆ ಮಾಡುತ್ತದೆ.
- ಬಳಕೆದಾರನಿಗೆ ಸ್ಮಾರ್ಟ್ ಫೋನ್‌ನ ಅತ್ಯದ್ಭುತ ಬಳಕೆಯ ಅನುಭವವನ್ನು ನೀಡುತ್ತದೆ.

ಕೃಷಿ ನಿಗಾ ವ್ಯವಸ್ಥೆ

- 5ಜಿ ತರಂಗಾಂತರ, ಕೃಷಿ ವಲಯಕ್ಕೆ ಬೇಕಾಗುವ ನೀರು, ಔಷಧ ಸಿಂಪಡಣೆ, ಕ್ರಿಮಿನಾಶಕದ ಅವಶ್ಯಕತೆ, ನೈಸರ್ಗಿಕ ಅವಘಡಗಳಾದಾಗ ಫಸಲು ನಷ್ಟದ ಸಮೀಕ್ಷೆ ಮತ್ತಿತರ ವರದಿಗಳನ್ನು ಡ್ರೋಣ್ ಸಹಾಯದಿಂದ ಬಹಳ ವೇಗವಾಗಿ ನೀಡಲು ನೆರವಾಗುತ್ತದೆ. ಹಾಗೆಯೇ ವಿಳಂಬದ ಕಾರಣದಿಂದ ಬೆಳೆಗಾರನಿಗೆ ಉಂಟಾಗುವ ಹಾನಿಯನ್ನು ತಪ್ಪಿಸುತ್ತದೆ.

ಟೆಲಿ ಮೆಡಿಸಿನ್

ವೈದ್ಯರನ್ನು ನೇರವಾಗಿ ಭೇಟಿಯಾಗಿ ಚಿಕಿತ್ಸೆ ಪಡೆಯಲಾಗದಿದ್ದರೂ, ವಿಡಿಯೊ ಕಾಲ್ ಮೂಲಕ ಆರೋಗ್ಯ ಸಂಬಂಧಿ ಸಮಸ್ಯೆಗಳ ಪರಿಹಾರಗಳನ್ನು ಪಡೆಯಬಹುದು. ವೈದ್ಯರು ವಿಡಿಯೊ ಕಾಲಿಂಗ್ ಮೂಲಕವೂ ದೂರಪ್ರದೇಶದ ರೋಗಿಯ ಆರೋಗ್ಯದ ಏರುಪೇರಿನ ನಿಗಾವಣೆಯನ್ನೂ ಮಾಡುತ್ತಿರಬಹುದು. ಈ ಸಂವಹನ ಪ್ರಕ್ರಿಯೆಯ ಸುಧಾರಣೆಗೆ 5ಜಿ ತಂತ್ರಜ್ಞಾನ ನೆರವಾಗುತ್ತದೆ.

EXAM DH ಪ್ರಜಾವಾಣಿ MASTERMIND™

5G ಎಂದರೆ ಏನು?

ಪ್ರಸಕ್ತ ಯಾಕೆ ಸುದ್ದಿಯಲ್ಲಿದೆ ? ಅದರ ಮಿತಿಗಳೇನು? ಅದನ್ನು ಜಾರಿಗೊಳಿಸುವಲ್ಲಿ ಇರುವ ಸಮಸ್ಯೆಗಳು ಯಾವುವು? ಭಾರತ ಅದನ್ನು ಸ್ವೀಕರಿಸಲು ಸಜ್ಜಾಗಿದೆಯೇ ? ಇಂಥ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರಿತ ನಿಖರ ಹಾಗೂ ವಿಸ್ತೃತ ಮಾಹಿತಿಗಾಗಿ 'ಪ್ರಜಾವಾಣಿ-ಡೆಕನ್‌ಹೆರಾಲ್ಡ್'ನ 'ಮಾಸ್ಟರ್ ಮೈಂಡ್'ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com



ಸುಭಾಷಿತ

ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡುವುದೇ ನಿಜವಾದ ಧರ್ಮ.

-ನಾರಾಯಣ ಗುರು

ಹೈದರಾಬಾದ್ ಎನ್‌ಕೌಂಟರ್ ತಪ್ಪೆಸಗಿದ ಪೊಲೀಸರಿಗೆ ಶಿಕ್ಷೆಯಾಗಲಿ

ಹೈದರಾಬಾದ್‌ನಲ್ಲಿ 26 ವರ್ಷ ವಯಸ್ಸಿನ ಪಶುವೈದ್ಯೆಯೊಬ್ಬರ ಮೇಲೆ 2019ರಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿ, ಆಕೆಯನ್ನು ಹತ್ಯೆ ಮಾಡಿದ್ದ ಪ್ರಕರಣದ ನಾಲ್ವರು ಆರೋಪಿಗಳನ್ನು ತೆಲಂಗಾಣ ಪೊಲೀಸರು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದಿದ್ದಾರೆ ಎಂಬ ಅನುಮಾನಕ್ಕೆ, ಸುಪ್ರೀಂ ಕೋರ್ಟ್ ನೇಮಿಸಿದ್ದ ಆಯೋಗದ ವರದಿಯು ಪುಷ್ಟಿ ನೀಡಿದೆ. ಆರೋಪಿಗಳ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ನೀಡಿದ್ದ ವಿವರಣೆಯು ಸತ್ಯಕ್ಕೆ ದೂರ ಮತ್ತು ಕಟ್ಟುಕತೆ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಎಸ್. ಸಿರ್ಪುರ್‌ಕರ್ ನೇತೃತ್ವದ ಆಯೋಗವು ಹೇಳಿದೆ. ಅಪರಾಧ ನಡೆದ ಸ್ಥಳಕ್ಕೆ ಆರೋಪಿಗಳನ್ನು ಕರೆದುಕೊಂಡು ಹೋಗಿದ್ದ ಸಂದರ್ಭದಲ್ಲಿ ಅವರನ್ನು ಕೊಲ್ಲುವ ಉದ್ದೇಶದಿಂದಲೇ ಅವರ ಮೇಲೆ ಗುಂಡು ಹಾರಿಸಲಾಗಿದೆ ಎಂದು ಆಯೋಗದ ವರದಿ ಹೇಳಿದೆ. ಆರೋಪಿಗಳು ಪೊಲೀಸರ ಪಿಸ್ತೂಲುಗಳನ್ನು ಕಸಿದುಕೊಂಡು, ಕೆಲವು ಪೊಲೀಸ್ ಸಿಬ್ಬಂದಿಯನ್ನು ಗಾಯಗೊಳಿಸಿ, ತಪ್ಪಿಸಿಕೊಳ್ಳಲು ಯತ್ನಿಸಿದ್ದರು ಎಂದು ಪೊಲೀಸರು ಹೇಳಿದ್ದರು. ಎನ್‌ಕೌಂಟರ್‌ನಲ್ಲಿ ಪಾಲ್ಗೊಂಡಿದ್ದ ಪೊಲೀಸರ ತಂಡವನ್ನು ರಕ್ಷಿಸಲು ಕೆಲವು ದಾಖಲೆಗಳನ್ನು ತಿದ್ದುವ ಯತ್ನವೂ ನಡೆದಿತ್ತು. ನಕಲಿ ಎನ್‌ಕೌಂಟರ್‌ಗೆ ಯೋಜನೆ ರೂಪಿಸುವಲ್ಲಿ, ನಂತರ ಸಾಕ್ಷ್ಯಗಳನ್ನು ನಾಶ ಮಾಡುವಲ್ಲಿ ಪೊಲೀಸರು ಹಲವು ಹಂತಗಳಲ್ಲಿ ಭಾಗಿಯಾಗಿದ್ದಾರೆ. 10 ಮಂದಿ ಪೊಲೀಸರ ವಿರುದ್ಧ ಕೊಲೆಯ ದೋಷಾರೋಪ ನಿಗದಿ ಮಾಡುವಂತೆ ಆಯೋಗವು ಶಿಫಾರಸು ಮಾಡಿದೆ.



ಎನ್‌ಕೌಂಟರ್ ವಿಚಾರವಾಗಿ ಪೊಲೀಸರು ನೀಡಿದ್ದ ವಿವರಣೆಯು 2019ರಲ್ಲಿಯೇ ಹಲವರಲ್ಲಿ ಅನುಮಾನಗಳನ್ನು ಮೂಡಿಸಿತ್ತು. ಏಕೆಂದರೆ, ಅವರು ನೀಡಿದ್ದ ವಿವರಣೆಯು ಎಲ್ಲ ನಕಲಿ ಎನ್‌ಕೌಂಟರ್‌ಗಳ ವಿಚಾರದಲ್ಲಿ ಪೊಲೀಸರು ನೀಡುವ ವಿವರಣೆಯಂತೆಯೇ ಇತ್ತು. ಯುವತಿಯ ಮೇಲಿನ ಸಾಮೂಹಿಕ ಅತ್ಯಾಚಾರ ಹಾಗೂ ಆಕೆಯನ್ನು ಕೊಂದ ರೀತಿಯು ಸಮಾಜದಲ್ಲಿ ಆಕ್ರೋಶ ಮೂಡಿಸಿತ್ತು ಎಂಬುದು ನಿಜ. ಈ ಪ್ರಕರಣದಲ್ಲಿ ತ್ವರಿತವಾಗಿ ನ್ಯಾಯ ಒದಗಿಸುವ ಒತ್ತಡ ಪೊಲೀಸರ ಮೇಲೆ ಇತ್ತು. ಆದರೆ, ಕಾನೂನಿನ ಅನುಸಾರವಾಗಿ ರಚನೆಯಾಗಿರುವ ಪೊಲೀಸ್ ತಂಡವು ಕಾನೂನನ್ನು ತಾನೇ ಕೈಗೆತ್ತಿಕೊಳ್ಳುವ ಕೆಲಸ ಮಾಡಬಾರದು. ಶಂಕಿತರು ಹಾಗೂ ಆರೋಪಿಗಳಿಗೆ ತಾನೇ ಶಿಕ್ಷೆ ವಿಧಿಸಿ ತಕ್ಷಣಕ್ಕೆ ನ್ಯಾಯ ಕೊಡಿಸುವ ಕೆಲಸಕ್ಕೆ ಕೈಹಾಕಬಾರದು. ಕಾನೂನಿಗೆ ಅನುಗುಣವಾಗಿ ನ್ಯಾಯದಾನ ನಡೆಯಬೇಕಿರುವ ಸಮಾಜದಲ್ಲಿ, ಕಾನೂನಿನ ಪ್ರಕ್ರಿಯೆಯನ್ನು ಪರಿಪೂರ್ಣವಾಗಿ ಪಾಲಿಸದೆ ಯಾರಿಗೂ ಶಿಕ್ಷೆ ಜಾರಿಗೊಳಿಸಬಾರದು. ಕಾನೂನನ್ನು ಎತ್ತಿಹಿಡಿಯುವ ಕೆಲಸ ಮಾಡಬೇಕಿರುವುದು ಪೊಲೀಸರ ಕರ್ತವ್ಯ. ಅವರು ಕಾನೂನನ್ನು ಕೈಗೆತ್ತಿಕೊಳ್ಳುವುದು ಸರ್ವಥಾ ಸರಿಯಲ್ಲ. ಪೊಲೀಸರು ಪ್ರಕರಣದ ತನಿಖೆ ನಡೆಸಬೇಕು, ಆರೋಪಿಗಳನ್ನು ಬಂಧಿಸಿ, ಸಾಕ್ಷ್ಯ ಕಲೆಹಾಕಬೇಕು. ನ್ಯಾಯಾಲಯವು ಸಾಕ್ಷ್ಯಗಳನ್ನು ಪರಿಶೀಲಿಸಿ, ಆರೋಪಿಗಳಿಗೆ ಶಿಕ್ಷೆ ಏನು ಎಂಬುದನ್ನು ನಿರ್ಧರಿಸಬೇಕು. ಇವೆಲ್ಲವೂ ಬಹಳ ಸಂಕೀರ್ಣ ಕೆಲಸಗಳು, ಅಪಾರ ಬದ್ಧತೆ ಬಯಸುವ ಕೆಲಸಗಳು. ಹೀಗಿದ್ದರೂ, ಇಂತಹ ಪ್ರಕ್ರಿಯೆಯ ಮೂಲಕವೇ ಶಿಕ್ಷೆ ಜಾರಿಯಾಗಬೇಕು.

> ಎನ್‌ಕೌಂಟರ್ ಮೂಲಕ ಪೊಲೀಸರು ತಕ್ಷಣಕ್ಕೆ ಶಿಕ್ಷೆ ವಿಧಿಸುವ ಪ್ರವೃತ್ತಿ ಅಪಾಯಕಾರಿ ಎಂಬುದನ್ನು ಪ್ರಜೆಗಳು ಅರ್ಥ ಮಾಡಿಕೊಳ್ಳಬೇಕು

ಪೊಲೀಸರು ಹಾಗೂ ಕೆಲವು ಕಾನೂನು ಜಾರಿ ಸಂಸ್ಥೆಗಳು ನಕಲಿ ಎನ್‌ಕೌಂಟರ್‌ಗಳ ಮೊರೆ ಹೋಗಿದ್ದು ಹಿಂದೆಯೂ ಆಗಿದೆ. ಅದಕ್ಕೆ ಕಾರಣಗಳು ಹಲವು ಇವೆ. ಸರ್ಕಾರಗಳು ಹಾಗೂ ರಾಜಕಾರಣಿಗಳ ಸೂಚನೆ ಆಧರಿಸಿಯೂ ನಕಲಿ ಎನ್‌ಕೌಂಟರ್‌ಗಳು ನಡೆದಿರಬಹುದು. ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯಲ್ಲಿ ಕೆಲವು ನ್ಯೂನತೆಗಳು ಇವೆ. ಪ್ರಕರಣಗಳು ತಾರ್ಕಿಕ ಅಂತ್ಯ ಕಾಣುವುದು ವಿಳಂಬ ಆಗಬಹುದು. ಪೊಲೀಸ್ ವ್ಯವಸ್ಥೆಯಲ್ಲಿ ಅಗತ್ಯ ಪ್ರಮಾಣದ ಸಿಬ್ಬಂದಿ ಇಲ್ಲದಿರಬಹುದು. ಅವರಿಗೆ ಸೂಕ್ತವಾದ ತರಬೇತಿ ಇಲ್ಲದಿರಬಹುದು ಹಾಗೂ ಅವರ ಮೇಲೆ ಕೆಲಸದ ಒತ್ತಡ ಅತಿಯಾಗಿ ಇದ್ದಿರಬಹುದು. ವ್ಯವಸ್ಥೆ ಹೀಗಿರುವಾಗ ಪೊಲೀಸರಲ್ಲಿ ಕೆಲವರಿಗೆ ಹಾಗೂ ಸಮಾಜದಲ್ಲಿ ಒಂದು ವರ್ಗಕ್ಕೆ ಕ್ರಿಮಿನಲ್ ಪ್ರಕರಣಗಳ ಆರೋಪಿಗಳಿಗೆ ಶಿಕ್ಷೆ ವಿಧಿಸುವ ಅತ್ಯುತ್ತಮ ಮಾರ್ಗ ಎನ್‌ಕೌಂಟರ್‌ಗಳು ಎಂದು ಅನ್ನಿಸಬಹುದು. ಹಾಗೆ ಮಾಡುವುದರಿಂದ ಅಪರಾಧ ಪ್ರಕರಣಗಳು ಕಡಿಮೆ ಆಗಬಹುದು ಎಂದು ಅವರಿಗೆ ಅನ್ನಿಸಬಹುದು. ತಕ್ಷಣಕ್ಕೆ ಶಿಕ್ಷೆ ವಿಧಿಸುವ, ಸಮಾಜದಲ್ಲಿ ಅಂತಹ ಆರೋಪಿಗಳನ್ನು ನಿರ್ಮೂಲನೆ ಮಾಡುವ ಪ್ರವೃತ್ತಿಯು ದೇಶದಲ್ಲಿ ಬೆಳೆಯುತ್ತಿದೆ. ಆದರೆ, ಪೊಲೀಸರು ಇಂತಹ ಕ್ರಮಕ್ಕೆ ಮುಂದಾಗುವುದನ್ನು ಸಮರ್ಥಿಸುವ ಸಮಾಜವು ಮುಂದೆ ಒಂದು ದಿನ ಪ್ರತೀ ವ್ಯಕ್ತಿಯ ಸ್ವಾತಂತ್ರ್ಯವನ್ನು, ಜೀವವನ್ನು ನಿರಂತರ ಅಪಾಯಕ್ಕೆ ಸಿಲುಕಿಸುತ್ತದೆ ಎಂಬುದನ್ನು ಪ್ರಜೆಗಳು ಅರ್ಥ ಮಾಡಿಕೊಳ್ಳಬೇಕು. ತಪ್ಪು ಮಾಡಿರುವ ಹೈದರಾಬಾದ್ ಪೊಲೀಸರನ್ನು ತ್ವರಿತವಾಗಿ ವಿಚಾರಣೆಗೆ ಗುರಿಪಡಿಸಬೇಕು, ಅವರಿಗೆ ಶಿಕ್ಷೆಯಾಗಬೇಕು. ಅವರಿಗೆ ಆಗುವ ಶಿಕ್ಷೆಯು ಇತರರಿಗೆ ಎಚ್ಚರಿಕೆಯ ಪಾಠವಾಗಬೇಕು.

ಆರೋಗ್ಯ ವ್ಯವಸ್ಥೆ ಬಲಪಡಿಸಲು ನಿಖರ ಅಂಕಿಅಂಶ ಪೂರಕವಾಗಿ ಒದಗಿಬರುವುದು

ಕೋವಿಡ್ ಸಾವಿನ ಸಂಖ್ಯೆಯಿಂದ ಮೌಲಿಕ ಪಾಠ



ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

ಭಾರತದಲ್ಲಿ ಕೋವಿಡ್ ಸಾವುಗಳ ಕುರಿತಾದ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ವರದಿಯನ್ನು ಭಾರತ ಸರ್ಕಾರ ತಳ್ಳಿಹಾಕಿದ್ದು ಅನಗತ್ಯ ಎಂಬುದು ಅನೇಕ ಸಾರ್ವಜನಿಕ ಆರೋಗ್ಯ ಸಂಶೋಧಕರು ಹಾಗೂ ಸಾಂಕ್ರಾಮಿಕ ರೋಗಶಾಸ್ತ್ರಜ್ಞರ ಭಾವನೆ. ವರದಿಯಾದ ಸಾವುಗಳು ಹಾಗೂ ಅಂದಾಜು ಮಾಡಲಾದ ಸಾವುಗಳನ್ನು ಲೆಕ್ಕಹಾಕಿದ ನಂತರವೂ ತಲಾ 10 ಲಕ್ಷ ಜನರಿಗೆ ಭಾರತದಲ್ಲಿನ ಸಾವಿನ ಪ್ರಮಾಣವು ಅಭಿವೃದ್ಧಿ ಹೊಂದಿದ ದೇಶಗಳು ಸೇರಿದಂತೆ ಹಲವು ದೇಶಗಳಲ್ಲಿ ವರದಿಯಾಗಿದ್ದಕ್ಕಿಂತ ಕಡಿಮೆಯೇ ಇದೆ. ಅಲ್ಲದೆ, ಲಸಿಕೆ ಕಾರ್ಯಕ್ರಮ ಹಾಗೂ ಅದನ್ನು ಜನರಿಗೆ ತಲುಪಿಸಿದ ಭಾರತದ ಸಾಧನೆಯ ಬಗ್ಗೆ ವ್ಯಾಪಕ ಮೆಚ್ಚುಗೆಯೇ ಇದೆ. ಹೀಗಿದ್ದೂ, ಸಾವುಗಳ ಕುರಿತಾದ ಹೆಚ್ಚಿನ ನಿಖರ ಅಂದಾಜು, ಭವಿಷ್ಯದಲ್ಲಿ ಮರಣ ಪ್ರಮಾಣವನ್ನು ತಗ್ಗಿಸುವ ಸಲುವಾಗಿ ಆರೋಗ್ಯ ಸಂಪನ್ಮೂಲಗಳನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ನೆರವಾಗುತ್ತದೆ ಎಂಬುದು ನಿಜ.

ಡಬ್ಲ್ಯುಎಚ್‌ಒ ವರದಿ ಏನನ್ನು ಹೇಳುತ್ತದೆ? 2020 ಹಾಗೂ 2021ರಲ್ಲಿ ಜಾಗತಿಕ ಸಾವಿನ ಪ್ರಮಾಣ ಸುಮಾರು 1.5 ಕೋಟಿ ಎಂದು ಅದು ಅಂದಾಜಿಸುತ್ತದೆ. ಜಾಗತಿಕ ಸಾವುಗಳ ಶೇ 68ರಷ್ಟು ಪ್ರಮಾಣ ಕೇವಲ 10 ರಾಷ್ಟ್ರಗಳಲ್ಲಿ ಕೇಂದ್ರೀಕೃತಗೊಂಡಿದೆ. ಆಘಾತಕಾರಿಯಾದ ಸಂಗತಿ ಎಂದರೆ, ಬಹುತೇಕ ಮೂರನೇ ಒಂದರಷ್ಟು ಸಾವುಗಳು ಭಾರತದಲ್ಲೇ ಆಗಿವೆ ಎಂದು ಹೇಳಲಾಗಿದೆ. ಇದಕ್ಕೆ ಹೋಲಿಸಿದಲ್ಲಿ, ಹೆಚ್ಚುವರಿ ಸಾವುಗಳ ಪೈಕಿ ಪಾಕಿಸ್ತಾನದ ಪಾಲು ಶೇ 1.54ರಷ್ಟು (2,30,440) ಇದೆ. ಬಾಂಗ್ಲಾದೇಶದ ಪಾಲು ಶೇ 0.9 (1,40,765) ಹಾಗೂ ಮ್ಯಾನ್ಮಾರ್ ಪಾಲು ಶೇ 0.29 (44,187) ಎಂದು ದಾಖಲಿಸಲಾಗಿದೆ. ಶ್ರೀಲಂಕಾ (-8,833) ಹಾಗೂ ಚೀನಾದಂತಹ (-52,063) ದೇಶಗಳು ಕೋವಿಡ್‌ಗೂ ಹಿಂದಿನ ವರ್ಷಗಳಲ್ಲಿ ಆಗಿರುವ ಸಾವುಗಳಿಗಿಂತ ಕಡಿಮೆ ಸಾವು ಸಂಭವಿಸಿರುವುದಾಗಿ ವರದಿ ಮಾಡಿವೆ.

ಭಾರತದಲ್ಲಿ 47 ಲಕ್ಷ ಸಾವುಗಳು ಸಂಭವಿಸಿವೆ ಎಂಬಂಥ ಡಬ್ಲ್ಯುಎಚ್‌ಒ ಅಂದಾಜು, 2022ರ ಏಪ್ರಿಲ್‌ನಲ್ಲಿ ಭಾರತದ ಆರೋಗ್ಯ ಅಧಿಕಾರಿಗಳು ಅಧಿಕೃತವಾಗಿ ವರದಿ ಮಾಡಿದ್ದ 5.24 ಲಕ್ಷಕ್ಕಿಂತ ಒಂಬತ್ತು ಪಟ್ಟು ಹೆಚ್ಚು. ಡಬ್ಲ್ಯುಎಚ್‌ಒ ಎಲ್ಲ ಹೆಚ್ಚುವರಿ ಸಾವುಗಳನ್ನೂ ಗಣನೆಗೆ ತೆಗೆದುಕೊಂಡಿದೆ ಅಥವಾ ಹಿಂದಿನ ವರ್ಷಗಳ ಅಂಕಿಅಂಶಗಳನ್ನು ಆಧರಿಸಿ, ಸಾಂಕ್ರಾಮಿಕ ಇದ್ದಿರದಿದ್ದಲ್ಲಿ ಎಷ್ಟು ಸಾವುಗಳು ಸಂಭವಿಸಿರಬಹುದಿತ್ತು ಎಂಬುದರ ಜೊತೆಗೆ, ಕೋವಿಡ್ ಅವಧಿಯಲ್ಲಿ ಸಂಭವಿಸಿದ ಸಾವುಗಳ ಮಧ್ಯದ ವ್ಯತ್ಯಾಸವನ್ನು ತನ್ನ ಲೆಕ್ಕದಲ್ಲಿ ಬಳಸಿಕೊಂಡಿದೆ. ಆದರೆ, ಸಾಂಕ್ರಾಮಿಕಕ್ಕೆ ನೇರವಾಗಿ ಸಂಬಂಧಿಸಿದ ಸಾವುಗಳನ್ನು ಮಾತ್ರವೇ ಸರ್ಕಾರ ಲೆಕ್ಕ ಹಾಕಿದೆ. ಸಾವಿನ ಸಂಖ್ಯೆಗಳ ಪ್ರಮಾಣದಲ್ಲಿನ ವ್ಯತ್ಯಾಸಕ್ಕೆ ಇದೂ ಒಂದು ಕಾರಣ. ಆದರೆ, ಈ ಅಂದಾಜನ್ನು ಹೇಗೆ ಮಾಡಲಾಯಿತು ಎಂಬುದರ ಬಗ್ಗೆಯೂ ಪ್ರಶ್ನೆಗಳನ್ನು ಎತ್ತಲಾಗಿದೆ.

ಸಾವಿನ ಸಂಖ್ಯೆಯ ಅಂದಾಜು ನಿರ್ಧರಿಸಲು ಅನುಸರಿಸಲಾದ ಪ್ರಕ್ರಿಯೆ ಹಾಗೂ ವಿಧಾನಗಳ ಕುರಿತಾದ ಪ್ರಶ್ನೆಗಳ ಮೇಲೆ ಭಾರತ ಸರ್ಕಾರದ ಆಕ್ಷೇಪಗಳು ಕೇಂದ್ರೀಕೃತಗೊಂಡಿವೆ. ನಾಗರಿಕ ನೋಂದಣಿ ವ್ಯವಸ್ಥೆಯಲ್ಲಿ (ಸಿಆರ್‌ಎಸ್) ಸಾವುಗಳ ಕುರಿತಾದ ಅಧಿಕೃತ ಅಂಕಿಅಂಶಗಳು ಲಭ್ಯ. ಹೀಗಿರುವಾಗ ಇತರ ಹಲವು ರಾಷ್ಟ್ರಗಳಲ್ಲಿ ಮಾಡಿರುವಂತೆ, ಆ ಸಂಖ್ಯೆಗಳನ್ನು ಡಬ್ಲ್ಯುಎಚ್‌ಒ ಒಪ್ಪಿಕೊಳ್ಳಬೇಕು. ಸಿಆರ್‌ಎಸ್ ಅಂಕಿಅಂಶಗಳು ಲಭ್ಯವಿರುವ ಸನ್ನಿವೇಶದಲ್ಲಿ 'ಗಣಿತ ಶಾಸ್ತ್ರದ ಮಾದರಿ'ಯ ಬಳಕೆ ಅನಗತ್ಯ ಎಂಬುದು ಸರ್ಕಾರದ ವಾದ. ಜೊತೆಗೆ, ವಿವಿಧ ವೆಬ್‌ಸೈಟ್‌ಗಳು ಹಾಗೂ 17 ರಾಜ್ಯಗಳ ಮಾಧ್ಯಮ ವರದಿಗಳಿಂದ ಅಂಕಿಅಂಶಗಳನ್ನು ಬಳಸಿ ಈ ಮಾದರಿಗಳನ್ನು ಡಬ್ಲ್ಯುಎಚ್‌ಒ ಅಭಿವೃದ್ಧಿಪಡಿಸಿದೆ. ಹೆಚ್ಚುವರಿ ಮರಣ ಪ್ರಮಾಣ ಅಂದಾಜಿಸುವುದಕ್ಕಾಗಿ 'ದೋಷಯುಕ್ತ ಅಂಕಿಅಂಶಗಳು ಹಾಗೂ ವೈಜ್ಞಾನಿಕವಾಗಿ ಪ್ರಶ್ನಾರ್ಹವಾದ ವಿಧಾನ'ಗಳನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ಇದು ಸೂಚಿಸುತ್ತದೆ ಎಂದು ಸರ್ಕಾರ ವಾದಿಸಿದೆ.

ಅಂತರರಾಷ್ಟ್ರೀಯ ತಜ್ಞರ ತಂಡವೊಂದು ಈ ಮಾದರಿಯನ್ನು ರೂಪಿಸಿದೆ ಎಂಬುದರ ಆಧಾರದ ಮೇಲೆ ಸರ್ಕಾರದ ವಾದವನ್ನು ಡಬ್ಲ್ಯುಎಚ್‌ಒ ತಳ್ಳಿಹಾಕಿದೆ. ಅಲ್ಲದೆ, ತಮ್ಮ ಅಂದಾಜು ಈ ಹಿಂದಿನ ಅಧ್ಯಯನಗಳನ್ನು ಪ್ರತಿಧ್ವನಿಸುತ್ತದೆ. 'ವರದಿಯಾಗುತ್ತಿರುವುದಕ್ಕಿಂತ ಭಾರತದ ಕೋವಿಡ್ ಸಾವುಗಳ ಸಂಖ್ಯೆ ಆರರಿಂದ ಏಳು ಪಟ್ಟು ಹೆಚ್ಚಿದೆ' ಎಂಬುದನ್ನು ಪ್ರಮುಖ ವೈದ್ಯಕೀಯ ಪತ್ರಿಕೆ 'ಲ್ಯಾನ್ಸೆಟ್'ನಲ್ಲಿ ಪ್ರಕಟವಾದ ಇತ್ತೀಚಿನ ಅಧ್ಯಯನ ವರದಿಯೂ ಹೇಳಿತ್ತು. ಅಷ್ಟೇ ಅಲ್ಲ, ಸಿಆರ್‌ಎಸ್ ಅಂಕಿಅಂಶದ ಜೊತೆಗೆ ಸರ್ಕಾರದ ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ (ಎಚ್‌ಎಂಐಎಸ್) ಮೂಲಕ ವರದಿಯಾಗುವ ವಿವರಗಳನ್ನೂ ಗಣನೆಗೆ ತೆಗೆದುಕೊಂಡಿರುವುದಾಗಿ ಡಬ್ಲ್ಯುಎಚ್‌ಒ ಪ್ರತಿಪಾದಿಸಿದೆ.


ಈ ವಿವಾದದ ಬೇರಿನಲ್ಲಿ ದೀರ್ಘಕಾಲೀನ ಸಮಸ್ಯೆಯೊಂದಿದೆ. ಅದು, ಭಾರತದಲ್ಲಿ ಸಾವುಗಳು ಹಾಗೂ ಸಾವುಗಳ ಕಾರಣ ಸರಿಯಾಗಿ ವರದಿ ಆಗದೇ ಇರುವುದು. ಶೇಕಡ 95ರಷ್ಟು ಎಲ್ಲಾ ಬಗೆಯ ಸಾವುಗಳೂ ವರದಿಯಾಗುತ್ತವೆ ಎಂಬಂಥ ಸರ್ಕಾರದ ಪ್ರತಿಪಾದನೆಯನ್ನು ಒಪ್ಪಿಕೊಂಡರೂ ಸಾವಿನ ಕಾರಣವನ್ನು ಇದೇ ಎಂದು ನಿಖರವಾಗಿ ವರ್ಗೀಕರಿಸಲಾಗದು. ಗ್ರಾಮೀಣ ಪ್ರದೇಶಗಳಲ್ಲಂತೂ ಇದು ನಿಜ. ಮಾಮೂಲು ಸಂದರ್ಭಗಳಲ್ಲೂ ವೈದ್ಯಕೀಯ ಸೌಲಭ್ಯಗಳ ಕಡಿಮೆ ಲಭ್ಯತೆಯಿಂದಾಗಿ ಸಾವುಗಳ ನಿಖರ ದಾಖಲಾತಿಗೆ ಸಮಸ್ಯೆಗಳಿವೆ. ನಿರ್ದಿಷ್ಟವಾಗಿ ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಂತೂ ಆರೋಗ್ಯ ವ್ಯವಸ್ಥೆಯ ಮೇಲೆ ಬಿದ್ದ ಒತ್ತಡಗಳಿಂದಾಗಿಯೇ ಸಾವುಗಳು ನಿಖರವಾಗಿ ದಾಖಲಾಗದಿರುವ ಸ್ಥಿತಿ ಜಾಸ್ತಿ ಇತ್ತು. ಹೀಗಿದ್ದೂ ಊಹೆಗಳು, ಬಹಿರ್ಗಣನೆಗಳು ಹಾಗೂ ಭಾಗಶಃ ಲೆಕ್ಕಗಳನ್ನು ಅಂಕಿಅಂಶ ಮಾದರಿಯು ಅವಲಂಬಿಸುವುದರಿಂದ ಇದೊಂದು ತರಹ ಕ್ಲಿಷ್ಟಕರ ವಾದದ್ದಾಗಿದ್ದು, ವಿಶ್ವಾಸಾರ್ಹ ಹಾಗೂ ಅಧಿಕೃತ ಅಂಕಿಅಂಶಗಳಿಗೆ ಬದಲಿಯಾದದ್ದು ಯಾವುದೂ ಇಲ್ಲ ಎಂಬುದೂ ನಿಜ. ಹೀಗಾಗಿ ಸಾವುಗಳು ಹಾಗೂ ಅವುಗಳ ಕಾರಣಗಳು ಸಿಆರ್‌ಎಸ್ ಮೂಲಕ ಸರಿಯಾಗಿ ದಾಖಲಾಗುವುದು ಬಹಳ ಮುಖ್ಯವಾಗುತ್ತದೆ.

ಕೋವಿಡ್ ಸಾವುಗಳನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ ಎಂಬುದನ್ನು ಗಂಭೀರವಾಗಿ ಪರಿಶೀಲಿಸುವುದಕ್ಕೆ ಮುಖ್ಯವಾದ ಕಾರಣ, ಸಾವುಗಳ ಸರಿಯಾದ ಸಂಖ್ಯೆಗಳನ್ನು ಪಡೆದುಕೊಳ್ಳುವುದು. ಇದಲ್ಲದೆ ಬೇರೆ ಕಾರಣಗಳೂ ಇವೆ. ಮೊದಲನೆಯದಾಗಿ, ಸರ್ಕಾರದ ಪುನರ್ವಿಮರ್ಶಿತ ಅಂದಾಜುಗಳೂ ಸಾವುಗಳ ಲೆಕ್ಕವನ್ನು ಕಡಿಮೆ ತೋರುತ್ತಿವೆ. ಉದಾಹರಣೆಗೆ, ಸರ್ಕಾರ ಬಿಡುಗಡೆ ಮಾಡಿದ ಇತ್ತೀಚಿನ ಅಂಕಿಅಂಶಗಳಲ್ಲಿ, 2020ರಲ್ಲಿ ಸಾವುಗಳ ಸಂಖ್ಯೆಯನ್ನು ಬಹುತೇಕ ಐದು ಲಕ್ಷ ಎಂದು ತೋರಿಸಿತ್ತು. ಇದು ಮೂಲ ವರದಿಯಲ್ಲಿದ್ದ 1.49 ಲಕ್ಷದ ಮೂರು ಪಟ್ಟಿಗಿಂತ ಹೆಚ್ಚು. ಇಂತಹ ವಿಪರ್ಯಾಸವು, ಸಾವುಗಳ ನಿಖರ ಅಂದಾಜಿಗಾಗಿ ಸರಿಯಾದ ಪ್ರಾಮಾಣಿಕ ಪ್ರಯತ್ನಕ್ಕೆ ಪ್ರೇರಣೆಯಾಗಬೇಕು.

ಡಬ್ಲ್ಯುಎಚ್‌ಒ ವಿಧಾನವನ್ನು ತಳ್ಳಿಹಾಕುವ ಬದಲಿಗೆ, ನಿರ್ದಿಷ್ಟ ಪ್ರಶ್ನೆಗಳನ್ನು ಎತ್ತಲು ಹಾಗೂ ಅಂದಾಜನ್ನು ಪರಿಷ್ಕರಿಸಲು ರಚನಾತ್ಮಕ ಸಲಹೆಗಳನ್ನು ನೀಡುವುದಕ್ಕಾಗಿ ತನ್ನದೇ ಪರಿಣತಿಯನ್ನು ಸರ್ಕಾರ ಬಳಸಿಕೊಳ್ಳಬೇಕು. ಇದು ಚರ್ಚೆಯನ್ನು ಹೆಚ್ಚು ಉಪಯುಕ್ತವಾದ ದಿಕ್ಕಿಗೆ ಒಯ್ಯುತ್ತದೆ. ಇದರಿಂದ ಜನರ ದುರಂತ ಸಾವುಗಳನ್ನು ಗುರುತಿಸಿ ಗೌರವಿಸಿದಂತೆಯೂ ಆಗುತ್ತದಲ್ಲದೆ ಆ ಸಾವುಗಳು ನಿರರ್ಥಕವಾಗದಂತೆಯೂ ನೋಡಿಕೊಂಡಂತೆ ಆಗುತ್ತದೆ.

ಕಡೆಯದಾಗಿ, ಸಾವುಗಳ ಅಂಕಿಅಂಶಗಳ ನಿಖರ ಸಂಗ್ರಹ ಏಕೆ ಬೇಕೆಂದರೆ, ಅದು ಭವಿಷ್ಯದಲ್ಲಿ ಸಾರ್ವಜನಿಕ ಆರೋಗ್ಯ ಬಿಕ್ಕಟ್ಟುಗಳನ್ನು ನಿರ್ವಹಿಸುವ ಸಲುವಾಗಿ ಆರೋಗ್ಯ ವ್ಯವಸ್ಥೆ ಸಾಮರ್ಥ್ಯವನ್ನು ಬಲಪಡಿಸಲು ನಿರ್ಧಾರ ಕೈಗೊಳ್ಳುವಂತಹವರಿಗೆ ನೆರವಾಗುತ್ತದೆ. ವಿವಾದಾತ್ಮಕ ವಾದವಿವಾದಗಳಿಗೆ ಕಾರಣವಾಗುವ ಬದಲಿಗೆ ಇಂತಹ ಅಂಕಿಅಂಶಗಳು- ರೋಗ ನಿಗಾ ವಿಸ್ತರಣೆ, ಆರೋಗ್ಯ ಕಾರ್ಯಪಡೆ ಹೆಚ್ಚಳ ಅಥವಾ ಮರು ನಿಯೋಜನೆ, ಮೂಲಸೌಕರ್ಯ ನಿರ್ಮಾಣ, ಲಸಿಕೆ ಅಭಿವೃದ್ಧಿ, ಔಷಧ ತಯಾರಿಕೆ ಮುಂತಾದವು ಸೇರಿದಂತೆ ಆರೋಗ್ಯ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆಗಳಿಗೆ ಸಂಬಂಧಿಸಿದಂತೆ ಮೌಲ್ಯಯುತ ಪಾಠಗಳನ್ನು ನೀಡಬಲ್ಲವು.

ಆರೋಗ್ಯ ವಲಯಕ್ಕೆ ಹಣಕಾಸು ಹಂಚಿಕೆ ಹೆಚ್ಚಳದ ಅಂತರಾರ್ಥ ಬಹಳ ಮುಖ್ಯವಾದದ್ದು. ಕೋವಿಡ್ ಮರಣ ಪ್ರಮಾಣದ ವಾಸ್ತವವನ್ನು ತಪ್ಪಾಗಿ ಗ್ರಹಿಸುವುದು ತಪ್ಪು ಸಂದೇಶ ಕಳಿಸಬಹುದು ಎಂಬುದನ್ನು ನಾವು ಮರೆಯಬಾರದು. ನಾವು ಯಥಾಪ್ರಕಾರದ ವ್ಯವಹಾರಗಳನ್ನೇ ಮುಂದುವರಿಸಬಹುದು. ಆದರೆ, ಸರಳವಾಗಿ ಹೇಳಬೇಕೆಂದರೆ, ಅದು ಆಯ್ಕೆ ಆಗಬಾರದು.



ಚುರುಮುರಿ



ಎಲ್ಲರೂ ಗೆದ್ದವರೇ

• ಆನಂದ

'ವಿನ್ ವಿನ್ ಸಿಚುಯೇಷನ್ ಅಂದ್ರೆ ಏನು?' ಹೆಂಡತಿ ಕೇಳಿದಳು.

'ಹೆಂಡತಿಯರು ಕೇಳುವುದೇ? ಅವರಿಗೆ ಯಾವಾಗಲೂ ವಿನ್ ವಿನ್ ಸಿಚುಯೇಷನ್ನೇ ಗಂಡಂದಿರ ವಿರುದ್ಧ' ಎಂದೆ.

'ಸೀರಿಯಸ್ಸಾಗಿ ಹೇಳಿ ಅರ್ಥ'.

'ನೋಡಮ್ಮಾ, ವಿನ್ ವಿನ್ ಎಂದರೆ ಎರಡೂ ಕಡೆಯವರು ಗೆಲ್ಲುವುದು' ಎಂದೆ.

'ಅದ್ಹೇಗೆ ಸಾಧ್ಯ? ಒಬ್ಬರು ಸೋತಾಗಲೇ ಅಲ್ವೆ ಇನ್ನೊಬ್ಬರು ಗೆಲ್ಲುವುದು? ಅಥವಾ ಒಬ್ಬರು ಗೆದ್ದಾಗ ಇನ್ನೊಬ್ಬರು ಸೋಲಲೇಬೇಕು' ಎಂದು ಪಾಟೀಸವಾಲು ಮಾಡಿದಳು.

'ನೋಡು ಒಂದು ಉದಾಹರಣೆ ಕೊಡ್ತೀನಿ. ನಿನ್ನೆ ಕಾಂಗ್ರೆಸ್ 'ಐ' ಕಮಾಂಡ್‌ನವರು ಮೇಲ್ಮನೆಗೆ ಇಬ್ಬರು ಅಭ್ಯರ್ಥಿಗಳನ್ನು ಘೋಷಿಸಿದರು'.

'ಹ್ಞಾಂ! ಅಚ್ಚರಿ ಅಭ್ಯರ್ಥಿಗಳಂತೆ...'

'ಅದೇ ವಿನ್ ವಿನ್ ಸಿಚುಯೇಷನ್' ಎಂದೆ.

'ಅಲ್ರೀ ಇನ್ನೂ ಚುನಾವಣೇನೆ ಆಗಿಲ್ಲ. ಆಗಲೇ ವಿನ್ ವಿನ್ ಅಂತಿದೀರಲ್ಲ?'

'ವಿನ್ ವಿನ್ ಈ ಅಭ್ಯರ್ಥಿಗಳಿಗಲ್ಲ. ಕಾಂಗ್ರೆಸ್ಸಿನ ಇಬ್ಬರು ಫ್ಯೂಚರ್ ಮುಖ್ಯಮಂತ್ರಿ ಅಭ್ಯರ್ಥಿಗಳಿಗೆ. ಅದೇ ಮೇಲ್ಮನೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಇಬ್ಬರು ಫ್ಯೂಚರ್ ಮು.ಮ.ಗಳಿಗೂ ವಿನ್ ವಿನ್ ಸಿಚುಯೇಷನ್' ಎಂದೆ. ಅವಳ ಮುಖ ಟಿಕೆಟ್ ಸಿಗದ ಅಭ್ಯರ್ಥಿಯ ಮುಖದಂತಾಯಿತು. 'ಸರಿಯಾಗಿ ಹೇಳಿಯಪ್ಪಾ...' ಎಂದಳು.

'ಡಿಕೆಶಿ ರೆಕಮಂಡ್ ಮಾಡಿದ ಅಭ್ಯರ್ಥಿಗಳಿಗೆ ಟಿಕೆಟ್ ಸಿಗದೇ ಇದ್ದದ್ದರಿಂದ ಸಿದ್ದರಾಮಯ್ಯನವರಿಗೆ ವಿನ್ ವಿನ್... ಸಿದ್ದರಾಮಯ್ಯನವರು ರೆಕಮಂಡ್ ಮಾಡಿದ ಹೆಸರುಗಳನ್ನು ಅಲಕ್ಷಿಸಿದ್ದರಿಂದ ಅದು ಡಿಕೆಶಿಗೆ ವಿನ್ ವಿನ್ ಸಿಚುಯೇಷನ್. ಸೊ, ಮೇಲ್ಮನೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಎರಡೂ ಫ್ಯೂಚರ್ ಮು.ಮ.ಗಳಿಗೂ ವಿನ್ ವಿನ್ ಸಿಚುಯೇಷನ್. ಹೌದೋ ಅಲ್ವೊ?'

'ಮತ್ತೆ ಬೇರೆ ಪಕ್ಷದಲ್ಲಿ ಹೇಗೆ?'

'ಜೆಡಿಎಸ್‌ನಲ್ಲಿ ಫ್ಯಾಮಿಲೀಗೆ ಯಾವಾಗಲೂ ವಿನ್ ವಿನ್. ಬಿಜೆಪಿಯಲ್ಲಿ ದೆಹಲಿ ನಾಯಕರಿಗೆ ವಿನ್ನೋ ವಿನ್ನು...'

'ದೇವರೇ ಕಾಪಾಡಬೇಕು ಮತದಾರರನ್ನ' ಎಂದು ಹೇಳಿ ಎದ್ದು ಹೋದಳು.

ದಿನದ ಟ್ವೀಟ್

ನಿಯಂತ್ರಣ ಇಲ್ಲವೇಕೆ?



ಗನ್ ನಿಯಂತ್ರಣಕ್ಕೆ ಒಪ್ಪಿಗೆ ಕೊಡಲು ಅಮೆರಿಕ ಏನನ್ನು ನಿರೀಕ್ಷಿಸುತ್ತಿದೆ? ಬಹುಶಃ ಜಗತ್ತಿನಲ್ಲಿ ನೀವು ಭಯೋತ್ಪಾದಕನಿಗಿಂತ ಹೆಚ್ಚಾಗಿ ಹದಿಹರೆಯದವನಿಂದ ಪ್ರಾಣ ಕಳೆದುಕೊಳ್ಳುವ ಸಾಧ್ಯತೆ ಇರುವ ಏಕೈಕ ದೇಶ ಅಮೆರಿಕ.

#GunTerror #TexasSchoolMassacre

ಪಾಲ್ಕಿ ಶರ್ಮಾ, ಪತ್ರಕರ್ತೆ

ಕಿಡಿನುಡಿ



2014 ಮತ್ತು 19ರಲ್ಲಿ ಚಾಂದಿನಿ ಚೌಕ ಕ್ಷೇತ್ರದಿಂದ ಲೋಕಸಭಾ ಚುನಾವಣೆಯನ್ನೂ ಗೆಲ್ಲಲಾಗದ ವ್ಯಕ್ತಿ ಕಪಿಲ್ ಸಿಬಲ್. ಅವರು ನಿವೃತ್ತಿಗೆ ಅರ್ಹರು...

ಮಣಿಶಂಕರ್ ಅಯ್ಯರ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 26-5-1997

• ಷರೀಫ್ ಆಸ್ತಿ ತನಿಖೆ: ಇಂದು ಕೋರ್ಟಿಗೆ ವರದಿ

ಬೆಂಗಳೂರು, ಮೇ 25– ಮಾಜಿ ರೈಲ್ವೆ ಸಚಿವ ಸಿ.ಕೆ. ಜಾಫರ್ ಷರೀಫ್ ಅವರು ಗೊತ್ತಾದ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸುತ್ತಿರುವ ಕೇಂದ್ರ ತನಿಖಾ ದಳವು (ಸಿಬಿಐ) ರಾಜ್ಯ ಹೈಕೋರ್ಟ್‌ನಲ್ಲಿ ನಾಳೆ ತನಿಖೆಯ ಪ್ರಗತಿ ಕುರಿತು ವರದಿ ಸಲ್ಲಿಸಲಿದೆ.

ರಾಜ್ಯಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸುತ್ತಿರುವ ಪ್ರಕರಣಗಳ ಪ್ರಗತಿ ಪರಿಶೀಲನೆಗಾಗಿ ಇಂದು ನಗರಕ್ಕೆ ಆಗಮಿಸಿದ ತನಿಖಾ ಸಂಸ್ಥೆಯ ನಿರ್ದೇಶಕ ಜೋಗಿಂದರ್ ಸಿಂಗ್, ಸುದ್ದಿಗಾರರ ಜತೆ ಮಾತನಾಡುತ್ತಾ ಈ ವಿಷಯ ತಿಳಿಸಿದರು.

ಹೈಕೋರ್ಟ್‌ನಲ್ಲಿ ನಾಗರಿಕರೊಬ್ಬರು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ನ್ಯಾಯಾಲಯವು ಷರೀಫ್ ಅವರ ಆಸ್ತಿ ಕುರಿತು ತನಿಖೆ ನಡೆಸಲು ಸಿಬಿಐಗೆ ನಿರ್ದೇಶಿಸಿದೆ.

• ಔರಾದ್‌ನಲ್ಲಿ ಕುಡಿಯುವ ನೀರು ಮಾರಾಟ!

ಬೀದರ್, ಮೇ 25– ಔರಾದ್ ಪಟ್ಟಣದಲ್ಲಿ ಕಳೆದ 16 ದಿನಗಳಿಂದ ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಉಂಟಾಗಿದ್ದು, ಕೊಡವೊಂದಕ್ಕೆ ರೂ. 2 ಮತ್ತು ಬ್ಯಾರೆಲ್‌ವೊಂದಕ್ಕೆ ರೂ. 40–50 ವರೆಗೆ ಕುಡಿಯುವ ನೀರು ಮಾರಾಟ ಮಾಡಲಾಗುತ್ತಿದೆ ಎಂದು ಇಲ್ಲಿಗೆ ಬಂದಿರುವ ವರದಿ ತಿಳಿಸಿದೆ.

ಔರಾದ್ ಪಟ್ಟಣಕ್ಕೆ ನೀರು ಪೂರೈಸುವ ಬೋರಾಳ ಹತ್ತಿರವಿರುವ ಕೊಳವೆ ಬಾವಿ ಕೆಟ್ಟಿದ್ದು, ಅದನ್ನು ಈವರೆಗೆ ರಿಪೇರಿ ಮಾಡಲು ಸಾಧ್ಯವಾಗಿಲ್ಲ. ಪಟ್ಟಣದಲ್ಲಿರುವ ಬಹುತೇಕ ಬಾವಿಗಳು ಬತ್ತಿ ಹೋಗಿರುವುದರಿಂದ ಜನರು ಕನಿಷ್ಠ 2–3 ಕಿ.ಮೀಗಳಷ್ಟು ದೂರ ಹೋಗಿ ಖಾಸಗಿ ಬಾವಿಗಳಿಂದ ಕುಡಿಯುವ ನೀರು ತರಬೇಕಾಗಿದೆ. ಇದರಿಂದಾಗಿ ಸೈಕಲ್, ತಳ್ಳುವ ಗಾಡಿ, ಮೋಟರ್ ಸೈಕಲ್ ಮೂಲಕ ಮತ್ತು ಮಕ್ಕಳು, ಮಹಿಳೆಯರು ತಲೆ ಮೇಲೆ ಕೊಡಗಳನ್ನು ಹೊತ್ತು ನೀರು ತರುವುದು ಸರ್ವೇ ಸಾಮಾನ್ಯವಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 26-5-1972

• ಭ್ರಷ್ಟಾಚಾರ ಆರೋಪದಡಿ 9 ಎಂಜಿನಿಯರುಗಳು ಸಸ್ಪೆಂಡ್

ಬೆಂಗಳೂರು, ಮೇ 25– ದುರುದ್ದೇಶ ಹಾಗೂ ಭ್ರಷ್ಟಾಚಾರದ ಆರೋಪದ ಮೇಲೆ ಒಂಬತ್ತು ಮಂದಿ ಎಂಜಿನಿಯರುಗಳನ್ನು ಇತ್ತೀಚೆಗೆ ಸಸ್ಪೆಂಡ್ ಮಾಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ. ಚೆನ್ನಬಸಪ್ಪ ಅವರು ಇಂದು ಪತ್ರಿಕಾ ವರದಿಗಾರರಿಗೆ ತಿಳಿಸಿದರು.

• ಶರಾವತಿ ಬಳಿ ಅಣುವಿದ್ಯುತ್ ಕೇಂದ್ರ ಸಂಭವ

ಬೆಂಗಳೂರು, ಮೇ 25– ಅಣುಶಕ್ತಿ ಆಯೋಗವು ರಾಜ್ಯದಲ್ಲಿ ಅಣುವಿದ್ಯುತ್ ಉತ್ಪಾದನಾ ಘಟಕವೊಂದನ್ನು ಸ್ಥಾಪಿಸುವ ನಿರೀಕ್ಷೆ ಇದೆ ಎಂದು ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ. ಚೆನ್ನಬಸಪ್ಪ ಅವರು ಇಂದು ಪತ್ರಿಕಾ ಪ್ರತಿನಿಧಿಗೆ ತಿಳಿಸಿದರು.

ಘಟಕವನ್ನು ಸ್ಥಾಪಿಸಲು ಶರಾವತಿ ಪ್ರದೇಶ ಅತ್ಯುತ್ತಮವಾಗಿದೆ ಎಂದು ಸಚಿವರು ಹೇಳಿದರು.

ಆಯೋಗದ ಅಧಿಕಾರಿಗಳು ಅನೇಕ ಪ್ರದೇಶಗಳಿಗೆ ಭೇಟಿ ಇತ್ತಿದ್ದರೆಂದೂ, ಘಟಕವನ್ನು ಸ್ಥಾಪಿಸಲು ಬೇಕಾಗುವ ಎಲ್ಲ ಸೌಲಭ್ಯಗಳೂ ಶರಾವತಿಯಲ್ಲಿವೆ ಎಂದೂ ನುಡಿದರು.

ಸಂಗತ

ಬೇಕಾಗಿರುವುದು ಒಂಟಿತನವಲ್ಲ, ಏಕಾಂತ

ಒಂಟಿತನವನ್ನು ಆತ್ಮಸಾಂಗತ್ಯವನ್ನಾಗಿ ಬದಲಾಯಿಸಲು ಸಾಧ್ಯವೇ?

• ಡಾ. ಜ್ಯೋತಿ

ಗೌತಮ ಬುದ್ಧ ಮನುಷ್ಯ ಜೀವನದ ಅರ್ಥ ಹುಡುಕುತ್ತಾ ಅರಿತುಕೊಂಡ ಸತ್ಯವೆಂದರೆ, 'ನಿನಗೆ ನೀನೇ ದಾರಿದೀಪ'. ಪ್ರಾಪಂಚಿಕ ಸುಖಗಳ ಹಂಗು ತೊರೆದು ಅಲೆಮಾರಿಯಾಗಿ, ಜನರೊಂದಿಗೆ ಚರ್ಚಿಸುತ್ತಾ ಬುದ್ಧನಿಗೆ ಅಂತಿಮವಾಗಿ ಅರಿವಾದದ್ದೇನೆಂದರೆ, ಬ್ರಹ್ಮಾಂಡದ ಅಂತಃಸತ್ವ ಪ್ರತಿಯೊಬ್ಬ ಮನುಷ್ಯನ ಒಳಗಿದೆಯೇ ವಿನಾ ಅವನ ಪ್ರಾಪಂಚಿಕ ಚಟುವಟಿಕೆಗಳಲ್ಲಿ ಅಲ್ಲ. ಅಂದರೆ, ಮನುಷ್ಯ ಅಂತರ್ಮುಖಿಯಾಗಿ ತನ್ನನ್ನು ಮತ್ತು ತನ್ನ ಬದುಕನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಲ್ಲಿ, ಬಾಹ್ಯ ಪ್ರಪಂಚದ ಏಳುಬೀಳುಗಳು ಮನಸ್ಸನ್ನು ವಿಚಲಿತಗೊಳಿಸುವುದಿಲ್ಲ. ಆದರೆ, ಮನುಷ್ಯ ತನ್ನನ್ನು ತಾನು ಅರಿತುಕೊಳ್ಳುವ ಪ್ರಕ್ರಿಯೆಗೆ ನಿಶ್ಶಬ್ದದ ಏಕಾಂತತೆ ಬೇಕು. ಸಾಮಾನ್ಯವಾಗಿ, ಅದು ಸದ್ದುಗದ್ದಲದ ಜಗತ್ತಿನಲ್ಲಿ ಅಲಭ್ಯ ಎನ್ನಬಹುದು. ಇದಕ್ಕೆ ಪ್ರಕೃತಿಯ ಆಪ್ತತೆ ಬೇಕು.

ಮೊದಲನೆಯದಾಗಿ, ನಮಗೆ ಏಕಾಂತ ಮತ್ತು ಒಂಟಿತನದ ನಡುವಿನ ವ್ಯತ್ಯಾಸದ ಅರಿವಿನ ಕೊರತೆ ಇದೆ ಎನ್ನಬಹುದು. ಏಕಾಂತವೆಂದರೆ ಒಂಟಿತನವಲ್ಲ. ಮನುಷ್ಯನಿಗೆ ಒಂಟಿತನ ಕಾಡುವಾಗ, ಮನಸ್ಸು ಬಾಹ್ಯ ಪ್ರಪಂಚದ ನಂಟಿಗಾಗಿ ಹಾತೊರೆಯುತ್ತಿರುತ್ತದೆ. ಇಂತಹ ಸ್ಥಿತಿಯಲ್ಲಿ, ಅಕಸ್ಮಾತ್ ಪ್ರಪಂಚ ನಮ್ಮನ್ನು ಕೈಬಿಟ್ಟಿದೆ ಎನಿಸಿದರೆ ಮನಸ್ಸು ತೀವ್ರ ಹತಾಶೆಯಿಂದ ಖಿನ್ನತೆಗೆ ಒಳಗಾಗಬಹುದು. ಆದರೆ, ಏಕಾಂತದ ಆತ್ಮಸಾಂಗತ್ಯ, ಬಾಹ್ಯ ಪ್ರಪಂಚದ ಒಪ್ಪಿಗೆಯ ಹಂಗನ್ನು ನಗಣ್ಯಗೊಳಿಸುತ್ತದೆ. ಈ ದಿಸೆಯಲ್ಲಿ, ತನ್ನ ಏಕಾಂತವನ್ನು ಆನಂದಿಸುವುದು ಮನುಷ್ಯನ ಅತ್ಯುನ್ನತ ಸಾಧನೆ ಎನ್ನಬಹುದು.

ಮನುಷ್ಯ ಸಂಘಜೀವಿ ಎಂಬ ಮಾತನ್ನು ಸಾಮಾನ್ಯವಾಗಿ ಕೇಳುತ್ತಿರುತ್ತೇವೆ. ನಿಜ, ಮಾನವನಿರ್ಮಿತ ವ್ಯವಸ್ಥೆಗಳ ಮುಂದುವರಿಕೆಗಾಗಿ, ಮನುಷ್ಯ ಜಗತ್ತಿನೊಂದಿಗೆ ನಿರಂತರ ಸಂಪರ್ಕ ಸಾಧಿಸುವುದು ಮುಖ್ಯ. ಆದರೆ, ಜನರೊಂದಿಗೆ ಅತಿ ಹೆಚ್ಚು ಸಮಯ ಕಳೆಯುವುದರ ಸಮಸ್ಯೆಯೆಂದರೆ, ಮನುಷ್ಯನ ಸ್ವಚಿಂತನೆ, ಬದುಕಿನ ಅರ್ಥದ ಹುಡುಕಾಟ ಮತ್ತು ಜ್ಞಾನಾರ್ಜನೆಯ ಹಾದಿಯಲ್ಲಿ ಅದೊಂದು ಪ್ರಬಲ ಅಡ್ಡಗೋಡೆ ಎನ್ನಬಹುದು. ನಾವು ವ್ಯವಸ್ಥೆಗೆ ಅಂಟಿಕೊಳ್ಳುವುದರಿಂದ ಅದರ ಪೂರಕ ಚಟುವಟಿಕೆಗಳಲ್ಲಿ ಎಷ್ಟು ಮುಳುಗಿ ಹೋಗಿರುತ್ತೇವೆಂದರೆ, ನಮಗೆ ಸ್ವಚಿಂತನೆಗೆ ಸಮಯ ಸಿಗುವುದಿಲ್ಲ. ಆದರೂ, ಅರ್ಥಪೂರ್ಣ ಬದುಕಿನ ಹುಡುಕಾಟದಲ್ಲಿ ಇರುವವರಿಗೆ ಮತ್ತು ಮಾನಸಿಕ ಯೋಗಕ್ಷೇಮಕ್ಕಾಗಿ ಜಗತ್ತಿನ ಗದ್ದಲಗಳ ನಡುವೆ ಏಕಾಂತದ ಸ್ವಚಿಂತನೆ ಬಹಳ ಮುಖ್ಯ.

ಏಕಾಂತವು ಮನುಷ್ಯನ ಸೃಜನಶೀಲತೆ, ಉತ್ಪಾದಕತೆ ಹೆಚ್ಚಿಸಿಕೊಳ್ಳಲು, ಮಾನಸಿಕ ಒತ್ತಡ, ಖಿನ್ನತೆ ಕಡಿಮೆ ಮಾಡಲು, ಕನಸುಗಳು, ಗುರಿಗಳನ್ನು ಸಾಧ್ಯವಾಗಿಸಲು ಮತ್ತು ದೈನಂದಿನ ಜಂಜಾಟದಿಂದ ಮುಕ್ತವಾಗಿ ಪುನಶ್ಚೇತನಗೊಳ್ಳಲು ಸಹಾಯಕ ಎಂದು ಅಧ್ಯಯನಗಳು ದೃಢಪಡಿಸಿವೆ. ಈ ಏಕಾಂತದಲ್ಲಿ ಮನುಷ್ಯನಿಗೆ ನಿಜವಾದ ಆಪ್ತ ಸ್ನೇಹಿತ ಎನ್ನಬಹುದಾದ ಪ್ರಕೃತಿಯಲ್ಲಿರುವ ಸಸ್ಯ ಮತ್ತು ಪ್ರಾಣಿ ಸಂಕುಲಗಳು ಕಲಿಸುವ ಅಮೂಲ್ಯ ಜೀವನಪಾಠಗಳನ್ನು ಮನುಷ್ಯ ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿಲ್ಲ. ನಮಗೆ ಪ್ರಕೃತಿ ಇನ್ನೂ ನಿಗೂಢ ವಿಸ್ಮಯವಾಗಿಯೇ ಉಳಿದಿದೆ. ಈ ಹಿನ್ನೆಲೆಯಲ್ಲಿ, ಪ್ರಕೃತಿಯು ತನ್ನ ಒಂಟಿತನವನ್ನು ಹೇಗೆ ಮನೋಲ್ಲಾಸದ ಏಕಾಂತವನ್ನಾಗಿ ಬದಲಾಯಿಸಿತು ಎನ್ನುವ ಸ್ವಅನುಭವವನ್ನು ಇಂಗ್ಲಿಷ್ ಕವಿ ವಿಲಿಯಂ ವರ್ಡ್ಸ್‌ವರ್ಥ್ 1804ರಲ್ಲಿ ರಚಿಸಿದ ಕವನ 'ಡ್ಯಾಫೋಡಿಲ್ಸ್'ನಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾನೆ.

ಇಲ್ಲಿ ನಿರೂಪಕ ಒಂಟಿತನದಲ್ಲಿ ಬಳಲುತ್ತಿರುತ್ತಾನೆ. ಅವನೇ ಹೇಳುವಂತೆ- 'ನಾನು ಬೆಟ್ಟ, ಕಣಿವೆಗಳ ಮೇಲೆ ತೇಲಾಡುವ ಮೋಡದಂತೆ ದಿಕ್ಕುದೆಸೆಯಿಲ್ಲದೆ ಒಂಟಿಯಾಗಿ ಓಡಾಡುತ್ತಿದ್ದೆ. ಆಕಸ್ಮಿಕವಾಗಿ-ಸರೋವರದ ಪಕ್ಕದಲ್ಲಿ, ಮರಗಳ ಕೆಳಗೆ, ತಂಗಾಳಿಯಲ್ಲಿ ಕುಣಿದು ಕುಪ್ಪಳಿಸುತ್ತಿದ್ದ ಚಿನ್ನದ ಬಣ್ಣದ ಡ್ಯಾಫೋಡಿಲ್ ಹೂವುಗಳ ಒಂದು ದೊಡ್ಡ ಸಮೂಹವನ್ನು ನೋಡಿದೆ. ಕ್ಷೀರಪಥದಲ್ಲಿ ಮಿನುಗುವ ಅಸಂಖ್ಯಾತ ನಕ್ಷತ್ರಗಳಂತೆ ಅವು ಹೊಳೆಯುತ್ತಿದ್ದವು. ಇಂತಹ ವಿಸ್ಮಯ ನೋಡುವಾಗ ಯಾವುದೇ ಕವಿಯ ಮನಸ್ಸು, ಮಾತು ಮರೆತು ಮೌನವಾಗುವುದು ಸಹಜ. ಆದರೆ, ನಿಧಾನವಾಗಿ ಯೋಚಿಸಿದಾಗ, ಈ ಅನುಭವ ಕ್ಷಣಿಕವಲ್ಲ, ಶಾಶ್ವತವಾದುದು ಎನಿಸಿತು. ಪ್ರಕೃತಿಯ ಈ ಪ್ರದರ್ಶನವು ವರ್ಣಿಸಲಾಗದ ಅಪಾರ ಸಂಪತ್ತನ್ನು ದಯಪಾಲಿಸಿದೆ ಎನಿಸಿತು. ಆ ಸಂಪತ್ತೆಂದರೆ, ಮುಂದಿನ ದಿನಗಳಲ್ಲಿ ನನ್ನ ಏಕಾಂತದಲ್ಲಿ ಆ ದೃಶ್ಯದ ಮರುಕಳಿಕೆಯಾದಾಗಲೆಲ್ಲ, ನನ್ನ ಹೃದಯ ಮತ್ತು ಮನಸ್ಸು ಅತೀವ ಸಂತೋಷದಿಂದ ತುಂಬಿ, ಡ್ಯಾಫೋಡಿಲ್‌ಗಳಂತೆ ನರ್ತಿಸುತ್ತಿದ್ದವು'. ಹೀಗೆ, ಕವಿಯ ಒಂಟಿತನವನ್ನು ಸವಿನೆನಪಿನ ಏಕಾಂತವನ್ನಾಗಿ ಡ್ಯಾಫೋಡಿಲ್ ಬದಲಾಯಿಸಿತು.



ಈ ರೀತಿ, ಮನುಷ್ಯನ ಒಂಟಿತನವನ್ನು ಹೋಗಲಾಡಿಸಿ, ಸ್ವಚಿಂತನೆಗಳೊಂದಿಗೆ ಕಾಲಕಳೆಯುವ ಅನುಭವವನ್ನು ಆನಂದಮಯವಾಗಿಸುವ ಶಕ್ತಿ ಪ್ರಕೃತಿಗಿದೆ. ಡ್ಯಾಫೋಡಿಲ್ ಮಾತ್ರವಲ್ಲ, ಪ್ರಕೃತಿಯಲ್ಲಿರುವ ಪ್ರತಿಯೊಂದು ಸಸ್ಯ ಮತ್ತು ಪ್ರಾಣಿ ಜೀವ ವೈವಿಧ್ಯಗಳೂ ವ್ಯಾವಹಾರಿಕ ಪ್ರಪಂಚದ ನಡುವೆಯೂ ಮನಸ್ಸಿಗೆ ಅಪರಿಮಿತ ಆನಂದವನ್ನು ನೀಡಬಲ್ಲವು. ಅಲ್ಲಿನ ವಿಸ್ಮಯಗಳಿಗೆ ಪಂಚೇಂದ್ರಿಯಗಳನ್ನು ತೆರೆದುಕೊಂಡಷ್ಟೂ ಮನುಷ್ಯನ ಸ್ವಅರಿವು ಜಾಗೃತವಾಗುತ್ತದೆ ಮತ್ತು ಜ್ಞಾನ ವೃದ್ಧಿಯಾಗುತ್ತದೆ. ಅದಕ್ಕಾಗಿಯೇ, ಇಂಗ್ಲಿಷ್ ಕವಿ ಜಾನ್ ಕೀಟ್ಸ್ ಹೇಳಿರುವುದು, 'ದಿನದ ಒಂದು ಗಂಟೆಯಾದರೂ ಪ್ರಕೃತಿಯೊಂದಿಗೆ ಕಾಲ ಕಳೆಯಿರಿ. ಹೀಗೆ ಮಾಡಿದಲ್ಲಿ, ಉಳಿದ ಅವಧಿಯಲ್ಲಿ ಲವಲವಿಕೆಯಿಂದ ಇರುತ್ತೀರಿ'. ಆದರೆ, ಮನುಷ್ಯನ ಬದುಕಿನ ಜೀವನಾಡಿಯಾದ ಪ್ರಕೃತಿಯನ್ನು ನಾವು ಬೃಹತ್ ಪ್ರಮಾಣದ ಅಭಿವೃದ್ಧಿಯ ಹೆಸರಲ್ಲಿ ಸಂಪೂರ್ಣವಾಗಿ ನಾಶ ಮಾಡುತ್ತಿದ್ದೇವಲ್ಲಾ? ಈ ವಿವೇಕಹೀನತೆಗೆ ಏನೆನ್ನಬೇಕು?

ವಾಚಕರ ವಾಣಿ

ಪೋಲಾಗುತ್ತಿದೆ ಮಾನವ ಸಂಪನ್ಮೂಲ

ಕಾರ್ಮಿಕರಿಗೆ ವೇತನ ಹಂಚಿಕೆಯಲ್ಲಿರುವ ಅಸಮಾನತೆ ಕುರಿತ ಅಂಕಿ ಅಂಶಗಳನ್ನೊಳಗೊಂಡ ವರದಿಯನ್ನು (ಪ್ರ.ವಾ., ಮೇ 23) ಓದಿ ಚಕಿತನಾದೆ. ಇದು, ದೇಶದಲ್ಲಿರುವ ಆರ್ಥಿಕ ಅಸಮಾನತೆಯ ಸ್ಪಷ್ಟ ಚಿತ್ರಣ ನೀಡಿದೆ. ದೇಶದ ಪ್ರಗತಿಗೆ ಕಾರ್ಮಿಕ ಶಕ್ತಿ ಪೂರಕ. ಆದರೆ ನಮ್ಮಲ್ಲಿ ಮಾನವ ಸಂಪನ್ಮೂಲ ಯೋಜನೆ ಇದ್ದಂತೆ ಕಾಣುವುದಿಲ್ಲ. ಇದರಿಂದಾಗಿ ಆ ಶಕ್ತಿಯು ವೃಥಾ ಪೋಲಾಗುತ್ತಿದೆ. ಇರುವಂಥ ಕಾರ್ಮಿಕರೂ ಸರಿಯಾದ ವೇತನ ಪಡೆಯದಿರುವುದು ಕಟುವಾಸ್ತವ.

ಒಂದು ಕಡೆ ಸಾಮಾಜಿಕ ಅಸಮಾನತೆ, ಇನ್ನೊಂದು ಕಡೆ ಆರ್ಥಿಕ ಅಸಮಾನತೆ. ಇವೆರಡೂ ರಾಜಕೀಯ ಅಧಿಕಾರದ ಅಸ್ತ್ರವು ಕೆಲವರಲ್ಲಷ್ಟೇ ಕೇಂದ್ರೀಕೃತವಾಗುವಂತೆ ಮಾಡಿವೆ. ಇದು ಹೀಗೇ ಮುಂದುವರಿದರೆ ಸಾಮಾನ್ಯ ಜನರ ಸ್ಥಿತಿ ಕರುಣಾಜನಕ ಆಗುವುದರಲ್ಲಿ ಸಂಶಯವಿಲ್ಲ. ಅದಕ್ಕಾಗಿ, ಅಧಿಕಾರವನ್ನು ಅಸಮಾನತೆ ನಿವಾರಣೆಗಾಗಿ ಬಳಸಬೇಕಾದ ಜರೂರತ್ತು ಎಂದಿಗಿಂತ ಇಂದು ಇದೆ.

ಬಿ.ಆರ್.ಅಣ್ಣಾಸಾಗರ, ಸೇಡಂ

ಜನಪ್ರತಿನಿಧಿಗಳು ಸೌಜನ್ಯ ರೂಢಿಸಿಕೊಳ್ಳಲಿ

ಹಲವಾರು ಕಾರಣಗಳಿಗಾಗಿ ಸರ್ಕಾರಿ ಕಚೇರಿಗಳು, ಶಾಲಾ- ಕಾಲೇಜುಗಳಿಗೆ ಭೇಟಿ ನೀಡುವ ಹಾಗೂ ಸಭೆ, ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಕೆಲವು ಶಾಸಕರು ಹಾಗೂ ಸಚಿವರು ಅಲ್ಲಿನ ನೌಕರರು, ಅಧಿಕಾರಿಗಳು, ಶಿಕ್ಷಕರು ಮತ್ತು ಉಪನ್ಯಾಸಕರೊಂದಿಗೆ ನಡೆದುಕೊಳ್ಳುವ ರೀತಿ ಅತ್ಯಂತ ಅನುಚಿತವಾಗಿ ಇರುತ್ತದೆ. ಅವರಿಗೆ ಗೌರವ ತೋರದೆ ಏಕವಚನದಿಂದ ಸಂಬೋಧಿಸುತ್ತಾ ದರ್ಪ ತೋರಿಸುತ್ತಾರೆ. ತಮ್ಮಂತೆ ಉಳಿದವರಿಗೂ ಗೌರವ, ಆತ್ಮಾಭಿಮಾನ ಇರುತ್ತದೆ ಎಂಬುದನ್ನು ಮರೆತು ಸಾರ್ವಜನಿಕರ ಮುಂದೆ, ಸಹೋದ್ಯೋಗಿಗಳ ಮುಂದೆ ಬೈಯುವುದು ಸಾಮಾನ್ಯವಾಗಿ ಬಿಟ್ಟಿದೆ. ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು, ಉಪನ್ಯಾಸಕರು ಹಾಗೂ ಪ್ರಾಚಾರ್ಯರಿಗೆ ಕೆಲವೊಮ್ಮೆ ವಿದ್ಯಾರ್ಥಿಗಳ ಮುಂದೆಯೇ ಬೈದು ಅವಮಾನಿಸುತ್ತಾರೆ. ಇದರಿಂದ ಅವರ ಮನಸ್ಸಿಗೆ ಎಷ್ಟು ಆಘಾತವಾಗುತ್ತದೆ, ವಿದ್ಯಾರ್ಥಿಗಳು ಏನು ತಿಳಿದುಕೊಳ್ಳುತ್ತಾರೆ ಎಂಬ ಬಗ್ಗೆಯೂ ಅವರು ಯೋಚಿಸುವುದಿಲ್ಲ. ಇನ್ನು ಫೋನಿನ ಮೂಲಕವಂತೂ ನೌಕರರು ಮತ್ತು ಅಧಿಕಾರಿಗಳನ್ನು ಅನೇಕ ಜನಪ್ರತಿನಿಧಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಪ್ರಕರಣಗಳು ವೈರಲ್ ಆದ ವಿಡಿಯೊ, ಆಡಿಯೊಗಳ ಮೂಲಕ ಬಹಿರಂಗಗೊಳ್ಳುತ್ತಿರುತ್ತವೆ. ಆದ್ದರಿಂದ ಜನಪ್ರತಿನಿಧಿಗಳು ಮೊದಲು ಇತರರೊಂದಿಗೆ ಸೌಜನ್ಯದಿಂದ ಮಾತನಾಡುವುದನ್ನು, ವರ್ತಿಸುವುದನ್ನು ರೂಢಿಸಿಕೊಳ್ಳಬೇಕು. ಆ ಮೂಲಕ ಇತರರಿಗೆ ಮಾದರಿಯಾಗಬೇಕು.

ಸದಾಶಿವ ಎಂ. ಮುರಗೋಡ, ರಾಮದುರ್ಗ

ಸೂತ್ರಧಾರರು ಮರೆಯಲ್ಲಿದ್ದಾರೆ...!

ಬಿಜೆಪಿಯು ಬ್ರಾಹ್ಮಣರ ಪಕ್ಷ ಎಂಬ ಆರೋಪಗಳು ಅನೂಚಾನವಾಗಿ ಕೇಳಿಬರುತ್ತಿವೆ. ಈ ಆಕ್ಷೇಪಗಳಿಗೆ ಹುರುಳಿಲ್ಲ ಎಂಬುದನ್ನು ದೃಢೀಕರಿಸುವಂತೆ, ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ಆರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಬಿ.ಎಲ್.ಸಂತೋಷ್ ಅವರ ವೈಖರಿ, ಮಾನದಂಡ, ಆಶ್ಚರ್ಯದ ಜೊತೆಗೆ ಮೆಚ್ಚುಗೆ ಪಡೆಯುತ್ತಿವೆ. ಸಂತೋಷ್ ಅವರು ಪಕ್ಷಪಾತಕ್ಕೆ ಗುರಿಯಾಗದೆ ಸಮಾಜದ ಎಲ್ಲ ವರ್ಗಗಳು ಹಾಗೂ ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸಿ ಆ ಬಳಿಕ ಒಂದು ನಿಲುವು ತೆಗೆದುಕೊಳ್ಳುತ್ತಿದ್ದಾರೆ. ಮೇಲ್ವಿಚಾರಕರಾಗಿ ಸಂತೋಷ್ ಅವರು ಸಂಘದ ಪ್ರತಿನಿಧಿಯಾಗಿದ್ದಾರೆ.

ಇಲ್ಲಿ, ಶಾಲಾ ಮಕ್ಕಳ ಪಠ್ಯಪುಸ್ತಕಗಳ ಬಗ್ಗೆ ಕೂಡ ಅದೇ ಜಾತಿ ಪಕ್ಷಪಾತದ ಆರೋಪಗಳು ಕೇಳಿಬರುತ್ತಿವೆ. ಆಗುತ್ತಿರುವ ಚರ್ಚೆಗಳಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ದೂಷಿಸಲಾಗುತ್ತಿದೆ. ದಶಕಗಳ ಅನುಭವದಿಂದ ಹೇಳುವುದಾದರೆ, ಇವರೆಲ್ಲರೂ ಬಲಿಪಶುಗಳು, ಆಟದಲ್ಲಿ ದಾಳಗಳಷ್ಟೇ. ಈ ಸಮಿತಿಯ ನೇಮಕಾತಿಯಿಂದ ಶುರುವಾಗಿ ಪಠ್ಯ, ಲೇಖಕರು ಎಲ್ಲವನ್ನೂ ನಿರ್ಣಯಿಸುವುದು 'ಕೇಶವನ ಕೃಪೆ'ಯಡಿಯಲ್ಲಿ. ವಿವರಿಸಿ ಹೇಳುವುದಾದರೆ 'ಸಂಘ ವಿನಾ ತೃಣಮಪಿ ನ ಚಲತಿ'. ಚುನಾವಣೆಗೆ ಅಭ್ಯರ್ಥಿಗಳು ಮಾತ್ರವಲ್ಲದೆ ಸಂಘದ ಒಪ್ಪಿಗೆ ಪಡೆಯದೆ ಅಥವಾ ಗಮನಕ್ಕೆ ಬಾರದೆ ಒಂದು ತೃಣವೂ ಚಲಿಸುವುದಿಲ್ಲ. ಅವರ ನಿರ್ಧಾರದಂತೆಯೇ ಸಮಿತಿಯ ಪ್ರತಿಯೊಬ್ಬರೂ ಸಹಿ ಹಾಕಿ ಅದಕ್ಕೆ ಅಧಿಕೃತವೆಂಬ ಮುದ್ರೆ ಹಾಕಲಾಗುತ್ತದೆ. ಈ ಹಿನ್ನೆಲೆಯಲ್ಲಿ, ತಮ್ಮ ಅಜೆಂಡಾ ಸುಸೂತ್ರವಾಗಿ ಕಾರ್ಯರೂಪಕ್ಕೆ ಬರಲು, ಬೇಕಾದವರನ್ನು ಆರಿಸಿರುವುದು ಕಣ್ಣಿಗೆ ಗೋಚರವಾಗುವುದಿಲ್ಲವೇ? ಈ ವಸ್ತುಸ್ಥಿತಿಯಲ್ಲಿ ಇವರೆಲ್ಲರೂ ಪಾತ್ರಧಾರಿಗಳಷ್ಟೇ, ಸೂತ್ರಧಾರರು ಮರೆಯಲ್ಲಿದ್ದಾರೆ.

ಕೆ.ಎನ್.ಭಗವಾನ್, ಬೆಂಗಳೂರು

ಭ್ರಷ್ಟಾಚಾರದ ಕಸ ಗುಡಿಸಿ

ಆರೋಗ್ಯ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಗುತ್ತಿಗೆಯಲ್ಲಿ ಕಮಿಷನ್‌ಗೆ ಬೇಡಿಕೆ ಇಡುತ್ತಿದ್ದಾರೆ ಎಂಬ ಆರೋಪದಡಿ ಪಂಜಾಬ್ ಸರ್ಕಾರವು ಆರೋಗ್ಯ ಸಚಿವ ವಿಜಯ್ ಸಿಂಗ್ಲಾ ಅವರನ್ನು ವಜಾಗೊಳಿಸಿ, ಬಂಧಿಸಿದ್ದು ಅತ್ಯಂತ ಶ್ಲಾಘನೀಯ. ಈ ನಡೆ ಎಲ್ಲ ರಾಜ್ಯಗಳಿಗೂ ಮಾದರಿಯಾಗಲಿ, ಭ್ರಷ್ಟಾಚಾರ ಎಂಬ ಕಸವನ್ನು ಗುಡಿಸಿ ಸ್ವಚ್ಛ ಆಡಳಿತಕ್ಕೆ ಒತ್ತು ನೀಡಲಿ ಎಂಬುದು ದೇಶದ ನಾಗರಿಕರ ಸದಾಶಯವಾಗಿದೆ.

ಭಾಸ್ಕರ್ ಶೆಟ್ಟಿ, ಹಾಸನ

ಅತಿರೇಕದ ವರ್ತನೆ ಸಲ್ಲ

ತಮಗೆ ಭೇದಭಾವ ಇಲ್ಲ ಎಂಬುದನ್ನು ಸಾಬೀತುಪಡಿಸಲು ಶಾಸಕ ಜಮೀರ್ ಅಹಮದ್ ಅವರು ದಲಿತ ವ್ಯಕ್ತಿಯೊಬ್ಬರ ಬಾಯಿಯಿಂದ ಆಹಾರವನ್ನು ತೆಗೆದುಕೊಂಡು ತಿನ್ನುತ್ತಿರುವ ವಿಡಿಯೊ ವೈರಲ್ ಆಗಿದೆ. ಭೇದಭಾವ ತೊಲಗಬೇಕು ಎಂಬುದು ಸಮಾನತೆ, ಭ್ರಾತೃತ್ವ ಬಯಸುವ ಎಲ್ಲರ ಆಶಯವಾಗಿದೆ ಹಾಗೂ ಅದು ಈ ಹೊತ್ತಿನ ಅಗತ್ಯ ಕೂಡ. ಅದನ್ನು ಆಚರಣೆಗೆ ತರಲು ಪರಸ್ಪರ ಪ್ರೀತಿ, ನಂಬಿಕೆ, ಗೌರವ ಹಾಗೂ ಸಹಕಾರ ಮನೋಭಾವ ಮುಖ್ಯವಾಗುತ್ತದೆ. ಅಂತಹ ವಾತಾವರಣದ ನಿರ್ಮಾಣಕ್ಕಾಗಿ ಎಲ್ಲರೂ ಶ್ರಮಿಸಬೇಕಾಗಿದೆ ಮತ್ತು ಜನರನ್ನು ವಿಭಜಿಸುವ ಶಕ್ತಿಗಳ ಹುನ್ನಾರಗಳನ್ನು ಸೋಲಿಸಬೇಕಾಗಿದೆ. ಆದರೆ ಒಬ್ಬರ ಬಾಯಿಯಿಂದ ಆಹಾರವನ್ನು ಪಡೆದು ತಾನು ತಿನ್ನುವುದು ಅವೈಜ್ಞಾನಿಕ ಎನಿಸುತ್ತದೆ. ಇದು ಪ್ರಚಾರ ನೀಡುತ್ತದೆಯೇ ವಿನಾ ವಾಸ್ತವ ಅನಿಸುವುದಿಲ್ಲ.

ಈ.ಬಸವರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಾರ್ವಜನಿಕ ಆಸ್ತಿಗೆ ಹಾನಿ ತಡೆ ಕಾಯ್ದೆ

ಹಲವು ಬಗೆಯ ದುರ್ಬಳಕೆ ಆರೋಪ

ಪ್ರಜಾವಾಣಿ ವಾರ್ತೆ

ಪ್ರತಿಭಟನೆ ಮತ್ತು ಗಲಭೆಗಳ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿಗೆ ಹಾನಿಯಾಗುವುದನ್ನು ತಡೆಯುವ ಸಲುವಾಗಿ 1985ರಲ್ಲೇ 'ಸಾರ್ವಜನಿಕ ಆಸ್ತಿಗೆ ಹಾನಿ ತಡೆ ಕಾಯ್ದೆ'ಯನ್ನು ಜಾರಿಗೆ ತರಲಾಗಿತ್ತು. ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವವರ ವಿರುದ್ಧ ಈ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿ, ತಪ್ಪಿತಸ್ಥರಿಗೆ ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ. ಈ ಕಾಯ್ದೆಗೆ ಹಲವು ಬಾರಿ ತಿದ್ದುಪಡಿ ತರಲಾಗಿದೆ. ಸರ್ಕಾರವು ಪ್ರತಿಭಟನೆ ಮತ್ತು ಭಿನ್ನಮತವನ್ನು ಹತ್ತಿಕ್ಕಲು ಈ ಕಾಯ್ದೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಎಂಬ ಆರೋಪ ಇದೆ.

ಈಚಿನ ವರ್ಷಗಳಲ್ಲಿ ಬಿಜೆಪಿ ಮತ್ತು ಮಿತ್ರಪಕ್ಷಗಳ ಆಡಳಿತವಿದ್ದ ಮತ್ತು ಆಡಳಿತವಿರುವ ರಾಜ್ಯಗಳಲ್ಲಿ ಈ ಕಾಯ್ದೆಯನ್ನು ಅತಿಹೆಚ್ಚು ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಉತ್ತರ ಪ್ರದೇಶ, ಬಿಹಾರ, ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರ (ಬಿಜೆಪಿ–ಶಿವಸೇನಾ ಸರ್ಕಾರ), ತಮಿಳುನಾಡಿನಲ್ಲಿ (ಎಐಎಡಿಎಂಕೆ ಸರ್ಕಾರ) ಈ ಕಾಯ್ದೆಯ ಅಡಿ ಸಾವಿರಾರು ಪ್ರಕರಣ ದಾಖಲಿಸಲಾಗಿದೆ. ಕೇಂದ್ರ ಸರ್ಕಾರದ ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಪ್ರತಿಭಟನೆ ನಡೆದ ಸಂದರ್ಭದಲ್ಲಿ ಈ ಕಾಯ್ದೆಯ ಅಡಿ ಹೆಚ್ಚು ಪ್ರಕರಣ ದಾಖಲಿಸಲಾಗಿದೆ. ಆದರೆ, ಇವುಗಳಲ್ಲಿ ವಜಾ ಆದ ಪ್ರಕರಣಗಳ ಪ್ರಮಾಣ ಶೇ 40ಕ್ಕೂ ಹೆಚ್ಚು. ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 7ಕ್ಕಿಂತ ಸ್ವಲ್ಪ ಹೆಚ್ಚು ಅಷ್ಟೆ. ಅಗತ್ಯವಿಲ್ಲದೇ ಇರುವ ಕಡೆಯೂ ಈ ಕಾಯ್ದೆಯನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಸರ್ಕಾರದ ಈ ದತ್ತಾಂಶಗಳೇ ಹೇಳುತ್ತವೆ.

ಉತ್ತರ ಪ್ರದೇಶ ಸರ್ಕಾರವು ಒಂದು ಹೆಜ್ಜೆ ಮುಂದೆ ಹೋಗಿ, ಈ ಕಾಯ್ದೆಗೆ ಪೂರಕವಾಗಿ ಮತ್ತೊಂದು ಕಾಯ್ದೆಯನ್ನು ಜಾರಿಗೆ ತಂದಿತ್ತು. ಆ ಮೂಲಕ, ಆಸ್ತಿಗೆ ಆದ ಹಾನಿಯ ಪರಿಹಾರ ಮೊತ್ತವನ್ನು ಗಲಭೆಗಳ ಆರೋಪಿಗಳಿಂದಲೇ ವಸೂಲಿ ಮಾಡಲು ಕಾನೂನು ರಚಿಸಿತು. ವಸೂಲಿಯನ್ನೂ ಮಾಡಿತು. 'ಪ್ರತಿಭಟನೆ ಮತ್ತು ಗಲಭೆ ನಡೆಸುವವರ ಎದೆಯಲ್ಲಿ ಭಯ ಹುಟ್ಟಬೇಕು. ಹೀಗಾಗಿ ರಾಜ್ಯ ಸರ್ಕಾರವು ಗಲಭೆಕೋರರಿಂದಲೇ ಹಾನಿಯ ಮೊತ್ತವನ್ನು ವಸೂಲಿ ಮಾಡಲಿದೆ' ಎಂದು ಉತ್ತರ ಪ್ರದೇಶ ಬಿಜೆಪಿ ನಾಯಕರು ಘೋಷಣೆ ಮಾಡಿದ್ದರು. ಕರ್ನಾಟಕ ಸರ್ಕಾರ ಸಹ ಇಂತಹದ್ದೇ ಪ್ರಯತ್ನ ಮಾಡಿತ್ತು. ಮಧ್ಯಪ್ರದೇಶ, ಹರಿಯಾಣ ಸರ್ಕಾರಗಳು ಇದೇ ಹಾದಿ ತುಳಿದಿದ್ದವು. ಒಟ್ಟಾರೆಯಾಗಿ ತಮ್ಮ ವಿರುದ್ಧದ ಭಿನ್ನಮತವನ್ನು ಹತ್ತಿಕ್ಕಲು ಮತ್ತು ಪ್ರತಿಭಟನೆಗಳು ನಡೆಯುವುದನ್ನು ತಡೆಯಲು ಎಲ್ಲಾ ಸರ್ಕಾರಗಳೂ ಈ ಕಾಯ್ದೆಯನ್ನು ಬಳಸಿಕೊಂಡಿವೆ.

ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವವರಿಗೆ ಕನಿಷ್ಠ ಆರು ತಿಂಗಳು ಮತ್ತು ಗರಿಷ್ಠ ಐದು ವರ್ಷಗಳವರೆಗೆ ಶಿಕ್ಷೆ ವಿಧಿಸಲು ಸಾರ್ವಜನಿಕ ಆಸ್ತಿಗೆ ಹಾನಿ ತಡೆ ಕಾಯ್ದೆ–1985 ಅವಕಾಶ ಮಾಡಿಕೊಟ್ಟಿದೆ. ಬೆಂಕಿ ಮತ್ತು ಸ್ಫೋಟಕಗಳ ಮೂಲಕ ಸಾರ್ವಜನಿಕ ಆಸ್ತಿಗಳಿಗೆ ಹಾನಿ ಮಾಡುವವರಿಗೆ ಕನಿಷ್ಠ ಒಂದು ವರ್ಷ ಮತ್ತು ಗರಿಷ್ಠ 10 ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಲು ಅವಕಾಶವಿದೆ. ಎರಡೂ ಸಂದರ್ಭಗಳಲ್ಲಿ ದಂಡ ವಿಧಿಸಲು ಅವಕಾಶವಿದೆ. ಆದರೆ, ಹಾನಿಯ ಮೊತ್ತವನ್ನು ತಪ್ಪಿತಸ್ಥರಿಂದಲೇ ವಸೂಲಿ ಮಾಡಲು ಈ ಕಾಯ್ದೆಯಲ್ಲಿ ಅವಕಾಶವಿಲ್ಲ. ಹೀಗಾಗಿ ಸರ್ಕಾರಗಳ ಇಂತಹ ಕ್ರಮಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಈ ಕ್ರಮಗಳ ವಿರುದ್ಧ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಆದರೆ, ಇಂತಹ ಕ್ರಮಗಳ ಪ್ರಯತ್ನ ಮತ್ತೆ ಮತ್ತೆ ನಡೆಯುತ್ತಿದೆ. ಇದನ್ನೂ ಸಹ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

ದಂಡ ವಸೂಲಿ ಯತ್ನಕ್ಕೆ ಹಿನ್ನಡೆ

ಉತ್ತರ ಪ್ರದೇಶ ಸರ್ಕಾರವು ರಾಜ್ಯದಲ್ಲಿ ಮೊದಲ ಬಾರಿಗೆ 'ಸಾರ್ವಜನಿಕ ಮತ್ತು ಖಾಸಗಿ ಆಸ್ತಿ ಹಾನಿ ಪರಿಹಾರ ವಸೂಲಿ ಕಾಯ್ದೆ'ಯನ್ನು ಜಾರಿಗೆ ತಂದಿತು. ಮೊದಲಿಗೆ ಹೊರಡಿಸಿದ್ದ ಸುಗ್ರೀವಾಜ್ಞೆಗೆ ಕಾಯ್ದೆಯ ರೂಪ ನೀಡಿತ್ತು. ಪೌರತ್ವ (ತಿದ್ದುಪಡಿ) ಕಾಯ್ದೆ ವಿರುದ್ಧದ ಪ್ರತಿಭಟನೆ ವೇಳೆ ಆಗಿರುವ ಹಾನಿಯನ್ನು ಪ್ರತಿಭಟನಕಾರರಿಂದ ತುಂಬಿಕೊಳ್ಳಲು ಸರ್ಕಾರ ಈ ಕಾಯ್ದೆಯ ಮೂಲಕ ಮುಂದಾಯಿತು. 800ಕ್ಕೂ ಹೆಚ್ಚು ಜನರ ವಿರುದ್ಧ ನೋಟಿಸ್ ಜಾರಿಗೊಳಿಸಿತು. ಇವರಿಂದ ಸುಮಾರು ₹2 ಕೋಟಿ ದಂಡ ವಸೂಲಿ ಮಾಡುವ ಉದ್ದೇಶ ಹಾಕಿಕೊಂಡಿತ್ತು. 2019ರ ಡಿಸೆಂಬರ್ ವೇಳೆಗೆ ಕಾನ್ಪುರ ಸೇರಿದಂತೆ ನಾಲ್ಕು ಜಿಲ್ಲಾಡಳಿತಗಳು 130 ಜನರಿಗೆ ನೋಟಿಸ್ ನೀಡಿದವು.

ಲಖನೌ, ಮುಜಾಫ್ಫರ್‌ನಗರ, ಮೀರತ್, ರಾಂಪುರ, ಸಂಭಾಲ್, ಕಾನ್ಪುರ ಹಾಗೂ ಮೊರಾದಾಬಾದ್‌ನ ಜನರಿಗೆ ನೋಟಿಸ್ ರವಾನೆಯಾದವು. ಮೀರತ್‌ನಲ್ಲಿ 50 ಜನರಿಗೆ ನೋಟಿಸ್ ನೀಡಲಾಗಿತ್ತು. ₹21 ಲಕ್ಷ ದಂಡ ಪಾವತಿಸುವಂತೆ ಇವರಿಗೆ ಸೂಚಿಸಲಾಗಿತ್ತು. ಸಂಭಾಲ್‌ನ ನಖಾಸಾ ಎಂಬಲ್ಲಿ 20 ದಿನಗಳಿಂದ ಪ್ರತಿಭಟನೆ ನಡೆಸಿದವರಿಗೆ ನೋಟಿಸ್ ಬಂದಿತ್ತು. 58 ಜನರಿಗೆ ₹19.2 ಲಕ್ಷ ದಂಡ ಹಾಕಲಾಗಿತ್ತು. ಗೋರಖ್‌ಪುರದ 8 ಜನರ ಮೇಲೆ ₹90 ಸಾವಿರ ಮೌಲ್ಯದ ಆಸ್ತಿ ಹಾನಿ ಮಾಡಿದ ಆರೋಪ ಹೊರಿಸಲಾಗಿತ್ತು. ರಾಂಪುರದಲ್ಲಿ 28, ಬಿಜ್ನೋರ್‌ನ 43 ಜನರಿಗೂ ನೋಟಿಸ್ ನೀಡಲಾಗಿತ್ತು. ಕಾನ್ಪುರದ 15 ಕುಟುಂಬಗಳಿಗೆ ನೋಟಿಸ್ ನೀಡಲಾಗಿತ್ತು. ಈ ಪೈಕಿ ಬಹುತೇಕರು ದಿನಗೂಲಿ ಕಾರ್ಮಿಕರು, ಹಾಲು ಮಾರುವವರು ಹಾಗೂ ಟಾಂಗಾ ಓಡಿಸುವವರಿದ್ದರು. ಇವರಿಗೆ ತಲಾ ₹13 ಸಾವಿರ ದಂಡ ವಿಧಿಸಲಾಗಿತ್ತು.


ಪೌರತ್ವ (ತಿದ್ದುಪಡಿ) ಕಾಯ್ದೆ ವಿರುದ್ಧದ ಪ್ರತಿಭಟನೆ ವೇಳೆ ಸರ್ಕಾರಿ ಆಸ್ತಿಗೆ ಹಾನಿ ಮಾಡಿದ್ದಾರೆ ಎಂಬ ಆರೋಪದ ಮೇಲೆ ಹಲವು ಆರೋಪಿಗಳ ಚಿತ್ರಗಳನ್ನು ಹೊಂದಿರುವ ಹೋರ್ಡಿಂಗ್ ಅನ್ನು ಉತ್ತರ ಪ್ರದೇಶ ಸರ್ಕಾರವು ವಿವಿಧ ಕಡೆ ಹಾಕಿತ್ತು. ಇದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಫಲಕಗಳನ್ನು ತಕ್ಷಣ ತೆರವುಗೊಳಿಸುವಂತೆ ಅಲಹಾಬಾದ್ ಹೈಕೋರ್ಟ್ ಸೂಚನೆ ನೀಡಿತ್ತು.

ಮಧ್ಯಪ್ರದೇಶದಲ್ಲಿ ಇಂತಹದ್ದೇ ಕಾಯ್ದೆ ಜಾರಿಯಲ್ಲಿದೆ. ಇತ್ತೀಚೆಗೆ ನಡೆದ ರಾಮನವಮಿ ಮೆರವಣಿಗೆ ಸಮಯದ ಗಲಭೆಗಳು ಹಾಗೂ ಖರಗೋನ್ ಘಟನೆಗಳ ಆರೋಪಿಗಳನ್ನು ಈ ವ್ಯಾಪ್ತಿಗೆ ತರಲು ಸರ್ಕಾರ ಉದ್ದೇಶಿಸಿದೆ. ಈ ನಿಟ್ಟಿನಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶ ಡಾ. ಶಿವಕುಮಾರ್ ಮಿಶ್ರಾ ನೇತೃತ್ವದ ದ್ವಿಸದಸ್ಯ ಸಮಿತಿಯನ್ನು ಸರ್ಕಾರ ರಚಿಸಿದೆ. ಈ ಸಮಿತಿ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಸರ್ಕಾರ ಪ್ರಕಟಿಸಿದೆ.

ಬೆಂಗಳೂರಿನ ಡಿ.ಜೆ. ಹಳ್ಳಿ ಗಲಭೆಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎಸ್.ಕೆಂಪಣ್ಣ ನೇತೃತ್ವದ ಕ್ಲೇಮ್ ಕಮಿಷನ್ ಅನ್ನು ರಾಜ್ಯ ಸರ್ಕಾರ ರಚಿಸಿದೆ. ಈ ಸಮಿತಿ ಇನ್ನಷ್ಟೇ ವರದಿ ನೀಡಬೇಕಿದೆ. ಉತ್ತರ ಪ್ರದೇಶದ ರೀತಿ ಕರ್ನಾಟಕ ಸರ್ಕಾರವು ಪ್ರತ್ಯೇಕ ಕಾಯ್ದೆಯನ್ನು ಜಾರಿಗೊಳಿಸಿಲ್ಲ. ಆದರೆ, ಸುಪ್ರೀಂಕೋರ್ಟ್‌ನ 2009ರ ತೀರ್ಪಿನ ಆಧಾರದಲ್ಲಿ ಕ್ಲೇಮ್ ಕಮಿಷನ್ ರಚಿಸಿದೆ.

'ಸುಪ್ರೀಂ' ಚಾಟಿ

ದಂಡ ಪಾವತಿಸುವಂತೆ ಸೂಚಿಸಿ ಆರೋಪಿಗಳಿಗೆ ನೋಟಿಸ್ ನೀಡಿರುವ ಉತ್ತರ ಪ್ರದೇಶ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಪರ್ವೇಜ್ ಆರಿಫ್ ಟಿನು ಎಂಬುವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. 'ನೋಟಿಸ್ ನೀಡಲಾದ ವ್ಯಕ್ತಿಯೊಬ್ಬರು ಆರು ವರ್ಷಗಳ ಹಿಂದೆಯೇ ಮೃತಪಟ್ಟಿದ್ದಾರೆ. ಮೃತಪಟ್ಟಾಗ ಅವರಿಗೆ 94 ವರ್ಷ ವಯಸ್ಸಾಗಿತ್ತು. ನೋಟಿಸ್ ಪಡೆದ ಸಾಕಷ್ಟು ಜನರ ವಯೋಮಾನ 90 ವರ್ಷದ ಆಸುಪಾಸಿನಲ್ಲಿದೆ' ಎಂಬ ವಿಚಾರಗಳನ್ನು ಅರ್ಜಿದಾರರು ಕೋರ್ಟ್ ಗಮನಕ್ಕೆ ತಂದಿದ್ದರು.



2009ರ ಸುಪ್ರೀಂ ಕೋರ್ಟ್ ತೀರ್ಪು, 2018ರ ಆದೇಶಗಳನ್ನು ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳು ಉಲ್ಲಂಘಿಸಿವೆ ಎಂದೂ ಅವರು ಆರೋಪಿಸಿದ್ದರು. ಇದನ್ನು ಪರಿಗಣಿಸಿದ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ, ನೋಟಿಸ್‌ಗಳನ್ನು ಹಿಂಪಡೆದು, ಈಗಾಗಲೇ ವಸೂಲಿ ಮಾಡಿರುವ ದಂಡವನ್ನು ಮರುಪಾವತಿಸುವಂತೆ ಸರ್ಕಾರಕ್ಕೆ ಸೂಚಿಸಿತ್ತು. ಕೋರ್ಟ್ ನಿರ್ದೇಶನದಂತೆ ಸರ್ಕಾರವು 274 ನೋಟಿಸ್‌ಗಳನ್ನು ಹಿಂದಕ್ಕೆ ಪಡೆಯುವುದಾಗಿ ಮಾಹಿತಿ ನೀಡಿತು. ಇದರ ಅನ್ವಯ ಕಾನ್ಪುರ ಜಿಲ್ಲಾಡಳಿತವು ಮರುಪಾವತಿ ಪ್ರಕ್ರಿಯೆ ಆರಂಭಿಸಿದ್ದು, ಮಾರ್ಚ್‌ನಲ್ಲಿ 6 ಜನರಿಗೆ ಹಣವನ್ನು ಹಿಂದಿರುಗಿಸಿದೆ.


ಶೇ 41ರಷ್ಟು ಪ್ರಕರಣಗಳು ವಜಾ

ಸಾರ್ವಜನಿಕ ಆಸ್ತಿಗಳಿಗೆ ಹಾನಿ ತಡೆ ಕಾಯ್ದೆಯ ಅಡಿಯಲ್ಲಿ ಪ್ರತಿ ವರ್ಷ ಸಾವಿರಾರು ಪ್ರಕರಣಗಳು ದಾಖಲಾಗುತ್ತಿವೆ. 2018ರಿಂದ 2020ರ ಅಂತ್ಯದವರೆಗೆ ಈ ಕಾಯ್ದೆ ಅಡಿ ದೇಶದಾದ್ಯಂತ ಒಟ್ಟು 17,730 ಪ್ರಕರಣಗಳು ದಾಖಲಾಗಿವೆ. ಆದರೆ ಇವುಗಳಲ್ಲಿ ನ್ಯಾಯಾಲಯದ ಮೆಟ್ಟಿಲೇರಿದ ಪ್ರಕರಣಗಳ ಸಂಖ್ಯೆ 8,059 ಮಾತ್ರ. ಅಂದರೆ ಹೀಗೆ ದಾಖಲಾದ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹೋದ ಪ್ರಕರಣಗಳ ಪ್ರಮಾಣ ಶೇ 45.5ರಷ್ಟು ಮಾತ್ರ.

ಈ ಅವಧಿಯಲ್ಲಿ ಪೊಲೀಸರು ತಾವು ದಾಖಲಿಸಿಕೊಂಡಿದ್ದ ಪ್ರಕರಣಗಳಲ್ಲಿ, ಸುಳ್ಳು ಪ್ರಕರಣ ಮತ್ತು ಸಾಕ್ಷ್ಯದ ಕೊರತೆ ಎಂದು ಕಾರಣ ನೀಡಿ ಒಟ್ಟು 2,946 ಪ್ರಕರಣಗಳನ್ನು ತಾವೇ ಕೈಬಿಟ್ಟಿದ್ದಾರೆ. ಅಂದರೆ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಶೇ 16.6ರಷ್ಟು ಪ್ರಕರಣಗಳು ಸುಳ್ಳು ಮತ್ತು ಅವುಗಳಿಗೆ ಸಾಕ್ಷ್ಯವಿಲ್ಲ ಎಂದು ಪೊಲೀಸರೇ ಒಪ್ಪಿಕೊಂಡಿದ್ದಾರೆ.


ಇನ್ನು ನ್ಯಾಯಾಲಯಕ್ಕೆ ಬಂದ ಪ್ರಕರಣಗಳಲ್ಲಿ 4,372 ಪ್ರಕರಣಗಳನ್ನು ವಜಾ ಮಾಡಲಾಗಿದೆ ಮತ್ತು ಖುಲಾಸೆ ಮಾಡಲಾಗಿದೆ. ಹೀಗೆ ನ್ಯಾಯಾಲಯಕ್ಕೆ ಬಂದ ಒಟ್ಟು ಪ್ರಕರಣಗಳಲ್ಲಿ ವಜಾ ಮತ್ತು ಖುಲಾಸೆ ಆದ ಪ್ರಕರಣಗಳ ಪ್ರಮಾಣ ಶೇ 54.4ರಷ್ಟು.

ಪೊಲೀಸರು ಕೈಬಿಟ್ಟ, ನ್ಯಾಯಾಲಯದಲ್ಲಿ ವಜಾ ಆದ ಮತ್ತು ಖುಲಾಸೆ ಆದ ಪ್ರಕರಣಗಳ ಒಟ್ಟು ಸಂಖ್ಯೆ 7,318. ಅಂದರೆ ಈ ಅವಧಿಯಲ್ಲಿ ಪೊಲೀಸರು ಈ ಕಾಯ್ದೆಯ ಅಡಿ ದಾಖಲಿಸಿದ ಒಟ್ಟು 17,730 ಪ್ರಕರಣಗಳಲ್ಲಿ ಶೇ 41.2ರಷ್ಟು ಪ್ರಕರಣಗಳು ವಿವಿಧ ಕಾರಣಗಳಿಂದ ವಜಾ ಆಗಿವೆ. ಈ ಅವಧಿಯಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಶಿಕ್ಷೆ ಘೋಷಣೆಯಾದ ಪ್ರಕರಣಗಳ ಸಂಖ್ಯೆ 1,378 ಮಾತ್ರ. ಅಂತಹ ಪ್ರಕರಣಗಳ ಪ್ರಮಾಣ ಕೇವಲ ಶೇ 7.7ರಷ್ಟು.



ಶೇ 55ರಷ್ಟು ಮಂದಿ ಇನ್ನೂ ಬಂಧನದಲ್ಲಿ

ಈ ಪ್ರಕರಣಗಳಲ್ಲಿ ಬಂಧಿತರಾದ ವರಲ್ಲಿ ಶೇ 28ರಷ್ಟು ಜನರು ಖುಲಾಸೆಯಾಗಿದ್ದಾರೆ. ಆದರೆ ಪ್ರಕರಣಗಳು ವಿಲೇವಾರಿಯಾಗದ ಕಾರಣ, ಶೇ 55ರಷ್ಟು ಜನರು ಇನ್ನೂ ಬಂಧನದಲ್ಲೇ ಇದ್ದಾರೆ.



ಆಧಾರ: ಸಾರ್ವಜನಿಕ ಆಸ್ತಿಗೆ ಹಾನಿ ತಡೆ ಕಾಯ್ದೆ-1985, ಎನ್‌ಸಿಆರ್‌ಬಿ ಭಾರತದಲ್ಲಿ ಅಪರಾಧ ವರದಿ-2018, 2019, 2020, ಪಿಟಿಐ, ರಾಯಿಟರ್ಸ್



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 130

ಸಂಧ್ಯೆ ತಪಸ್ಸಿಗೆ ವಸಿಷ್ಠನ ನೆರವು

ಸಂಧ್ಯೆಯು ತಪಸ್ಸಿಗಾಗಿ ಚಂದ್ರಭಾಗಪರ್ವತಕ್ಕೆ ಹೋದುದನ್ನು ತಿಳಿದ ಬ್ರಹ್ಮ ತನ್ನ ಸಮೀಪದಲ್ಲಿಯೇ ಕುಳಿತಿದ್ದ ಪುತ್ರ ವಸಿಷ್ಠ ಮುನಿಗೆ ಹೇಳಿದ, 'ಸಂಧ್ಯೆಯು ತಪಸ್ಸು ಮಾಡುವುದಕ್ಕಾಗಿ ಚಂದ್ರಭಾಗ ಪರ್ವತಕ್ಕೆ ಹೋಗಿದ್ದಾಳೆ. ಅವಳಿಗೆ ತಪಸ್ಸು ಮಾಡುವ ವಿಧಾನ ತಿಳಿಯದು. ನೀನು ಅಲ್ಲಿಗೆ ಹೋಗಿ ಆಕೆ ವಿಧಿವತ್ತಾಗಿ ತಪವನ್ನಾಚರಿಸಿ ತನ್ನ ಇಷ್ಟಾರ್ಥವನ್ನು ಪಡೆಯುವಂತೆ ಉಪದೇಶಿಸು. ನಿನ್ನ ರೂಪವನ್ನು ಹಿಂದೆ ಕಾಮವಿಕಾರವನ್ನು ಹೊಂದಿದಾಗ ನೋಡಿದ್ದಾಳೆ. ಈ ರೂಪದಿಂದಲೇ ಅವಳ ಬಳಿಗೆ ನೀನು ಹೋದರೆ ಆ ಸಂಧ್ಯೆಯು ಲಜ್ಜೆಗೊಂಡು ನಿನ್ನ ಬಳಿಗೆ ಬರಲಾರಳು. ಆದುದರಿಂದ ಬೇರೆ ರೂಪವನ್ನು ಧರಿಸು.'

'ಹಿಂದೆ ನಾವೆಲ್ಲ ಸಂಧ್ಯೆಯನ್ನು ಕಾಮುಕರಾಗಿ ನೋಡಿದ್ದರಿಂದ ಸಂಧ್ಯೆಗೆ ತುಂಬಾ ಲಜ್ಜೆಯುಂಟಾಗಿತ್ತು. ಅದರ ಪಾಪದ ಪ್ರಾಯಶ್ಚಿತ್ತಕ್ಕಾಗಿ ಪ್ರಾಣತ್ಯಾಗ ಮಾಡುತ್ತಿದ್ದಾಳೆ. ಅಲ್ಲದೆ, ಸಂಧ್ಯೆಯು ತಪಸ್ಸು ಮಾಡಿ, ಜನಗಳು ಹುಟ್ಟಿದೊಡನೆಯೇ ಕಾಮೇಚ್ಛೆಯುಳ್ಳವರಾಗಬಾರದೆಂಬ ಮರ್ಯಾದೆಯನ್ನು ಜಗತ್ತಿನಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದಾಳೆ. ಅದಕ್ಕಾಗಿ ಆ ಸಾಧ್ವಿಗೆ ಅಗತ್ಯ ಮಾರ್ಗದರ್ಶನ ನೀಡು' ಎಂದ ಬ್ರಹ್ಮ.

ತಂದೆ ಬ್ರಹ್ಮನ ಅಪ್ಪಣೆಯಂತೆ ವಸಿಷ್ಠ ಬ್ರಹ್ಮಚಾರಿರೂಪವನ್ನು ಧರಿಸಿ ಚಂದ್ರಭಾಗಗಿರಿಗೆ ಹೋದ. ಮಾನಸಸರೋವರದಂತಿದ್ದ ಬೃಹಲ್ಲೋಹಿತ ಎಂಬ ಸರೋವರತೀರದಲ್ಲಿ ಸಂಧ್ಯೆ ಇದ್ದಳು. ಕಮಲದಂತೆ ಪರಿಪೂರ್ಣವಾದ ಆ ಸರಸ್ಸು ಉದಯಿಸುತ್ತಿರುವ ಚಂದ್ರ ಮತ್ತು ನಕ್ಷತ್ರಗಳುಳ್ಳ ಪ್ರದೋಷಕಾಲದ ಆಕಾಶದಂತೆ ಕಾಣಿಸಿತು. ಆ ಬೃಹಲ್ಲೋಹಿತ ಸರಸ್ಸಿನಿಂದ ಹೊರಟ ಚಂದ್ರಭಾಗವೆಂಬ ನದಿಯು, ಆ ಪರ್ವತದ ದೊಡ್ಡ ತಪ್ಪಲಿನ ಮಾರ್ಗವಾಗಿ ಬಂದು, ದಕ್ಷಿಣ ಸಮುದ್ರದೆಡೆಗೆ ಹರಿಯುತ್ತಿತ್ತು. ಆ ಸರಸ್ಸಿನ ದಡದಲ್ಲಿ ನಿಂತಿದ್ದ ಸಂಧ್ಯೆ ಬಳಿ ಬಂದ ವಸಿಷ್ಠಮುನಿಯು ಹೀಗೆ ಪ್ರಶ್ನಿಸಿದ:

'ಎಲೈ ಮಂಗಳಸ್ವರೂಪಳೇ! ಜನರ ಸುಳಿವೇ ಇಲ್ಲದಿರುವ ಈ ಪರ್ವತಕ್ಕೆ ಯಾವ ಕಾರ್ಯಾರ್ಥವಾಗಿ ಬಂದಿರುವೆ? ನೀನಾರ ಮಗಳು? ಪೂರ್ಣಚಂದ್ರನಂತಿರುವ ನಿನ್ನ ಮುಖವು ಕಾಂತಿಯಿಲ್ಲದೆ ಬಾಡಿರುವುದೇಕೆ?' ಎಂದು ತನಗೇನೂ ಗೊತ್ತಿಲ್ಲದವನಂತೆ ಪೀಠಿಕೆ ಹಾಕಿದ. ಬ್ರಹ್ಮಚಾರಿವೇಷದಲ್ಲಿದ್ದ ವಸಿಷ್ಠಮುನಿಯನ್ನು ನೋಡಿದ ಸಂಧ್ಯೆ ಭಕ್ತಿಯಿಂದ ನಮಸ್ಕರಿಸಿ 'ಓ ಬ್ರಾಹ್ಮಣೋತ್ತಮನೇ! ನಾನು ಬ್ರಹ್ಮನ ಮನಸ್ಸಿನಿಂದ ಜನಿಸಿದವಳು. ಸಂಧ್ಯೆ ಎಂದು ನನ್ನ ಹೆಸರು. ತಪಸ್ಸು ಮಾಡಲು ಜನಸಂಚಾರವಿಲ್ಲದ ಈ ಪರ್ವತಕ್ಕೆ ಬಂದಿರುವೆ. ತಪಸ್ಸು ಮಾಡುವ ಕ್ರಮ ನನಗೆ ತಿಳಿಯದು. ಅದೇ ಚಿಂತೆಯಿಂದ ಪರಿತಪಿಸುತ್ತಿರುವೆ. ನಿನಗೆ ಯುಕ್ತವಾಗಿ ತೋರಿದರೆ ತಪಸ್ಸನ್ನು ಮಾಡುವ ವಿಧಾನವನ್ನು ಉಪದೇಶಿಸು' ಎಂದು ಕೋರಿದಳು.

'ಎಲೈ ಸಂಧ್ಯೆ! ಮೊದಲಿಗೆ ಮನಸ್ಸನ್ನು ಪರಿಶುದ್ಧಗೊಳಿಸಿಕೊಳ್ಳಬೇಕು. ಇಂದ್ರಿಯಗಳನ್ನು ನಿಯಂತ್ರಿಸುವ ಮಟ್ಟಕ್ಕೆ ಮನಸ್ಸನ್ನು ಏಕಾಗ್ರಗೊಳಿಸಬೇಕು. ಜಿತೇಂದ್ರಿಯಳಾಗಿ ಭಕ್ತವತ್ಸಲನೂ, ಪರಮಪೂಜ್ಯನಾದಂತಹ ಶಂಕರನನ್ನು ಮನಸ್ಸಿನಲ್ಲಿ ಭಕ್ತಿಯಿಂದ ಧ್ಯಾನಮಾಡಬೇಕು. ಶಿವನೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಆದಿಕಾರಣನಾಗಿದ್ದಾನೆ. ಓಂ ನಮಶ್ಶಿವಾಯ ಓಂ ಎಂಬ ಮಂತ್ರ ಪಠಿಸು; ನಿನಗೆ ಬೇಕಾದುದೆಲ್ಲವೂ ಲಭಿಸುವುದು. ಸ್ನಾನ, ಶಿವಪೂಜೆಗಳೆಲ್ಲವನ್ನು ಮೌನವಾಗಿಯೇ ಮಾಡಬೇಕು. ಹಗಲನ್ನು ಆರು ಭಾಗವಾಗಿ ವಿಭಾಗಿಸಬೇಕು. ಆರು ಭಾಗದ ಪ್ರತಿಯೊಂದು ಭಾಗಕ್ಕೆ ಷಷ್ಠಕಾಲ ಎಂದು ಹೆಸರು. ಮೊದಲಿನ ಎರಡು ಷಷ್ಠಕಾಲಗಳಲ್ಲಿ ಕ್ರಮವಾಗಿ ಎಲೆಗಳನ್ನೂ ಜಲವನ್ನೂ ಮಾತ್ರ ಆಹಾರವನ್ನಾಗಿ ತೆಗೆದುಕೊಳ್ಳಬೇಕು. ಮೂರನೇ ಉಪವಾಸವನ್ನೇ ಮಾಡಬೇಕು. ಈ ರೀತಿ ದಿನವನ್ನು ತಪಸ್ಸಿನ ಆಚರಣೆಯಿಂದ ಕಳೆದು, ಅಂತ್ಯದಲ್ಲಿ ಬಹಿರಂಗದ ವ್ಯಾಪಾರಾದಿಗಳಲ್ಲಿ ತೊಡಗಬಹುದು. ಹೀಗೆ ಮೌನ ತಪಸ್ಸನ್ನಾಚರಿಸಿದರೆ ಬ್ರಹ್ಮಚರ್ಯವು ಸಿದ್ಧಿಸುವುದು. ಸಕಲ ಇಷ್ಟಾರ್ಥಗಳೂ ಸಿದ್ಧಿಸುವುದು. ಶಿವನು ಪ್ರಸನ್ನನಾಗಿ ನಿನ್ನ ಇಷ್ಟಾರ್ಥವನ್ನು ಈಡೇರಿಸಿ, ನಿನಗೆ ಸನ್ಮಂಗಳವನ್ನುಂಟು ಮಾಡುವನು' ಎಂದು ಉಪದೇಶಿಸಿದ.

ವಸಿಷ್ಠಮುನಿಯು ಸಂಧ್ಯೆಗೆ ತಪಸ್ಸನ್ನಾಚರಿಸುವ ವಿಧಾನವನ್ನು ಉಪದೇಶಿಸಿ ಅವಳಿಂದ ಯೋಗ್ಯವಾಗಿ ಬೀಳ್ಕೊಂಡು ಅಲ್ಲಿಯೇ ಅಂತರ್ಧಾನನಾದ. ಹೀಗೆ ಬ್ರಹ್ಮ ತನ್ನ ಪುತ್ರ ನಾರದನಿಗೆ ಸಂಧ್ಯಾದೇವಿ ಚರಿತ್ರೆ ಹೇಳುವಲ್ಲಿಗೆ ಶಿವಪುರಾಣದಲ್ಲಿನ ರುದ್ರಸಂಹಿತೆಯ ಸತೀಖಂಡದಲ್ಲಿ ಐದನೆಯ ಅಧ್ಯಾಯ ಮುಗಿಯುತ್ತದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಜಾರ್ಖಂಡ್‌ನ ಹಜಾರಿಬಾಗ್‌ನಲ್ಲಿ ಹೊಸದಾಗಿ ಆಯ್ಕೆ ಆದ ಪಂಚಾಯಿತಿ ಸಮಿತಿ ಸದಸ್ಯರೊಬ್ಬರ ಗೆಲುವನ್ನು ಅವರ ಬೆಂಬಲಿಗರು ಸಂಭ್ರಮಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಪಂಚಾಯಿತಿ ಸದಸ್ಯರೊಬ್ಬರ ಗೆಲುವಿನ ಸಂಭ್ರಮಾಚರಣೆಯಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂಬ ಘೋಷಣೆ ಕೂಗಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸದಾಗಿ ಆಯ್ಕೆ ಆದ ಪಂಚಾಯಿತಿ ಸದಸ್ಯ ಮತ್ತು ಇತರ 62 ಜನರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ' ಎಂದು ದೇಶದ ಪ್ರಮುಖ ಸುದ್ದಿ ಸಂಸ್ಥೆಗಳು ವರದಿ ಮಾಡಿದೆ. ಬಿಜೆಪಿಯ ಹಲವು ಮುಖಂಡರು ಈ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಈ ವಿಡಿಯೊ ಜೊತೆ ನೀಡಲಾಗಿರುವ ವಿವರ ಸುಳ್ಳು ಎಂದು 'ಆಲ್ಟ್‌ನ್ಯೂಸ್' ವೇದಿಕೆ ವರದಿ ಮಾಡಿದೆ. ಪಂಚಾಯಿತಿ ಚುನಾವಣೆ ಗೆದ್ದ ಅಮೀನ ಅನ್ಸಾರಿ ಅವರ ಮಗ ಶಮೀಮ್ ಅನ್ಸಾರಿ ಅವರನ್ನು ಖುದ್ದಾಗಿ ಸಂಪರ್ಕಿಸಿ ಘಟನೆಗೆ ಸಂಬಂಧಿಸಿದ ಹಲವಾರು ವಿಡಿಯೊಗಳನ್ನು ತರಿಸಿಕೊಂಡೆವು. ವಿಡಿಯೊಗಳಲ್ಲಿ 'ಭೋಟಿ ಭಾ ಜಿಂದಾಬಾದ್' ಎಂಬ ಘೋಷಣೆ ಕೇಳುತ್ತದೆ. ಅದರ ಜೊತೆ 'ನಿಜಮ್ ಅನ್ಸಾರಿ ಜಿಂದಾಬಾದ್', 'ಜಗದೀಶ್ ಸಾಬ್ ಜಿಂದಾಬಾದ್' ಮತ್ತು 'ಶಮೀಮ್ ಅನ್ಸಾರಿ ಜಿಂದಾಬಾದ್' ಎಂಬ ಘೋಷಣೆಗಳೂ ಕೇಳುತ್ತವೆ. 'ಪಾಕಿಸ್ತಾನ ಜಿಂದಾಬಾದ್' ಎಂಬ ಘೋಷಣೆ ಯಾವ ವಿಡಿಯೊದಲ್ಲೂ ಕೇಳುವುದಿಲ್ಲ. ಆದರೆ 62 ಜನರ ವಿರುದ್ಧ ಪ್ರಕರಣ ದಾಖಲಾಗಿರುವುದು ನಿಜ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ನಗುಮೊಗದ ಸಹನೆ

ಸಾಸಿರದ ಯುಕ್ತಿ ಸಾಹಸವ ನೀನೆಸಗುತಿರು |
ಲೇಸು ಫಲ ದೊರೆಗೆ ನಿನ್ನೆಲ್ಲ ಪೌರುಷಕಂ ||
ಶೇಷ ನಿನಗುಳಿವುದೆಂತಾದೊಡಂ ನೋವಿನಿತು |
ಸೈಸದನು ನೀನಳದೆ – ಮಂಕುತಿಮ್ಮ || 636 ||

ಪದ-ಅರ್ಥ: ಸಾಸಿರದ = ಸಾವಿರಾರು, ನೀನೆಸಗುತಿರು = ನೀನು + ಎಸಗುತಿರು (ಮಾಡುತಿರು), ಲೇಸು = ಒಳ್ಳೆಯ, ದೊರೆಗೆ = ದೊರೆತರೆ, ಶೇಷ = ಉಳಿದದ್ದು, ನಿನಗುಳಿವುದೆಂತಾದೊಡಂ = ನಿನಗೆ + ಉಳಿವುದು + ಎಂತು + ಆದೊಡಂ, ನೋವಿನಿತು = ನೋವು + ಇನಿತು(ಸ್ವಲ್ಪ), ಸೈಸದನು = ಸೈಸು(ಸೈರಿಸು) + ಅದನು.

ವಾಚ್ಯಾರ್ಥ: ಬದುಕಿನಲ್ಲಿ ಸಾವಿರಾರು ಯುಕ್ತಿಯ, ಸಾಹಸದ ಕಾರ್ಯಗಳನ್ನು ಮಾಡುತ್ತಿರು. ನಿನ್ನ ಪ್ರಯತ್ನಕ್ಕೆ ಫಲ ದೊರಕಿದರೆ ಒಳ್ಳೆಯದು. ಆ ಕರ್ತವ್ಯದಲ್ಲಿ ನಿನಗೆ ಒಂದಿಷ್ಟು ನೋವು ಉಳಿದರೆ ಅದನ್ನು ದು:ಖಿಸದೆ ತಾಳಿಕೊ.

ವಿವರಣೆ: ಜೀವನದಲ್ಲಿ ಕರ್ಮ ಮಾಡದೆ ಒಂದು ಕ್ಷಣವೂ ಇರಲು ಸಾಧ್ಯವಿಲ್ಲ. ಭಗವದ್ಗೀತೆಯಲ್ಲಿ ಒಂದು ಸುಂದರವಾದ ಮಾತಿದೆ.

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣ: ||

'ನಿನಗೆ ಯಾವ ಕರ್ಮ ದೊರೆತಿದೆಯೋ, ಯಾವುದು ನಿನಗೆ ಕರ್ತವ್ಯವೊ, ಅದನ್ನು ಮಾಡು. ಕರ್ಮವನ್ನು ಬಿಡುವುದಕ್ಕಿಂತ ಕರ್ಮದ ಅನುಷ್ಠಾನ ಮಾಡುವುದು ಉತ್ತಮವಾದದ್ದು'. ನನಗೆ ಒಪ್ಪಿಸಿದ ಅಥವಾ ನನಗೆ ಒಪ್ಪಿತವಾದ ಕೆಲಸವನ್ನು ಮನ:ಪೂರ್ವಕವಾಗಿ, ನನಗಿರುವ ಶಕ್ತಿ, ಕೌಶಲಗಳೊಡನೆ ಮಾಡಬೇಕು. ಯಾರೋ ಹೇಳಿದರೆಂದು, ಹೇಗೋ ಮಾಡಿದರೆ ಅದು ಸಾರ್ಥಕವಾಗುವುದಿಲ್ಲ. ಕಗ್ಗ ಅದನ್ನು ಸ್ಪಷ್ಟಪಡಿಸುತ್ತದೆ. ಸಾವಿರಾರು ಯುಕ್ತಿಗಳಿಂದ, ಸಾಹಸಗಳಿಂದ ಕೆಲಸ ಮಾಡು. ಯಶಸ್ಸು ದೊರಕಿಯೇ ತೀರುತ್ತದೆಂಬ ಭರವಸೆ ಇಲ್ಲ. ಆದರೆ ಪ್ರಯತ್ನದಲ್ಲಿ ಕೊರತೆಯಾಗಬಾರದು. ಫಲ ದೊರಕಿತೋ, ಅದು ದೈವಕೃಪೆ. ಒಂದು ಸಲ ಡಾ. ಕಲಾಂರವರನ್ನು ನಾನು ಕೇಳಿದ್ದೆ, 'ಸರ್, ನೀವು ಮುಂದೆ ಭಾರತದ ರಾಷ್ಟ್ರಪತಿಯಾಗಬಹುದೆಂದು ಯೋಚಿಸಿದ್ದಿರಾ?' ಅವರು ಹೇಳಿದ ಮಾತು ಗೀತೆಯ ಮಾತೇ, 'ನನಗೆ ಒಪ್ಪಿದ ಕಾರ್ಯವನ್ನು ಅತ್ಯಂತ ಪ್ರಾಮಾಣಿಕವಾಗಿ, ಸರ್ವಶಕ್ತಿಯಿಂದ ಮಾಡುತ್ತ ಬಂದೆ. ಕೆಲಸದಲ್ಲಿ ಬಂದ ತೃಪ್ತಿಯೇ ನಾನು ಪಡೆದ ಫಲ. ಉಳಿದದ್ದನ್ನು ನಾನು ಅಪೇಕ್ಷಿಸಿರಲಿಲ್ಲ. That was a divine design (ಅದು ದೈವೀಕೃಪೆ)'.

ನಮ್ಮ ಇಂದಿನ ರಾಷ್ಟ್ರಪತಿಗಳಾದ ಶ್ರೀ ರಾಮನಾಥ ಕೋವಿಂದ್‌ರವರು ಬಂದ ದಾರಿ ಸುಗಮವಾದದ್ದಲ್ಲ. ಅದು ಕಷ್ಟದ್ದು, ಪರಿಶ್ರಮದ್ದು. ಕಾನಪುರ ಹತ್ತಿರದ ಕುಗ್ರಾಮದಲ್ಲಿ, ತುಂಬ ಬಡತನದಲ್ಲಿ ಹುಟ್ಟಿದ ಹುಡುಗ. ಇವರ ಮೇಲೆ ನಾಲ್ಕು ಅಣ್ಣಂದಿರು, ಇಬ್ಬರು ಅಕ್ಕಂದಿರು. ಮಣ್ಣಿನ ಗುಡಿಸಲೇ ಅವಾಸ. ಇವರು ಐದು ವರ್ಷದವರಿದ್ದಾಗ ಗುಡಿಸಲಿಗೆ ಬೆಂಕಿ ಹತ್ತಿ ಸುಟ್ಟು ಹೋಯಿತು. ಅದರೊಂದಿಗೆ ಅವರ ತಾಯಿಯೂ ಪ್ರಾಣ ಕಳೆದುಕೊಂಡರು. ಆದರೆ ಇವರು ಹಟಬಿಡದೆ ನಿತ್ಯ 8 ಕಿಲೋಮೀಟರ್ ನಡೆದು ಶಾಲೆಗೆ ಹೋಗಿ ಕಲಿತು, ಲಾಯರ್ ಆದರು. ಮುಂದೆ ಹೈಕೋರ್ಟಿನಲ್ಲಿ, ಸುಪ್ರೀಂ ಕೋರ್ಟಿನಲ್ಲಿ ವಾದ ಮಾಡಿದರು. ಬಡವರಿಗೆ, ದಲಿತರಿಗೆ ಪುಕ್ಕಟೆಯಾಗಿ ಸೇವೆ ಸಲ್ಲಿಸಿದರು. ಇದೆಲ್ಲ ಅವರ ಸಾಹಸ. ಸಾಹಸಕ್ಕೆ ಸರಿಯಾದ ಮನ್ನಣೆ ನಂತರ ದೊರಕಿತು.

ಹೀಗೆ ಕಾರ್ಯಮಾಡುವಾಗ ಶ್ರಮವಾಗುತ್ತದೆ, ಕೆಲವೊಮ್ಮೆ ಜನ ಅಪಹಾಸ್ಯ ಮಾಡಬಹುದು, ದೂರಬಹುದು, ಮರ್ಯಾದೆಗೆ ಭಂಗ ತರಬಹುದು. ಅದರಿಂದ ಸಾಕಷ್ಟು ನೋವು ಬಂದೀತು. ಆದರೆ ನೋವು ಬಂದೀತೆಂದು ಕೆಲಸ ಮಾಡುವುದನ್ನು ಬಿಡುವುದು ಬೇಡ. ನೋವು ಬರಲಿ, ಅದನ್ನು ಅಳದೆ ತಾಳ್ಮೆಯಿಂದ ಸ್ವೀಕರಿಸಬೇಕು. ಅದು ವ್ಯಕ್ತಿತ್ವವನ್ನು ಹುರಿಗೊಳಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಮೇ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ಏಕಾದಶಿ ಗಂ. 10-55, ನಕ್ಷತ್ರ: ರೇವತಿ ಗಂ. 24-39, ಯೋಗ: ಆಯುಷ್ಮಾನ್ ಗಂ. 22-14, ಕರಣ: ಬಾಲವ ಗಂ. 10-55, ವೃಷಭ ಮಾಸದ 11 ನೇ ದಿನ. ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-06 ಸೂರ್ಯಾಸ್ತ : 06-49 ಮುಸ್ಲಿಂ ದಿನಾಂಕ : 24 ಶವ್ವಾಲ್ ದಿನ ವಿಶೇಷ : ಅಪರ ಏಕಾದಶಿ, ಭದ್ರಕಾಳಿ ಏಕಾದಶಿ (ಪಂಜಾಬ್), ಅಸೇಷನ್ ದಿನ- ಹೋಲಿ ಗುರುವಾರ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ : 1, 3

ಮೇಷ: ಜೀವನದಲ್ಲಿ ಸಾಂಸಾರಿಕವಾಗಿ ನೆಲೆ ಕಂಡ ಸಂತೃಪ್ತಿ ಭಾವ ಮೂಡಲಿದೆ. ಇಂದು ನಿಮ್ಮ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಸಂಜೆಯೊಳಗೆ ಅಚ್ಚರಿಯ ಸುದ್ದಿ ಕೇಳಲಿರುವಿರಿ.

ವೃಷಭ: ಮಗಳ ಮದುವೆಯ ವಿಚಾರದಲ್ಲಿ ಹೊಸ ಸಂಬಂಧಗಳು ಹುಡುಕಿಕೊಂಡು ಬರಲಿವೆ. ನೀವು ಕೈಗೆತ್ತಿಕೊಂಡ ಕೆಲಸಗಳು ಖರ್ಚಿಗೆ ಕಾರಣವಾದರೂ ಪ್ರಯೋಜನಕಾರಿ. ಭವಿಷ್ಯದ ದಿನಗಳು ನಿಮ್ಮದಾಗಲಿದೆ.

ಮಿಥುನ: ದಿನನಿತ್ಯದ ಸಿಬ್ಬಂದಿ ವರ್ಗದವರಿಂದ ಹೆಚ್ಚಿನ ಸಹಕಾರ ನಿರೀಕ್ಷಿಸಬೇಡಿ. ಕೋರ್ಟ್ ಕಚೇರಿಗಳಲ್ಲಿ ಸಮಸ್ಯೆ ಇದ್ದಲ್ಲಿ ಬಗೆಹರಿಸಿಕೊಳ್ಳಲು ಸೂಕ್ತ ಸಮಯ. ನಿರ್ಧಾರವನ್ನು ಸ್ಪಷ್ಟ ಮಾತುಗಳಲ್ಲಿ, ಬರಹದಲ್ಲಿ ತಿಳಿಯಪಡಿಸಿ.

ಕರ್ಕಾಟಕ: ಬದಲಾವಣೆ ಬಯಸಿದಲ್ಲಿ ಕಾಯುವುದು ಅವಶ್ಯ. ಉದ್ಯೋಗದಲ್ಲಿನ ಪ್ರಯತ್ನಗಳು ವ್ಯಕ್ತಿಯೊಬ್ಬರ ಬೆಂಬಲದಿಂದ ನೆರವೇರುವುದು. ಮಕ್ಕಳಿಗೆ ಆರೋಗ್ಯ ಭಾಗ್ಯ. ಪಾಲುದಾರರೊಂದಿಗೆ ಅತಿ ಎಚ್ಚರಿಕೆಯಿಂದ ವ್ಯವಹರಿಸಿ.

ಸಿಂಹ: ಯಾವುದೇ ಕೆಲಸ ಮಾಡಿದರೂ ಆಲೋಚಿಸುವುದು ಒಳ್ಳೆಯದು. ಹೊಸ ಜವಾಬ್ದಾರಿಯೊಂದನ್ನು ನಿಭಾಯಿಸಬೇಕಾಗುವುದು. ದೂರ ಪ್ರಯಾಣದ ಅನಿವಾರ್ಯತೆಯಿದ್ದಲ್ಲಿ ರಾಹುಕಾಲದ ನಂತರ ಪ್ರಯಾಣ ಬೆಳೆಸಿ.

ಕನ್ಯಾ: ಇತರರಿಗೆ ಮಾದರಿಯಾಗುವಂತೆ ಜೀವನ ನಡೆಸಬೇಕೆಂಬ ನಿಮ್ಮ ಆಸೆಗೆ ಪುಷ್ಟಿ ಕೊಡುವ ವಾತಾವರಣ ಸಿಗಲಿದೆ. ನಿಮ್ಮ ಅಭ್ಯುದಯದತ್ತಲೇ ನಿಮ್ಮ ಗಮನವಿರಲಿ. ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವಿರಿ.

ತುಲಾ: ಸಮಸ್ಯೆಗಳ ಪರಿಹಾರಕ್ಕಾಗಿ ಹಿತ ಚಿಂತಕರೊಡನೆ ಮಾತುಕತೆ ನಡೆಸುವುದು ಒಳ್ಳೆಯದು. ಲೇವಾದೇವಿ ವ್ಯವಹಾರಗಳಿಂದ ನಷ್ಟ ಪ್ರಾಪ್ತಿ. ಬುದ್ಧಿಶಕ್ತಿಯನ್ನು ಒಳ್ಳೆಯ ಕೆಲಸಗಳಿಗೆ ಉಪಯೋಗಿಸಿಕೊಂಡಲ್ಲಿ ಯಶಸ್ಸು.

ವೃಶ್ಚಿಕ: ಸರ್ಕಾರಿ ಕೆಲಸಕ್ಕೆ ಹೆಚ್ಚು ಓಡಾಟ. ಕೆಲವೊಂದು ಸಮಸ್ಯೆಗಳಿಗೆ ಪೊಲೀಸರಿಂದ ಪರಿಹಾರ ತೆಗೆದುಕೊಳ್ಳುವುದು ಉತ್ತಮ, ಅನಿವಾರ್ಯ ಅನಿಸಲಿದೆ. ಚಿರಂಜೀವಿಗಳ ಬಗೆಗಿನ ಚಿಂತೆಯೂ ಹೆಚ್ಚಾಗಲಿದೆ.

ಧನು: ಹಣದ ಅಡಚಣೆ ಇರುವುದಿಲ್ಲ. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ. ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ. ಪ್ರೇಮಿಗಳ ಪಾಲಿಗೆ ಈ ದಿನ ಅತ್ಯುತ್ತಮ. ಆರೋಗ್ಯದ ಬಗ್ಗೆ ಕಾಳಜಿ ಅವಶ್ಯಕವಾಗುತ್ತದೆ.

ಮಕರ: ಯಾವುದೇ ವಿಷಯದಲ್ಲೂ ಹೆಚ್ಚಿನ ಆಸೆ ಬೇಡ. ಆಸೆ ನಿರಾಸೆಯಾಗುವ ಲಕ್ಷಣ. ನಿಮಗೆ ಅಚ್ಚರಿಯೆನಿಸುವ ಸುದ್ದಿಯೊಂದು ಅನ್ಯರ ಮೂಲಕ ತಿಳಿಯಲಿದೆ. ಅದನ್ನು ಯಾರಲ್ಲೂ ಹೇಳಿಕೊಳ್ಳದೇ ಇರುವುದು ಉತ್ತಮ.

ಕುಂಭ: ನಿಮ್ಮ ಕೈಕೆಳಗಿನ ನೌಕರರ ನೆರವು ಅಗತ್ಯವೆನಿಸಲಿದೆ. ನಿಮ್ಮ ಶ್ರಮದ ದುಡಿಮೆಗೆ ಉತ್ತಮ ಫಲ. ಮನಸ್ಸು ಉಲ್ಲಸಿತವಾಗಿರುವುದು. ಸಿಹಿ ಪದಾರ್ಥಗಳ ತಯಾರಕರಿಗೆ ಹೆಸರಾಂತ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾಲ.


ಮೀನ: ನಿಮ್ಮಲ್ಲಿ ಸಾಮಾಜಿಕ ಕಳಕಳಿ ಹೆಚ್ಚಲಿದೆ. ವ್ಯವಹಾರಗಳ ಗೊಂದಲಗಳನ್ನು ನಿವಾರಿಸಿಕೊಳ್ಳುವಿರಿ. ಬಹುಕಾಲದ ರೋಗಬಾಧೆಯಿಂದ ಚೇತರಿಕೆ.

ಪದಬಂಧ 4969

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಗಿಲಿ ಗಿಲಿ ಶಬ್ದಮಾಡುವ ಮಕ್ಕಳಾಟಿಕೆ (3)
2. ತಾವರೆ ಇಲ್ಲಿದೆ (3)
4. ಆರೋಹದ ನಂತರ ಇಳಿಯುವಿಕೆ! (4)
7. ಮಾಡಿದ ಕೆಲಸಕ್ಕೆ ಪ್ರತಿಯಾಗಿ ದೊರೆತ ಲಾಭ (4)
9. ವನದಲ್ಲಿದ್ದವನದು ಹೊಸಪ್ರಾಯ! (5)
12. ಸ್ವಾಮಿಗಿರುವ ಆತ್ಮಾಭಿಮಾನ! (4)
13. ಶುರುವಿನಲ್ಲೇ ಕೇಳಿದ ಲಂಚ! (4)
15. ಕ್ಷಣಮಾತ್ರದ ಗೋಚರಿಸಿದ ತಾರೆ! (3)
16. ಮನದಿಂದ ಮಾಡಿಕೊಂಡ ಅರಿಕೆ (3)

ಮೇಲಿಂದ ಕೆಳಕ್ಕೆ
1. ಅಂಗಿ ಅರ್ಧ ಧರಿಸುವಾಗ ಪತ್ನಿ ತಿರುಗಿದಳೇ? (3)
3. ಸಂಕೀರ್ಣ ಅಥವಾ ಕಠಿಣ (3)
5. ವಠಾರದಲ್ಲಿರುವ ಮದುವೆ ಗಂಡು (2)
6. ಕುದುರೆಯ ಮುಖ (5)
7. ಹೀಗೆ ವರ್ಚಸ್ಸು ಬೀರು! (5)
8. ಫಲಕದ ಹತ್ತಿರವಿರುವ ಹಣ್ಣು (2)
10. ಅಭಿನಯಿಸುವಾಗ ತೋರಿಸಿದ ಹೊಕ್ಕಳು! (2)
11. ಒಂಬತ್ತಾದರೂ ಇದು ಹೊಸತು! (2)
12. ವಶ ಅಥವಾ ಅಂಕೆ! (3)
14. ಆ ಹೊತ್ತು ಆದ ತೊಂದರೆಯಿಲ್ಲಿ ಉಲ್ಟಾ! (3)



4968ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3. ರಣರಂಗ 5. ಜಾಯಮಾನ
6. ದಾರಿಹೋಕ 8. ಕಳಕಳಿ
11. ಮಕರಂದ 13. ಸವಿಸ್ತಾರ
15. ಪ್ರಕರಣ 16. ಕರಗತ

ಮೇಲಿಂದ ಕೆಳಕ್ಕೆ:
1. ಹಜಾರ 2. ಪ್ರಾಮಾಣಿಕ
3. ರಸದಾಳಿ 4. ಗಮಕ
7. ಹೋಲಿಕೆ 9. ಕಳಂಕ
10. ಹರವಿ 11. ಮರಕತ
12. ದಸಕತ್ತು 13. ಸರೀಕ
14. ಪ್ರಣಯ

ಸುಡೊಕು 5355

					8	2	7	
			4	9				3
	7	8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5354 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,125
ಇಂದಿನ ಅಂತ್ಯ	16,026
▼	99
ದಿನದ ಕನಿಷ್ಠ	16,006

ವಿನಿಮಯ ದರ

$ ಡಾಲರ್	77.55
£ ಪೌಂಡ್	96.92
€ ಯುರೊ	82.75
¥ ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹470
12 ಮೊಟ್ಟೆಗೆ	₹62

ಮೈಸೂರು

100 ಮೊಟ್ಟೆಗೆ	₹472

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1565 (1570)
ಸೂರ್ಯಕಾಂತಿ (ರಿಫೈನ್ಡ್)	₹1850 (1860)
ಪಾಮೋಲಿನ್	₹1530 (1535)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹210-619

ದ್ವಿತಳಿ (ಬಿ.ವಿ) ₹270-820

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹160

ಈರುಳ್ಳಿ ಧಾರಣೆ



ದಪ್ಪ	₹900-1100
ಮಧ್ಯಮ	₹700-900
ಸಣ್ಣ	₹300-600

ಜಿಎಸ್‌ಟಿ: ತೆರಿಗೆ ಹಂತ ಬದಲಾವಣೆ ಸದ್ಯಕ್ಕಿಲ್ಲ

ನವದೆಹಲಿ (ಪಿಟಿಐ): ಹಣದುಬ್ಬರ ಪ್ರಮಾಣವು ಹೆಚ್ಚಿರುವ ಕಾರಣದಿಂದಾಗಿ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ತೆರಿಗೆ ಹಂತಗಳನ್ನು ಕಡಿಮೆ ಮಾಡುವ ಕಾರ್ಯ ತಕ್ಷಣಕ್ಕೆ ಆಗಲಿಕ್ಕಿಲ್ಲ ಎಂದು ಮೂಲಗಳು ತಿಳಿಸಿವೆ.

ಜಿಎಸ್‌ಟಿ ಅಡಿಯಲ್ಲಿ ಈಗ ನಾಲ್ಕು ಹಂತಗಳಲ್ಲಿ ತೆರಿಗೆ ನಿಗದಿ ಮಾಡಲಾಗಿದೆ. ನಾಲ್ಕು ಹಂತಗಳನ್ನು ಕಡಿಮೆ ಮಾಡುವ ಆಲೋಚನೆ ಇತ್ತು.

ಷೇರು ಮಾರುಕಟ್ಟೆ ತಜ್ಞರ ಅನಿಸಿಕೆ • ಏಳು ವರ್ಷಗಳಲ್ಲಿ ಮೊದಲ ಬಾರಿಗೆ ಇಳಿಕೆ

ವಾರ್ಷಿಕ ಕುಸಿತ ದಾಖಲಿಸಲಿದೆ ಷೇರುಪೇಟೆ

ಬೆಂಗಳೂರು (ರಾಯಿಟರ್ಸ್): ಭಾರತದ ಷೇರು ಮಾರುಕಟ್ಟೆಗಳು ಪ್ರಸಕ್ತ ವರ್ಷದಲ್ಲಿ ಕುಸಿತ ದಾಖಲಿಸಲಿವೆ. ಏಳು ವರ್ಷಗಳ ನಂತರದಲ್ಲಿ ಇದೇ ಮೊದಲ ಬಾರಿಗೆ ಅವು ವಾರ್ಷಿಕ ಇಳಿಕೆ ಕಾಣಲಿವೆ ಎಂದು ರಾಯಿಟರ್ಸ್ ಸುದ್ದಿಸಂಸ್ಥೆಯ ಸಮೀಕ್ಷೆ ಹೇಳಿದೆ.

ಬ್ಯಾಂಕ್ ಬಡ್ಡಿ ದರ ಹೆಚ್ಚಾಗುತ್ತಿರುವುದು, ಆರ್ಥಿಕ ಬೆಳವಣಿಗೆಯ ಅಂದಾಜು ತಗ್ಗುತ್ತಿರುವುದು ಮಾರುಕಟ್ಟೆಗಳು ತಕ್ಷಣದಲ್ಲಿ ಚೇತರಿಕೆ ಕಾಣುವ ಸಾಧ್ಯತೆಯನ್ನು ಕಡಿಮೆ ಮಾಡಿವೆ ಎಂದು ಸಮೀಕ್ಷೆಯು ತಿಳಿಸಿದೆ.

ದೇಶದಲ್ಲಿ ಹಾಗೂ ಜಗತ್ತಿನ ಹಲವೆಡೆ ಹಣದುಬ್ಬರ ಪ್ರಮಾಣ ಜಾಸ್ತಿ ಆಗುತ್ತಿದೆ. ಅದಾಗಲೇ ತೊಂದರೆಗೆ ಸಿಲುಕಿದ್ದ ಪೂರೈಕೆ ವ್ಯವಸ್ಥೆಯು ರಷ್ಯಾ–ಉಕ್ರೇನ್ ಯುದ್ಧದ ಕಾರಣದಿಂದಾಗಿ ಮತ್ತಷ್ಟು ಹಾಳಾಗಿದೆ. ಇದರಿಂದಾಗಿ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಜಾಸ್ತಿ ಮಾಡುತ್ತಿವೆ. ಹೀಗಾಗಿ, ರಿಸ್ಕ್ ಜಾಸ್ತಿ ಇರುವ ಹೂಡಿಕೆಗಳಿಂದ ಬಂಡವಾಳವು ಹಿಂದಕ್ಕೆ ಹೋಗುತ್ತಿದೆ.

ದೇಶದ ಪ್ರಮುಖ ಷೇರುಪೇಟೆ ಸೂಚ್ಯಂಕವಾದ ಸೆನ್ಸೆಕ್ಸ್ ಈ ವರ್ಷದಲ್ಲಿ ಶೇಕಡ 7ರಷ್ಟು ಕುಸಿದಿದೆ. ಈ ವರ್ಷದ ಗರಿಷ್ಠ ಮಟ್ಟವಾದ ಜನವರಿ 18ರ 61,475 ಅಂಶಗಳಿಗೆ ಹೋಲಿಸಿದರೆ ಶೇ 12ರಷ್ಟು ಇಳಿಕೆ ಕಂಡಿದೆ. ಜನವರಿಯಲ್ಲಿ ಕಂಡಿದ್ದ ಗರಿಷ್ಠ ಮಟ್ಟಕ್ಕೆ ಸೆನ್ಸೆಕ್ಸ್ ಸದ್ಯದಲ್ಲಿ ಮತ್ತೆ ತಲುಪುವ ನಿರೀಕ್ಷೆ ಇಲ್ಲ.

ವಿಶ್ವದ ಪ್ರಮುಖ ಷೇರುಪೇಟೆಗಳ ಸೂಚ್ಯಂಕಗಳನ್ನೆಲ್ಲ ಆಧರಿಸಿದ ಸೂಚ್ಯಂಕವಾದ ಎಂಎಸ್‌ಸಿಐ ಎಸಿಡಬ್ಲ್ಯುಐ ಸೂಚ್ಯಂಕವು ಈ ವರ್ಷದಲ್ಲಿ ಶೇ 16ಕ್ಕಿಂತ ಹೆಚ್ಚು ಕುಸಿದಿದೆ. ಇದಕ್ಕೆ ಹೋಲಿಸಿದರೆ ಸೆನ್ಸೆಕ್ಸ್‌ನ ಕುಸಿತದ ಪ್ರಮಾಣ ಕಡಿಮೆ ಇದೆ.

ಮುಖ್ಯಾಂಶಗಳು

- 2023ರ ಅಂತ್ಯಕ್ಕೆ ಸೆನ್ಸೆಕ್ಸ್ 60 ಸಾವಿರ ತಲುಪುವ ಅಂದಾಜು
- ಇನ್ನೂ ಮೂರು ತಿಂಗಳು ಅಸ್ಥಿರತೆ ಮುಂದುವರಿಕೆ



ರಾಯಿಟರ್ಸ್ ಸುದ್ದಿಸಂಸ್ಥೆಯು ಸಮೀಕ್ಷೆಯ ಭಾಗವಾಗಿ 30 ಜನ ಷೇರುಪೇಟೆ ತಜ್ಞರ ಅಭಿಪ್ರಾಯ ಸಂಗ್ರಹಿಸಿದೆ. ಮೇ 13ರಿಂದ 24ರ ನಡುವೆ ಅಭಿಪ್ರಾಯ ಸಂಗ್ರಹಿಸಲಾಗಿದೆ. ಈ ವರ್ಷದ ಅಂತ್ಯದ ಹೊತ್ತಿಗೆ ಸೆನ್ಸೆಕ್ಸ್ 56 ಸಾವಿರ ಅಂಶಗಳಿಗೆ ತಲುಪಬಹುದು ಎಂದು ಅವರು ಅಂದಾಜಿಸಿದ್ದಾರೆ. ಈ ರೀತಿ ಆದಲ್ಲಿ, 2015ರ ನಂತರ ಸೆನ್ಸೆಕ್ಸ್ ಇದೇ ಮೊದಲ ಬಾರಿಗೆ ವಾರ್ಷಿಕ ಕುಸಿತ ದಾಖಲಿಸಲಿದೆ.

‘ಸದ್ಯದಲ್ಲಿ ದೇಶದ ಷೇರು ಮಾರುಕಟ್ಟೆಗಳಿಂದ ಅಸ್ಥಿರತೆ ದೂರವಾಗುವ ಯಾವ ಸೂಚನೆಗಳೂ ಇಲ್ಲ’ ಎಂದು ಮಾರುಕಟ್ಟೆ ತಜ್ಞ ರಜತ್ ಅಗರ್ವಾಲ್ ಹೇಳಿದ್ದಾರೆ. 2023ರ ಕೊನೆಯ ವೇಳೆಗೆ ಸೆನ್ಸೆಕ್ಸ್ 60 ಸಾವಿರ ಅಂಶಗಳನ್ನು ತಲುಪಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಆದರೆ, ಸದ್ಯದಲ್ಲಿ ಅಸ್ಥಿರತೆಯು ತೀವ್ರವಾಗಿರಲಿದೆ ಎಂದು ಹೇಳಿದ್ದಾರೆ.

ಮುಂದಿನ ಮೂರು ತಿಂಗಳಲ್ಲಿ ಅಸ್ಥಿರತೆಯು ಹೆಚ್ಚಾಗಲಿದೆ ಎಂದು ಶೇ 70ರಷ್ಟು ತಜ್ಞರು ಅಂದಾಜು ಮಾಡಿದ್ದಾರೆ. ಷೇರುಪೇಟೆಗಳಲ್ಲಿನ ನಕಾರಾತ್ಮಕ ವಹಿವಾಟು ಇನ್ನೂ ಮೂರು ತಿಂಗಳು ಮುಂದುವರಿಯಲಿದೆ ಎಂದು ಶೇ 80ರಷ್ಟು ಮಂದಿ ಅಂದಾಜಿಸಿದ್ದಾರೆ.

ಸುದ್ದಿ 2 ನಿಮಿಷ

ಅಸ್ಥಿರ ವಹಿವಾಟು ಮುಂದುವರಿಕೆ

ಮುಂಬೈ (ಪಿಟಿಐ): ಐ.ಟಿ. ಮತ್ತು ಲೋಹ ವಲಯದ ಷೇರುಗಳಲ್ಲಿ ಮಾರಾಟದ ಒತ್ತಡ ಕಂಡುಬಂದಿದ್ದರಿಂದ ದೇಶದ ಷೇರುಪೇಟೆಗಳು ಆರಂಭದಲ್ಲಿ ಕಂಡುಕೊಂಡಿದ್ದ ಏರಿಕೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸತತ ಮೂರನೇ ದಿನವೂ ನಕಾರಾತ್ಮಕವಾಗಿ ವಹಿವಾಟು ಅಂತ್ಯವಾಯಿತು.

ವಿದೇಶಿ ಬಂಡವಾಳ ಹೊರಹರಿವು ಮತ್ತು ಕಚ್ಚಾ ತೈಲ ದರ ಏರಿಕೆಯು ಷೇರುಪೇಟೆಯಲ್ಲಿ ಒತ್ತಡ ಇನ್ನಷ್ಟು ಹೆಚ್ಚಾಗುವಂತೆ ಮಾಡಿದವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 303 ಅಂಶ ಇಳಿಕೆ ಕಂಡು 53,749 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 99 ಅಂಶ ಇಳಿಕೆಯಾಗಿ 16,026 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಅಮೆರಿಕದ ಫೆಡರಲ್ ರಿಸರ್ವ್‌ನ ಸಭೆಯ ನಿರ್ಧಾರದ ಬಗ್ಗೆ ಜಾಗತಿಕ ಮಾರುಕಟ್ಟೆಗಳು ಗಮನ ಹರಿಸಿವೆ. ಹೀಗಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಮಿಶ್ರ ವಹಿವಾಟು ನಡೆಯಿತು. ಹೂಡಿಕೆದಾರರು ರಕ್ಷಣಾತ್ಮಕವಾಗಿ ವಹಿವಾಟು ನಡೆಸುತ್ತಿದ್ದಾರೆ. ಉತ್ತಮ ಕಂಪನಿಗಳು ಮತ್ತು ವಲಯಗಳಲ್ಲಿ ಮಾತ್ರವೇ ಹೂಡಿಕೆ ಮಾಡುತ್ತಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 2.94ರಷ್ಟು ಮತ್ತು ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.93ರಷ್ಟು ಇಳಿಕೆ ಕಂಡವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.37ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 115.1 ಡಾಲರ್‌ಗಳಿಗೆ ತಲುಪಿತು.



‘ತಾಳೆ ಎಣ್ಣೆ ಆಮದು: 11 ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಕೆ’

ಮುಂಬೈ (ರಾಯಿಟರ್ಸ್): ಅಕ್ಟೋಬರ್ 31ಕ್ಕೆ ಕೊನೆಗೊಳ್ಳಲಿರುವ 2021–22ನೇ ಮಾರುಕಟ್ಟೆ ವರ್ಷದಲ್ಲಿ ಭಾರತವು ಆಮದು ಮಾಡಿಕೊಳ್ಳಲಿರುವ ತಾಳೆ ಎಣ್ಣೆ ಪ್ರಮಾಣವು ಶೇಕಡ 19ರಷ್ಟು ಇಳಿಕೆ ಆಗಲಿದ್ದು, 11 ವರ್ಷಗಳ ಕನಿಷ್ಠ ಮಟ್ಟ ತಲುಪಲಿದೆ ಎಂದು ವಿತರಕರು ಹೇಳಿದ್ದಾರೆ.

ಇಂಡೊನೇಷ್ಯಾವು ತಾಳೆ ಎಣ್ಣೆ ರಫ್ತು ಮೇಲೆ ಹೇರಿದ್ದ ನಿರ್ಬಂಧ ಹಾಗೂ ಭಾರತವು ಸುಂಕ ರಹಿತವಾಗಿ ಕಚ್ಚಾ ಸೋಯಾ ಎಣ್ಣೆ ಮತ್ತು ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಳ್ಳುವ ನಿರ್ಧಾರ ತೆಗೆದುಕೊಂಡಿರುವುದರಿಂದ ತಾಳೆ ಎಣ್ಣೆ ಆಮದು ಕಡಿಮೆ ಆಗಲಿದೆ ಎಂದು ತಿಳಿಸಿದ್ದಾರೆ.

ಹಿಂದುಸ್ಥಾನ್ ಜಿಂಕ್‌ನಲ್ಲಿನ ಷೇರು ಮಾರಾಟಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಹಿಂದುಸ್ಥಾನ್ ಜಿಂಕ್‌ನಲ್ಲಿ ಹೊಂದಿರುವ ಶೇಕಡ 29.5ರಷ್ಟು ಷೇರುಗಳನ್ನು ಮಾರಾಟ ಮಾಡಲು ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

ಷೇರು ಮಾರಾಟ ಪ್ರಸ್ತಾವಕ್ಕೆ ತಾತ್ವಿಕ ಒಪ್ಪಿಗೆ ದೊರೆತಿದೆ ಎಂದು ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ತಿಳಿಸಿದ್ದಾರೆ. ಷೇರು ಮಾರಾಟದಿಂದ ₹ 38 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಹೊಂದಿದೆ. ಐಪಿಒ ಮೂಲಕ ಎಲ್‌ಐಸಿ ಷೇರು ಮಾರಾಟದಿಂದ ₹ 20,500 ಕೋಟಿ ಬಂಡವಾಳ ಸಂಗ್ರಹ ಮಾಡಿದ ಬಳಿಕ ಕೇಂದ್ರ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ.



2023ರ ಮಾರ್ಚ್‌ಗೆ ಕೊನೆಗೊಳ್ಳಲಿರುವ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದ ಮೂಲಕ ₹ 65 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ. ಎಲ್‌ಐಸಿ ಮತ್ತು ಒಎನ್‌ಜಿಸಿಯಲ್ಲಿನ ಷೇರುಗಳ ಮಾರಾಟದ ಮೂಲಕ ಈಗಾಗಲೇ ₹ 23,575 ಕೋಟಿ ಬಂಡವಾಳ ಸಂಗ್ರಹಿಸಿದೆ. ಮಾರುಕಟ್ಟೆ ಸ್ಥಿತಿಯು ಉತ್ತಮವಾಗಿದ್ದರೆ ಹಿಂದುಸ್ಥಾನ್ ಜಿಂಕ್‌ನ ಷೇರು ವಿಕ್ರಯವು ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿಯೇ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಅತಿ ಹೆಚ್ಚು ಜಿಂಕ್ ತಯಾರಿಸುವ ಜಗತ್ತಿನ ಎರಡನೇ ಕಂಪನಿ ಆಗಿರುವ ಹಿಂದುಸ್ಥಾನ್ ಜಿಂಕ್, ವೇದಾಂತ ಲಿಮಿಟೆಡ್‌ನ ಅಂಗಸಂಸ್ಥೆ. ಹಿಂದುಸ್ಥಾನ್ ಜಿಂಕ್‌ನಲ್ಲಿ ವೇದಾಂತ ಲಿಮಿಟೆಡ್ ಶೇ 65ರಷ್ಟು ಷೇರುಪಾಲು ಹೊಂದಿದೆ.

ಕೆಐಒಸಿಎಲ್‌ಗೆ ₹411 ಕೋಟಿ ಲಾಭ

ಮಂಗಳೂರು: ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿಯು (ಕೆಐಒಸಿಎಲ್) ಮಾರ್ಚ್ 31ಕ್ಕೆ ಕೊನೆಗೊಂಡ 2021-22ನೆ ಹಣಕಾಸು ವರ್ಷದಲ್ಲಿ ಒಟ್ಟು ₹411.04 ಕೋಟಿ ಲಾಭ ಗಳಿಸಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ, ಶೇ 0.20ರಷ್ಟು ಪ್ರಗತಿಯಾಗಿದೆ.

2020–21ರಲ್ಲಿ ₹ 2,376.44 ಕೋಟಿ ಆದಾಯ ಗಳಿಸಿದ್ದ ಕಂಪನಿ, 2021–22ರಲ್ಲಿ ₹ 3,006.45 ಕೋಟಿ ಆದಾಯ ಗಳಿಸಿದೆ. ಇದು ಶೇ 26.51ರಷ್ಟು ಹೆಚ್ಚಳವಾಗಿದೆ. ತೆರಿಗೆ ಮುಂಚಿನ ಲಾಭ ₹411.03 ಕೋಟಿ ಆಗಿದ್ದು, ತೆರಿಗೆ ನಂತರದ ಲಾಭ ₹313.41 ಕೋಟಿ ಆಗಿದೆ. 2020–21 ರಲ್ಲಿ ತೆರಿಗೆ ನಂತರದ ಲಾಭ ₹301.17 ಕೋಟಿಯಾಗಿತ್ತು.

‘ಕೆಐಒಸಿಎಲ್ ಈ ವರ್ಷ 20.30 ಲಕ್ಷ ಟನ್ ಕಬ್ಬಿಣದ ಉಂಡೆ ತಯಾರಿಸಿದ್ದು, 20.72 ಲಕ್ಷ ಟನ್ ಮಾರಾಟ ಮಾಡಲಾಗಿದೆ’ ಎಂದು ಕಂಪನಿಯ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಸಾಮಿನಾಥನ್ ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಡಿ. ಸಾವಿತ್ರಮ್ಮನವರು
ನಲ್ಮೆಯ ಸಾವಿತ್ರಿ / ಸುಶೀ / ಅಮ್ಮ...
ಕಳೆದ "ಅನು ದಿನವೂ, ಅನು ಕ್ಷಣವೂ ನಿಮ್ಮ ನೆನಪಿಗೆ ಅರ್ಪಣೆ"..
"ಮಿಡಿದ ಪ್ರತಿ ಕಂಬನಿಯೂ ನಿಮ್ಮ ಪ್ರೀತಿ–ವಾತ್ಸಲ್ಯಕ್ಕೆ ಸಮರ್ಪಣೆ"...
ದಿನಾಂಕ 26–05–2022ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಚಿತ್ರದುರ್ಗ ನಗರ KSRTC Depot ರಸ್ತೆಯಲ್ಲಿರುವ ಸ್ವಗೃಹವಾದ ಕುಮಾರಕೃಪದಲ್ಲಿ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಹೃದಯ ಹಿತೈಷಿಗಳು ಮತ್ತು ಬಂಧುಗಳು ಆಗಮಿಸಿ ನಮ್ಮೊಂದಿಗೆ ಪೂಜೆಯಲ್ಲಿ ಭಾಗವಹಿಸಲು ವಿನಂತಿಸಿದೆ.
ದುಃಖತಪ್ತರು : ಪತಿ ರಾಮಸ್ವಾಮಿ, ಸಹನಾ–ಸೌರಭ ಮತ್ತು ಮೊಮ್ಮಕ್ಕಳು ಹಾಗೂ ಬಂಧು ಬಳಗದವರು
ದೂರವಾಣಿ : 8197065448, 8904561456

17ನೇ ವರ್ಷದ ಚಿರಸ್ಮರಣೆ



ಶ್ರೀ ಟಿ. ಅಣ್ಣಯ್ಯಪ್ಪ
ಮಾ॥ ತಾ॥ ಪಂ॥ ಸದಸ್ಯರು, ಮಾರಗೊಂಡನಹಳ್ಳಿ
ನೀವು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯುತ್ತಿದ್ದೇವೆ. ಸದಾ ನಿಮ್ಮ ಆಶೀರ್ವಾದ ನಮಗಿರಲಿ.
ಶ್ರೀಮತಿ ದೊಡ್ಡ ಅಮ್ಮಯ್ಯಮ್ಮ ಮತ್ತು ಮಕ್ಕಳು
ಎ. ಶ್ರೀನಿವಾಸಮೂರ್ತಿ– 9880427590

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

‘2024ರಲ್ಲಿ ಹಳಿಗೆ ಮರಳಲಿದೆ ಅರ್ಥ ವ್ಯವಸ್ಥೆ’

ದಾವೋಸ್ (ಪಿಟಿಐ): ಅಭಿವೃದ್ಧಿ ಹೊಂದಿದ ಆರ್ಥಿಕತೆಗಳು 2024ರ ವೇಳೆಗೆ ಹಳಿಗೆ ಮರಳಲಿವೆ. ಆದರೆ, ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಬೆಳವಣಿಗೆಯು ಕೋವಿಡ್‌ಗೂ ಮುಂಚಿನ ಮಟ್ಟಕ್ಕಿಂತ ಶೇಕಡ 5ರಷ್ಟು ಕಡಿಮೆ ಇರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಒಂದನೇ ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಹೇಳಿದ್ದಾರೆ.

ಕೋವಿಡ್‌ನಿಂದಾಗಿ ಜಾಗತಿಕ ಆರ್ಥಿಕತೆಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದ್ದು, ಈಗ ನಿಧಾನವಾಗಿ ಚೇತರಿಕೆ ಹಾದಿಗೆ ಮರಳುತ್ತಿವೆ. ಉಕ್ರೇನ್ ಬಿಕ್ಕಟ್ಟು ಜಾಗತಿಕ ಆರ್ಥಿಕ ಚೇತರಿಕೆಗೆ ಅತಿದೊಡ್ಡ ಹಿನ್ನಡೆ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೆಎಂಎಫ್: ಹಾಲು ಸಂಗ್ರಹ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲು ಉತ್ಪಾದನೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕೆಎಂಎಫ್ (ಕರ್ನಾಟಕ ಹಾಲು ಮಹಾಮಂಡಳ) ದಿನವೊಂದಕ್ಕೆ ಸಂಗ್ರಹಿಸುವ ಒಟ್ಟು ಹಾಲಿನ ಪ್ರಮಾಣ 91.07 ಲಕ್ಷ ಕೆ.ಜಿ.ಗೆ ಏರಿಕೆಯಾಗಿದೆ.

ಮೇ 24ರಂದು ಗರಿಷ್ಠ ಹಾಲು ಶೇಖರಣೆಯಾಗುವ ಮೂಲಕ ಕೆಎಂಎಫ್ ಇತಿಹಾಸದಲ್ಲೇ ದಾಖಲೆ ನಿರ್ಮಾಣವಾಗಿದೆ.

2020ರ ಜುಲೈ 14ರಂದು 88.30 ಲಕ್ಷ ಕೆ.ಜಿ ಹಾಲು ಸಂಗ್ರಹಿಸುವ ಮೂಲಕ ಮೊದಲ ಬಾರಿಗೆ ದಾಖಲೆ ನಿರ್ಮಾಣವಾಗಿತ್ತು. 2021ರ ಜೂನ್ 11ರಂದು 90.62 ಲಕ್ಷ ಕೆ.ಜಿ ಹಾಲು ಶೇಖರಿಸುವ ಮೂಲಕ ಮತ್ತೊಂದು ದಾಖಲೆಯನ್ನು ಕೆಎಂಎಫ್ ನಿರ್ಮಿಸಿತ್ತು.

ಸಾಂಕ್ರಾಮಿಕ ಕಾಯಿಲೆ ತಡೆಗಟ್ಟಲು ಜಾನುವಾರುಗಳಿಗೆ ಲಸಿಕೆ, ಸಮತೋಲಿತ ಪಶು ಆಹಾರ ವಿತರಣೆ, ಕೊಟ್ಟಿಗೆಯ ನೆಲಹಾಸು ಬಳಕೆಗೆ ರಬ್ಬರ್ ಮ್ಯಾಟ್, ಮೇವು ಕಟಾವು ಯಂತ್ರಗಳ ವಿತರಣೆ, ಶುದ್ಧ ಹಾಲು ಉತ್ಪಾದನೆ ಮತ್ತು ಹೈನುರಾಸು ನಿರ್ವಹಣೆಗಾಗಿ ತರಬೇತಿ ನೀಡುತ್ತಿರುವುದರಿಂದ ಹಾಲು ಶೇಖರಣೆ ಹೆಚ್ಚಾಗುತ್ತಿದೆ ಎಂದು ಕೆಎಂಎಫ್ ತಿಳಿಸಿದೆ.

‘ದಿನಕ್ಕೆ ಸರಾಸರಿ 1 ಕೋಟಿ ಕೆ.ಜಿ.ಯಷ್ಟು ಹಾಲು ಶೇಖರಣೆ ಮಾಡುವ ಮಟ್ಟಕ್ಕೆ ಉತ್ಪಾದನಾ ವೇಗ ಹೆಚ್ಚಿಸುವ ಗುರಿ ಹೊಂದಲಾಗಿದೆ’ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	25509-30509
ಕೋಕ	18019-28889
ಫ್ಯಾಕ್ಟರಿ	10160-19529
ಹಳೆಚಾಲಿ	43629-48969
ಹೊಸಚಾಲಿ	35109-38599
ಪುತ್ತೂರು	
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	25099-32399
ಚಾಲಿ	35889-38699
ಕೋಕ	22889-31382
ಕೆಂಪುಗೋಟು	26099-31599
ರಾಶಿ	43889-48999
ತಟ್ಟಿಬೆಟ್ಟೆ	37099-42299
ಶಿರಸಿ	
ಬೆಟ್ಟೆ	37699-46099
ಬಿಳಿಗೋಟು	25009-32699
ಚಾಲಿ	35141-39308
ರಾಶಿ	44449-49299
ಶಿವಮೊಗ್ಗ	
ಬೆಟ್ಟೆ	50100-53409
ಗೊರಬಲು	18000-37699
ರಾಶಿ	42699-49599
ಸರಕು	60200-80496

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15900	16000	215.75 ಸೆಂಟ್ಸ್
ಎಸಿ	8900	8500	8675	
ಆರ್‌ಪಿ	9500	9900	10000	ಲಂಡನ್
ಆರ್‌ಸಿ	4700	4300	4475	2041ಡಾಲರ್ಸ್

ಬಿಇಎಲ್ ವಹಿವಾಟು ಶೇ 9ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) 2021–22ನೇ ಹಣಕಾಸು ವರ್ಷದಲ್ಲಿ ₹ 15,044 ಕೋಟಿ ಮೊತ್ತದ ವಹಿವಾಟು ನಡೆಸಿದೆ.

2020–21ನೇ ಹಣಕಾಸು ವರ್ಷದಲ್ಲಿ ₹ 13,818 ಕೋಟಿ ಮೊತ್ತದ ವಹಿವಾಟು ನಡೆಸಿತ್ತು. ಇದಕ್ಕೆ ಹೋಲಿಸಿದರೆ 2021–22ರಲ್ಲಿ ವಹಿವಾಟು ಶೇ 9ರಷ್ಟು ಬೆಳವಣಿಗೆ ಕಂಡಿದೆ.

ಕಂಪನಿಯು ವಹಿವಾಟಿನಲ್ಲಿ ಶೇ 15ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆಯಲ್ಲಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕ, ಚಿಪ್ ಕೊರತೆ ಹಾಗೂ ಜಾಗತಿಕ ಬಿಕ್ಕಟ್ಟಿನಿಂದಾಗಿ ನಿರೀಕ್ಷಿತ ಪ್ರಮಾಣದ ಬೆಳವಣಿಗೆ ಸಾಧ್ಯವಾಗಲಿಲ್ಲ ಎಂದು ಕಂಪನಿಯ ಅಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ (ಸಿಎಂಡಿ) ಆನಂದಿ ರಾಮಲಿಂಗಮ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತೆರಿಗೆ ನಂತರದ ಲಾಭವು ₹ 2,065 ಕೋಟಿಯಿಂದ ₹ 2,349 ಕೋಟಿಗೆ ಏರಿಕೆ ಆಗಿದೆ. ಮಾರುಕಟ್ಟೆ ಬಂಡವಾಳವು ₹ 60 ಸಾವಿರ ಕೋಟಿಗೆ ತಲುಪಿದೆ ಎಂದು ಮಾಹಿತಿ ನೀಡಿದರು.

ಮುಂಬೈ ಧಾರಣೆ

ಶೇಂಗಾ

25-5-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10850-10900
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1595 (1595)
ಪಾಮ್ ವಾರದ ಡೆಲಿವರಿ	1528 (1533)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,900 (51,200)

ಬೆಳ್ಳಿ ಕೆ.ಜಿ 61,500 (61,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಸಂಘ, ಬೆಂಗಳೂರು ನಗರ ಜಿಲ್ಲೆ.
ಹಳೇ ಟಿ.ಬಿ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು–38.
ಸಂಖ್ಯೆ: ಡಿಹೆಚ್‌ಎಸ್/ಬೆಂ.ನ.ಜಿ./ಎನ್‌ಹೆಚ್‌ಎಂ/ಗುಸಿ/02/2022–23 ದಿನಾಂಕ: 25.05.2022
ನೇಮಕಾತಿ ಪ್ರಕಟಣೆ (Rolling advertisement)
ಬೆಂಗಳೂರು ನಗರ ಜಿಲ್ಲೆಯಲ್ಲಿ 2022–23ನೇ ಸಾಲಿಗೆ ಎನ್‌ಹೆಚ್‌ಎಂ ಯೋಜನೆಯ ವಿವಿಧ ಕಾರ್ಯಕ್ರಮದಡಿಯಲ್ಲಿ ಖಾಲಿ ಇರುವ ವೈದ್ಯಕೀಯ ಮತ್ತು ಅರೆವೈದ್ಯಕೀಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಎನ್.ಹೆಚ್.ಎಂ. ಮಾರ್ಗಸೂಚಿಗಳಂತೆ ನಿಯಮಾನುಸಾರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಗಳ ವಿವರ	ವಿದ್ಯಾರ್ಹತೆ	ಮಾಸಿಕ ಸಂಚಿತ ವೇತನ	ಒಟ್ಟು ಹುದ್ದೆಗಳ ಸಂಖ್ಯೆ	ಅಭ್ಯರ್ಥಿ ವಯೋಮಿತಿ
1	ವೈದ್ಯಾಧಿಕಾರಿಗಳು	ಎಂ.ಬಿ.ಬಿಎಸ್ ಉತ್ತೀರ್ಣರಾಗಿ ಕಡ್ಡಾಯವಾಗಿ Internship ಪೂರೈಸಿ ಕೆ.ಎಂ.ಸಿ ನೋಂದಣಿ ಹೊಂದಿರಬೇಕು.	50,000/–	23	60 ವರ್ಷ ಒಳಗಿರತಕ್ಕದ್ದು
2	ಎನ್.ಪಿ.ಸಿ.ಡಿ.ಸಿ.ಎಸ್ ವೈದ್ಯಾಧಿಕಾರಿಗಳು	ಎಂ.ಬಿ.ಬಿಎಸ್ ಉತ್ತೀರ್ಣರಾಗಿ ಕಡ್ಡಾಯವಾಗಿ Internship ಪೂರೈಸಿ ಕೆ.ಎಂ.ಸಿ ನೋಂದಣಿ ಹೊಂದಿರಬೇಕು.	46,200/–	2	60 ವರ್ಷ ಒಳಗಿರತಕ್ಕದ್ದು
3	ಶುಶ್ರೂಷಣಾಧಿಕಾರಿಗಳು	ಮಾನ್ಯತೆ ಪಡೆದ ನರ್ಸಿಂಗ್ ಶಾಲೆಯಲ್ಲಿ ಬಿಎಸ್‌ಸಿ / ಜಿಎನ್‌ಎಂ ತರಬೇತಿ ಹಾಗೂ ಕೆಎನ್‌ಸಿ ನೋಂದಣಿ ಹೊಂದಿ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.	13,225/- + 13% EPF	177	40 ವರ್ಷ ಒಳಗಿರತಕ್ಕದ್ದು
4	ಫಾರ್ಮಸಿ ಅಧಿಕಾರಿಗಳು	ಡಿ ಫಾರ್ಮ / ಬಿ ಫಾರ್ಮ ಪದವಿಯೊಂದಿಗೆ ಕರ್ನಾಟಕ ಫಾರ್ಮಸಿ ಕೌನ್ಸಿಲ್‌ನಲ್ಲಿ ನೋಂದಣಿ ಹೊಂದಿ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.	13,800/- + 13% EPF	1	40 ವರ್ಷ ಒಳಗಿರತಕ್ಕದ್ದು
5	ಪ್ರಯೋಗಶಾಲಾ ತಜ್ಞರು	DMLT ಪದವಿಯೊಂದಿಗೆ ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯಲ್ಲಿ ನೋಂದಣಿಯನ್ನು ಹೊಂದಿ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.	16,100/–	3	40 ವರ್ಷ ಒಳಗಿರತಕ್ಕದ್ದು

- ಈ ಪ್ರಕಟಣೆಯು Rolling Advertisement ಆಗಿರುವುದರಿಂದ ಅವಧಿಯು 31.03.2023ರ ವರೆಗೆ ಇರುತ್ತದೆ. ಈ ಮೇಲ್ಕಂಡ ಹುದ್ದೆಗಳಿಗೆ ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆ ಒಳಗಾಗಿ ನಿಗದಿತ ಅರ್ಜಿ ನಮೂನೆಯನ್ನು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳ ಕಚೇರಿಯಲ್ಲಿ ಪಡೆದು ನೋಂದಣಿ ಮಾಡಿಕೊಂಡು, ನೋಂದಣಿಯಾದ ಅರ್ಹ ಅಭ್ಯರ್ಥಿಗಳನ್ನು ಮಾತ್ರ ದಾಖಲಾತಿ ಪರಿಶೀಲನೆಗೆ ಪರಿಗಣಿಸಲಾಗುವುದು.
- ಈ ಪ್ರಕಟಣೆಯು ರೋಲಿಂಗ್ ಪ್ರಕಟಣೆ ಆಗಿರುವುದರಿಂದ ಎನ್‌ಹೆಚ್‌ಎಂ ಅಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ಹುದ್ದೆಗಳ ಆಧಾರದ ಮೇಲೆ ಹಾಜರಾದ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದು.
- ಈ ಮೇಲಿನ ಹುದ್ದೆಗಳಿಗೆ ನಿಯಮಾನುಸಾರ ಕಂಪ್ಯೂಟರ್‌ನ ಸಾಕ್ಷರತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು. (ವೈದ್ಯಾಧಿಕಾರಿಗಳನ್ನು ಹೊರತುಪಡಿಸಿ).
- ಆಸಕ್ತಿಯುಳ್ಳ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ತಮ್ಮ ಮೂಲ ದಾಖಲೆಗಳೊಂದಿಗೆ 1 ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣ, ಹಳೇ ಟಿ.ಬಿ ಆಸ್ಪತ್ರೆ ಹಳೇ ಮದ್ರಾಸ್ ರಸ್ತೆ ಸ್ವಾಮಿ ವಿವೇಕಾನಂದ ಮೆಟ್ರೋ ನಿಲಾಣ, ಇಂದಿರಾನಗರ, ಬೆಂಗಳೂರು–38 ಇಲ್ಲಿಗೆ ಹಾಜರಾಗುವುದು.
- ಈ ಆಯ್ಕೆಯು / ನೇಮಕಾತಿ ಎನ್‌ಹೆಚ್‌ಎಂ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ. ರೋಸ್ಟರ್ ಕಮ್ ಮೆರಿಟ್ ಮಾರ್ಗಸೂಚಿಗಳನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಆರೋಗ್ಯ ಮತ್ತು ಕು ಕ ಸಂಘ, ಬೆಂಗಳೂರು ನಗರ ಜಿಲ್ಲೆ
DIPR/CP/BCPL/657/2022-23
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17,800 - 68,000/-, 9538811104, 9538811223
ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC,Degree ಸಂಬಳ 15000 to 28000 ಸಂಪರ್ಕಿಸಿರಿ 9980814578, 9980812378
ತುಮಕೂರು, ಕುಣಿಗಲ್ ನಲ್ಲಿರುವ ಡೈರಿ ಫಾರಂಗೆ ಕೆಲಸ ಮಾಡಲು ಕೆಲಸಗಾರರು (ಕುಟುಂಬ) ಬೇಕಾಗಿದ್ದಾರೆ ವಸತಿ ಸೌಲಭ್ಯವಿದೆ. ಸಂಪರ್ಕಿಸಿ: 9591512191.
Multiple Vacancy
ಬೇಕಾಗಿದ್ದಾರೆಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೆಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ10,000ದಿಂದ 12,000 ಟ್ರೈನಿಂಗ್ ಮುಗಿದ ನಂತರ25,000 ದಿಂದ 50,000ದ ವರೆಗೆ ನೀಡಲಾಗುವುದು.ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982
Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503
Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868
ಶಿಕ್ಷಣ
Correspondence Courses
ನೇರ ಪರೀಕ್ಷೆಗಳು DIRECT EXAMS ಮನೆಯಲ್ಲಿ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC,SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಮಾನಸ ಎಜುಕೇಷನ್ ಟ್ರಸ್ಟ್(ರಿ) ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 9740258276
ಭವಿಷ್ಯ
Astrology
ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.
ವೈಯಕ್ತಿಕ
Change of Name
ಶ್ರೀಮತಿ ಪ್ರಭಾವತಿ, W/o.ಲೇಟ್ ರಘುನಾಥ ಶಾಮ್‌ಜಿ ಜನ್ನಾರಿ, 86ವಯಸ್ಸು, ವಿಳಾಸ: ನಂ.6, 5ನೇ ಮುಖ್ಯರಸ್ತೆ, ಸಿ.ಪಿ.ವಿ. ಬ್ಲಾಕ್, ಗಂಗಾನಗರ ಬಡಾವಣೆ, ಬೆಂಗಳೂರು-560032, ಆದ ನಾನು ನನ್ನ ಹೆಸರನ್ನು ಪ್ರಭಾ ಆರ್. ಜನ್ನಾರಿ ಇಂದ ಪ್ರಭಾವತಿ ಎಂಬುದಾಗಿ ಬದಲಾಯಿಸಿದ್ದು, ನೋಟರಿ ಎಸ್.ಐ.ಬಾಲಗುರು, ಬೆಂಗಳೂರು, ಇವರ ಸಮ್ಮುಖದಲ್ಲಿ ದಿನಾಂಕ 05,02,2022 ರಂದು ಪ್ರಮಾಣಿಕರಿಸಿರುತ್ತೇನೆ.
ಪ್ರವಾಸ
Travel
22.06.2022 11ದಿನಗಳು ವಿಮಾನ, AC ಬಸ್, ಊಟ, ರೂಂವಸತಿಯೊಂದಿಗೆ ರಾಜಸ್ಥಾನ, ಮೌಂಟ್‌ಅಬು,ಜೈಸಲ್‌ಮೇರ್, ಜೈಪುರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 6363416487/ 9902433500
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in



ರಜತ್ ಪಾಟೀದಾರ್ ಶತಕದ ದರ್ಬಾರ್: ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ನಿರಾಸೆ

ಆರ್‌ಸಿಬಿ ಫೈನಲ್ ಕನಸು ಜೀವಂತ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಬುಧವಾರ ರಾತ್ರಿ ಮಳೆ ನಿಂತು ಹೋದ ಮೇಲೆ ಯುವ ಆಟಗಾರ ರಜತ್ ಪಾಟೀದಾರ್ ಸಿಡಿಲಬ್ಬರದ ಶತಕ ಸಿಡಿಸಿದರು. ನಂತರ ಜೋಶ್ ಹ್ಯಾಜಲ್‌ವುಡ್ ಅವರ ಪ್ರಭಾವಿ ದಾಳಿ ವಿಜೃಂಭಿಸಿತು. ಇವರಿಬ್ಬರ ಅಬ್ಬರದ ಆಟದಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಫೈನಲ್‌ನತ್ತ ಹೆಜ್ಜೆ ಹಾಕಿತು.

ಎಲಿಮಿನೇಟರ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು 14 ರನ್‌ಗಳಿಂದ ಮಣಿಸಿದ ಬೆಂಗಳೂರು ತಂಡ ಶುಕ್ರವಾರ ನಡೆಯಲಿರುವ ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಸೆಣಸಲಿದೆ. ಮೊದಲ ಕ್ವಾಲಿಫೈಯ-ರ್‌ನಲ್ಲಿ ರಾಜಸ್ಥಾನ ತಂಡ ಗುಜರಾತ್ ಟೈಟನ್ಸ್‌ಗೆ ಮಣಿಸಿತ್ತು. ಟೈಟನ್ಸ್ ಫೈನಲ್ ಪ್ರವೇಶಿಸಿದೆ.

ಮೂರನೇ ಕ್ರಮಾಂಕದ ರಜತ್ ಪಾಟೀದಾರ್ (112; 54 ಎಸೆತ, 12 ಬೌಂಡರಿ, 7 ಸಿಕ್ಸರ್) ಅವರ ಅಮೋಘ ಆಟದ ಬಲದಿಂದ ರಾಯಲ್ ಚಾಲೆಂಜರ್ಸ್ 4 ವಿಕೆಟ್‌ಗೆ 207 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ಲಖನೌ ಕೊನೆಯ ವರೆಗೂ ಹೋರಾಡಿತು. ಆದರೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 193 ರನ್ ಗಳಿಸಲಷ್ಟೇ ತಂಡಕ್ಕೆ ಸಾಧ್ಯವಾಯಿತು.

ಕ್ವಿಂಟನ್ ಡಿಕಾಕ್ ಮತ್ತು ಮನನ್ ವೊಹ್ರಾ ವಿಕೆಟ್‌ಗಳನ್ನು ಬೇಗನೇ ಕಳೆದುಕೊಂಡ ತಂಡದ ಇನಿಂಗ್ಸ್‌ಗೆ ನಾಯಕ ಕೆ.ಎಲ್.ರಾಹುಲ್ ಮತ್ತು ನಾಲ್ಕನೇ ಕ್ರಮಾಂಕದ ದೀಪಕ್ ಹೂಡಾ ಬಲ ತುಂಬಿದರು. 15ನೇ ಓವರ್‌ನಲ್ಲಿ ದೀಪಕ್ ಹೂಡಾ ವಿಕೆಟ್ ಗಳಿಸಿದ ವನಿಂದು ಹಸರಂಗ ಪಂದ್ಯಕ್ಕೆ ತಿರುವು ನೀಡಿದರು. ಕೆ.ಎಲ್.ರಾಹುಲ್ ಕ್ರೀ-ಸ್‌ನಲ್ಲಿದ್ದರೂ ಮತ್ತೊಂದು ತುದಿಯಲ್ಲಿ ವಿಕೆಟ್‌ಗಳು ಉರುಳಿದವು. ಆದರೂ ತಂಡದಲ್ಲಿ ಗೆಲುವಿನ ಆಸೆ ಉಳಿದಿತ್ತು.

19ನೇ ಓವರ್‌ನ ಸತತ ಎರಡು ಎಸೆತಗಳಲ್ಲಿ ರಾಹುಲ್ ಮತ್ತು ಕೃಣಾಲ್ ಪಾಂಡ್ಯ ವಿಕೆಟ್ ಉರುಳಿಸಿ ಹೇಜಲ್‌ವುಡ್, ಬೆಂಗಳೂರು ತಂಡದ ಜಯ ಖಾತರಿಪಡಿಸಿದರು. ಕೊನೆಯ ಓವರ್‌ನಲ್ಲಿ ಲಖನೌ ಗೆಲುವಿಗೆ 24 ರನ್ ಗಳಿಸುವ ಒತ್ತಡವಿತ್ತು. ಹರ್ಷಲ್ ಪಟೇಲ್ ಹಾಕಿದ ಈ ಓವರ್‌ನಲ್ಲಿ ದುಷ್ಮಂತ ಚಮೀರ ಒಂದು ಸಿಕ್ಸರ್ ಸಿಡಿಸಿ ಮಿಂಚಿದರು.

ರಜತ್–ದಿನೇಶ್ ಬ್ಯಾಟಿಂಗ್ ವೈಭವ

ಮುಸ್ಸಂಜೆ ಮಳೆ ಸುರಿದಿದ್ದರಿಂದ ಅರ್ಧಗಂಟೆ ವಿಳಂಬವಾಗಿ ಪಂದ್ಯ ಆರಂಭವಾಯಿತು. ಟಾಸ್ ಗೆದ್ದ ಲಖನೌ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಕಳೆದ ಆವೃತ್ತಿಯಲ್ಲಿ ಪದಾರ್ಪಣೆ ಮಾಡಿದ್ದ ಮಧ್ಯಪ್ರದೇಶದ ರಜತ್ ನಿರ್ಣಾಯಕ ಪಂದ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ ತಂಡ ಉತ್ತಮ ಮೊತ್ತ ಗಳಿಸಲು ಕಾರಣರಾದರು.

ಮೊದಲ ಓವರ್‌ನಲ್ಲಿಯೇ ಆರಂಭಿಕ ಆಟಗಾರ, ನಾಯಕ ಫಫ್ ಡುಪ್ಲೆಸಿ ವಿಕೆಟ್ ಗಳಿಸಿದ ಮೊಹಸೀನ್ ಖಾನ್ ಸಂಭ್ರಮಿಸಿದರು. ಕ್ರೀಸ್‌ನ-ಲ್ಲಿದ್ದ ವಿರಾಟ್ ಕೊಹ್ಲಿಯೊಂದಿಗೆ ಸೇರಿಕೊಂಡ ರಜತ್ ಆರಂಭದಿಂದಲೇ ಬೀಸಾಟವಾಡಿದರು. ಕೊಹ್ಲಿಗಿಂತಲೂ ಅವರ ಆಟದ ವೇಗ ಹೆಚ್ಚಿತ್ತು. ಎರಡನೇ ವಿಕೆಟ್ ಜೊತೆಯಾಟದಲ್ಲಿ 66 ರನ್ ಸೇರಿಸಿದರು.ಆವೇಶ್ ಖಾನ್ ಹಾಕಿದ ಒಂಬತ್ತನೇ ಓವರ್‌ನಲ್ಲಿ ವಿರಾಟ್ ವಿಕೆಟ್ ಗಳಿಸಿ ಜೊತೆಯಾಟವನ್ನು ಮುರಿದರು. ಸ್ಪಿನ್ನರ್ ಕೃಣಾಲ್ ಪಾಂಡ್ಯ ಎಸೆತದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ (9) ಔಟಾದರು. ಆದರೆ, ರಜತ್ ಆಟಕ್ಕೆ ಮಾತ್ರ ತಡೆಯಿರಲಿಲ್ಲ. 28 ಎಸೆತಗಳಲ್ಲಿ ಅರ್ಧಶತಕ ಗಡಿ ಮುಟ್ಟಿದರು.

13, 16 ಮತ್ತು 18ನೇ ಓವರ್‌ಗಳಲ್ಲಿ ಔಟಾಗುವ ಅಪಾಯವನ್ನು ತಪ್ಪಿಸಿಕೊಂಡ ರಜತ್ ಶತಕ ಪೂರೈಸುವಲ್ಲಿ ಯಶಸ್ವಿಯಾದರು. ತಾವೆದುರಿಸಿದ 50ನೇ ಎಸೆತದಲ್ಲಿ ಸಿಕ್ಸರ್ ಬಾರಿಸಿ ಶತಕದ ಗಡಿ ದಾಟಿದರು. ಈ ಬಾರಿಯ ಟೂರ್ನಿಯಲ್ಲಿ ರಜತ್ ಆಡಿದ 9ನೇ ಪಂದ್ಯ ಇದಾಗಿದೆ. ಬರುವ ಜೂನ್ 1ರಂದು 29 ವಸಂತಗಳನ್ನು ಪೂರೈಸಲಿರುವ ರಜತ್ ಸುಂದರ ಕವರ್‌ಡ್ರೈವ್, ಸ್ಟ್ರೇಟ್ ಹಿಟ್‌ಗಳನ್ನು ಪ್ರಯೋಗಿಸಿದರು. ಇದರಿಂದಾಗಿ ಲಖನೌ ತಂಡದ ಬೌಲರ್‌ಗಳ ಪ್ರಯತ್ನಗಳು ವಿಫಲವಾದವು.


ರಜತ್ ಪಾಟೀದಾರ್ ಶತಕ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 4ಕ್ಕೆ 207 (20 ಓವರ್))
ವಿರಾಟ್ ಸಿ ಮೊಹಸಿನ್ ಬಿ ಆವೇಶ್ 25 (24 ಎ, 4x2), ಡುಪ್ಲೆಸಿ ಸಿ ಡಿಕಾಕ್ ಬಿ ಮೊಹಸಿನ್ 0 (1 ಎ), ರಜತ್ ಔಟಾಗದೆ 112 (54 ಎ, 4x12, 6x7), ಮ್ಯಾಕ್ಸ್‌ವೆಲ್ ಸಿ ಲೂಯಿಸ್ ಬಿ ಕೃಣಾಲ್ 9 (10 ಎ, 6x1), ಮಹಿಪಾಲ್ ಸಿ ರಾಹುಲ್ ಬಿ ಬಿಷ್ಣೋಯಿ 14 (9 ಎ, 4x2), ದಿನೇಶ್ ಔಟಾಗದೆ 37 (23 ಎ, 4x5, 6x1)
ಇತರೆ: (ನೋಬಾಲ್ 1, ವೈಡ್ 9) 10
ವಿಕೆಟ್ ಪತನ: 1-4 (ಫಫ್ ಡುಪ್ಲೆಸಿ, 0.5), 2-70 (ವಿರಾಟ್ ಕೊಹ್ಲಿ, 8.3), 3-86 (ಗ್ಲೆನ್ ಮ್ಯಾಕ್ಸ್‌ವೆಲ್, 10.3), 4-115 (ಮಹಿಪಾಲ್ ಲುಮ್ರೊರ್, 13.1)
ಬೌಲಿಂಗ್: ಮೊಹಸಿನ್ ಖಾನ್ 4-0-25-1, ದುಷ್ಮಂತ ಚಮೀರ 4-0-54-0, ಕೃಣಾಲ್ ಪಾಂಡ್ಯ 4-0-39-1, ಆವೇಶ್ ಖಾನ್ 4-0-44-1, ರವಿ ಬಿಷ್ಣೋಯಿ 4-0-45-1

ಲಖನೌ ಸೂಪರ್ ಜೈಂಟ್ಸ್ 6ಕ್ಕೆ 193 (20 ಓವರ್)
ಕ್ವಿಂಟನ್ ಸಿ ಡುಪ್ಲೆಸಿ ಬಿ ಸಿರಾಜ್ 6 (5ಎ, 6X1), ರಾಹುಲ್ ಸಿ ಶಹಬಾಜ್ ಬಿ ಹ್ಯಾಜಲ್‌ವುಡ್ 79 (58ಎ, 4X3, 6X5), ಮನನ್ ಸಿ ಶಹಬಾಜ್ ಬಿ ಹ್ಯಾಜಲ್‌ವುಡ್ 19 (11ಎ, 4X1, 6X2), ದೀಪಕ್ ಬಿ ಹಸರಂಗ 45 (26ಎ, 4X1, 6X4), ಸ್ಟೋಯಿನಿಸ್ ಸಿ ರಜತ್ ಬಿ ಹರ್ಷಲ್ 9 (9ಎ, 6X1), ಲೂಯಿಸ್ ಔಟಾಗದೆ 2 (6ಎ), ಕೃಣಾಲ್ ಸಿ ಮತ್ತು ಬಿ ಹ್ಯಾಜಲ್‌ವುಡ್ 0 (1ಎ), ಚಮೀರ ಔಟಾಗದೆ 11 (4ಎ, 4X1, 6X1)
ಇತರೆ: (ಬೈ 5, ಲೆಗ್‌ಬೈ 2, ವೈಡ್ 15) 22
ವಿಕೆಟ್ ಪತನ: 1-8 (ಕ್ವಿಂಟನ್ ಡಿಕಾಕ್, 0.6), 2-41 (ಮನನ್ ವೊಹ್ರಾ, 4.3), 3-137 (ದೀಪಕ್ ಹೂಡಾ, 14.4), 4-173 (ಮಾರ್ಕಸ್ ಸ್ಟೋಯಿನಿಸ್, 17.3), 5-180 (ಕೆ.ಎಲ್.ರಾಹುಲ್, 18.4), 6-180 (ಕೃಣಾಲ್ ಪಾಂಡ್ಯ, 18.5)
ಬೌಲಿಂಗ್: ಮೊಹಮ್ಮದ್ ಸಿರಾಜ್ 4-0-41-1, ಜೋಶ್ ಹ್ಯಾಜಲ್‌ವುಡ್ 4-0-43-3, ಶಹಬಾಜ್ ಅಹಮದ್ 4-0-35-0, ವನಿಂದು ಹಸರಂಗ 4-0-42-1, ಹರ್ಷಲ್ ಪಟೇಲ್ 4-0-25-1

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 14 ರನ್‌ಗಳ ಜಯ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	26
ಹಸರಂಗ	ಬೆಂಗಳೂರು	25
ಕಗಿಸೊ	ಪಂಜಾಬ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	718
ರಾಹುಲ್	ಲಖನೌ	616
ಕ್ವಿಂಟನ್ ಡಿಕಾಕ್	ಲಖನೌ	508

ಐಪಿಎಲ್ ನಾಕೌಟ್ ಶತಕ ಗಳಿಸಿದವರು

ರನ್	ಆಟಗಾರ	ತಂಡ	ಎದುರು	ವರ್ಷ	ಹಂತ
122	ಸೆಹ್ವಾಗ್	ಪಂಜಾಬ್	ಚೆನ್ನೈ	2014	ಕ್ವಾಲಿಫೈಯರ್ 2
117	ಶೇನ್ ವಾಟ್ಸನ್	ಚೆನ್ನೈ	ಹೈದರಾಬಾದ್	2018	ಫೈನಲ್
115	ಸಹಾ	ಪಂಜಾಬ್	ಕೋಲ್ಕತ್ತ	2014	ಫೈನಲ್
113	ಮುರಳಿ ವಿಜಯ್	ಚೆನ್ನೈ	ಡೆಲ್ಲಿ	2021	ಕ್ವಾಲಿಫೈಯರ್ 2
112	ರಜತ್ ಪಾಟೀದಾರ್	ಬೆಂಗಳೂರು	ಲಖನೌ	2022	ಎಲಿಮಿನೇಟರ್

ಡೆತ್ ಓವರ್ (16 ರಿಂದ 20)ಗಳಲ್ಲಿ ರನ್ ಗಳಿಕೆ–2022

ರನ್	ತಂಡ	ಎದುರಾಳಿ	ಮೈದಾನ
88	ಲಖನೌ	ಕೋಲ್ಕತ್ತ	ಡಿವೈ ಪಾಟೀಲ
84	ಬೆಂಗಳೂರು	ಲಖನೌ	ಕೋಲ್ಕತ್ತ
83	ಚೆನ್ನೈ	ಬೆಂಗಳೂರು	ಡಿವೈ ಪಾಟೀಲ
76	ಮುಂಬೈ	ಕೋಲ್ಕತ್ತ	ಪುಣೆ

ರ‍್ಯಾಪಿಡ್ ಚೆಸ್ ಟೂರ್ನಿ 29ರಂದು

ಬೆಂಗಳೂರು: ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಆಶ್ರಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿರುವ ಮುಕ್ತ ಮತ್ತು ವಯೋಮಾನ ವಿಭಾಗದವರ ರ‍್ಯಾಪಿಡ್ ಚೆಸ್ ಟೂರ್ನಿ ಇದೇ 29ರಂದು ನಡೆಯಲಿದೆ.

ಹೊಸಕೋಟೆಯ ಶ್ರೀ ಲಕ್ಷ್ಮಿ ಪ್ಯಾಲೇಸ್‌ನಲ್ಲಿ ನಡೆಯಲಿರುವ ಟೂರ್ನಿಯಲ್ಲಿ 7, 9, 11, 14 ವರ್ಷ-ದೊಳಗಿನವರ ವಿಭಾಗ ಹಾಗೂ ಮುಕ್ತ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ.

ಮಾಹಿತಿಗೆ www.karnatakachess.com ವೆಬ್‌ಸೈಟ್ ಅಥವಾ ಕಾರ್ಯದರ್ಶಿ ಎ.ಚಿದಾನಂದ (9663405589) ಅವರನ್ನು ಸಂಪ-ರ್ಕಿಸಬಹುದು ಎಂದು ತಿಳಿಸಲಾಗಿದೆ.

ರಾಜ್ಯ ಜೂನಿಯರ್, ಸಬ್ ಜೂನಿಯರ್ ಈಜು

ಬಿಎಸಿ ಸ್ಪರ್ಧಿಗಳ ಪ್ರಾಬಲ್ಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದ (ಬಿಎಸಿ) ಸ್ಪರ್ಧಿಗಳು ಕರ್ನಾಟಕ ರಾಜ್ಯ ಈಜು ಸಂಸ್ಥೆ, ಬೆಳಗಾವಿಯ ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ಸಹಯೋಗದಲ್ಲಿ ಬುಧವಾರ ಆರಂಭವಾದ ರಾಜ್ಯ ಜೂನಿಯರ್ ಮತ್ತು ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಇಲ್ಲಿನ ಸುವರ್ಣ ಜೆಎನ್‌ಎಂಸಿ ಈಜುಕೊಳದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಬಾಲಕ ಮತ್ತು ಬಾಲಕಿಯರ 1500 ಮೀಟರ್ಸ್ ಫ್ರೀಸ್ಟೈ-ಲ್‌ನಲ್ಲಿ ಕ್ರಮವಾಗಿ ಪವನ್ ಧನಂಜಯ ಹಾಗೂ ಮೀನಾಕ್ಷಿ ಮೆನನ್ ಚಿನ್ನದ ಪದಕ ಜಯಿಸಿದರು.

ಫಲಿತಾಂಶಗಳು: ಬಾಲಕರ ವಿಭಾಗ (ಗುಂಪು–1): 1500 ಮೀ. ಫ್ರೀಸ್ಟೈಲ್: ಪವನ್ ಧನಂಜಯ (ಕಾಲ: 16ನಿಮಿಷ 50.59 ಸೆ.)–1, ಅಮೋಘ್ ಆನಂದ್ ವೆಂಕಟೇಶ್ (ಇಬ್ಬರೂ ಬಸವನಗುಡಿ ಈಜು ಕೇಂದ್ರ;16:50.81ಸೆ.)–2, ನೀಲೇಶ್ ದಾಸ್ (ಡಾಲ್ಫಿನ್ ಕೇಂದ್ರ; 17:28.96ಸೆ.)–3. ಗುಂಪು–2: ದಕ್ಷನ್ ಎಸ್. (17:42.88 ಸೆ.)–1, ದರ್ಶನ್ ಎಸ್. (17:46.64ಸೆ.)–2, ಆತೀಶ್ ಕಿರಣ ಒಲೆಟಿ (ಮೂವರೂ ಬಸವನಗುಡಿ ಈಜು ಕೇಂದ್ರ;17:56.04ಸೆ.)–3.

ಬಾಲಕಿಯರ 1,500 ಮೀ. ಫ್ರೀಸ್ಟೈಲ್ (ಗುಂಪು–2): ಮೀನಾಕ್ಷಿ ಮೆನನ್ (ಬಸವನಗುಡಿ ಈಜು ಕೇಂದ್ರ;18:57.27 ಸೆ.)–1, ಸಬಾ ಸುಹಾನಾ (19:04.66ಸೆ.)–2, ಶ್ರೀಚರಣಿ ತಮು (ಇಬ್ಬರೂ ಗ್ಲೋಬಲ್ ಈಜುಕೇಂದ್ರ;19:27.90ಸೆ.)–3.

ಮಹಿಳೆಯರ ವಿಭಾಗ (ಗುಂಪು–1): 1,500 ಮೀ. ಫ್ರೀಸ್ಟೈಲ್: ಶಿರಿನ್ (18:21.90ಸೆ.)–1, ರಿತಿಕಾ ಬಿ.ಎಂ. (18:35.21ಸೆ.)–2, ಅದಿತಿ ಎನ್. ಮೂಲ್ಯ (ಮೂವರೂ ಬಸವನಗುಡಿ ಈಜು ಕೇಂದ್ರ;18:38.66ಸೆ.)–3.

28ರಿಂದ ಬೆಂಗಳೂರು ರೇಸ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೋದ ವಾರ ಸುರಿದ ಮಳೆಯಿಂದಾಗಿ ಮುಂದೂಡಲಾಗಿದ್ದ ಬೆಂಗಳೂರು ಬೇಸಿಗೆ ರೇಸ್‌ಗಳು ಇದೇ 28ರಿಂದ ಆರಂಭವಾಗಲಿವೆ.

ಪೂರ್ವನಿಗದಿಯ ಬೇಸಿಗೆ ರೇಸ್‌ನ ವೇಳಾಪಟ್ಟಿಯ ಮೊದಲ ಎರಡು ದಿನಗಳು ಮಳೆಗೆ ಆಹುತಿಯಾಗಿದ್ದವು. ಆದ್ದರಿಂದ ಈಗ 19 ರೇಸ್ ದಿನಗಳು ಇರಲಿವೆ. ಶನಿವಾರ (ಮೇ 28) ಮೊದಲ ರೇಸ್ ಆರಂಭವಾಗಲಿದೆ. ಆಗಸ್ಟ್ 5ರಂದು ಕೊನೆಯ ರೇಸ್ ನಡೆಯಲಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಕೆ. ಉದಯ್ ಈಶ್ವರನ್ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.


ಉದಯ್ ಈಶ್ವರನ್

‘ಬೇಸಿಗೆ ರೇಸ್‌ಗಳಲ್ಲಿ ₹ 14.41 ಕೋಟಿ ಬಹುಮಾನ ಮೊತ್ತವನ್ನು ಮೀಸ-ಲಾಗಿರಿಸಲಾಗಿದೆ. ಈ ಮೊತ್ತವು ಹಿಂದಿನ ಚಳಿಗಾಲದ ಬಹುಮಾನದ ಮೊತ್ತಕ್ಕಿಂತ ಶೇ.21ರಷ್ಟು ಹೆಚ್ಚಿಸಲಾಗಿದೆ. ಪ್ರಮುಖ ರೇಸ್‌ಗಳಾದ ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಜೂನ್ 19ರಂದು; ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಜೂನ್ 26ರಂದು; ಬೆಂಗಳೂರು ಬೇಸಿಗೆ ಡರ್ಬಿ 17ನೇ ಜುಲೈರಂದು; ಬೆಂಗಳೂರು ಸೇಂಟ್ ಲೆಜರ್ ಜುಲೈ 24ರಂದು ನಡೆಯಲಿವೆ’ ಎಂದರು.

‘ಡರ್ಬಿ ರೇಸ್‌ಗೆ ₹ 2 ಕೋಟಿ ಒಟ್ಟು ಬಹುಮಾನ ಖಾತರಿ ನೀಡಲಾಗಿದೆ. ಈ ಪ್ರತಿಷ್ಠಿತ ಡರ್ಬಿಯು 34 ವರ್ಷಗಳಿಂದ ನಡೆಯುತ್ತಿದೆ. ಯುಬಿ ಸಮೂಹದ ಮಾಜಿ ಮುಖ್ಯಸ್ಥ ವಿಜಯ್ ಮಲ್ಯ ಇದನ್ನು ಆರಂಭಿಸಿ, ಪ್ರೋತ್ಸಾಹಿಸಿದ್ದಾ-ರೆ. ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಮತ್ತು ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ರೇಸ್‌ಗಳಿಗೆ ತಲಾ ಕನಿಷ್ಠ ₹ 50 ಲಕ್ಷದ ಒಟ್ಟು ಬಹುಮಾನ ಸಿಗಲಿದೆ’ ಎಂದರು.

‘ ಋತುವಿನಲ್ಲಿ ಸುಮಾರು 112 ಕುದುರೆ ಸವಾರರ ಜೊತೆಯಲ್ಲಿ 28 ‘ಎ’ ದರ್ಜೆಯ ಮತ್ತು 14 ‘ಬಿ’ ದರ್ಜೆಯ ತರಬೇತುದಾರರು ಭಾಗವಹಿಸಲಿದ್ದಾ-ರೆ. ದೇಶದ ಇತರೆ ಕ್ಲಬ್‌ಗಳಿಂದ ಒಟ್ಟು 14 ತರಬೇತುದಾರರು ತಂದಿರುವ ಸುಮಾರು 71 ಕುದುರೆಗಳಿಗೆ ಸ್ಥಳಾವಕಾಶ ಮಾಡಲಾಗಿದೆ’ ಎಂದರು.

ಬರಲಿದೆ ಕೊಮಿಂಗ್ಲಿಂಗ್ ಟೋಟ್ : ‘ಒಂದು ದೇಶ, ಒಂದು ತೆರಿಗೆನೀತಿಯನ್ನು ಆಧರಿಸಿ, ಟರ್ಫ್ ಕ್ಲಬ್ ಆಫ್ ಇಂಡಿಯಾ ಟೋಟ್ ಆದಾಯವನ್ನು ವೃದ್ಧಿಗೊಳಿಸುವ ಜೊತೆಯಲ್ಲಿ ಗರಿಷ್ಠ ಡಿವಿಡೆಂಡ್ ನೀಡುವ ನಿಟ್ಟಿನಲ್ಲಿ ದೇಶದ ಎಲ್ಲಾ ರೇಸ್ ಕ್ಲಬ್‌ಗಳ ಒಟ್ಟುಗೂಡಿಸಿ ಒಂದೇ ಟೋಟ್ ವ್ಯವಸ್ಥೆ ರೂಪಿಸಲು ಚಿಂತನೆ ನಡೆಸಲಾಗಿದೆ. ಇದನ್ನು ಕೋಮಿಂಗ್ಲಿಂಗ್ ಎನ್ನಲಾಗುತ್ತಿದೆ. ಇದರಿಂದಾಗಿ ಆದಾಯದಲ್ಲಿ ಗಮನೀಯ ಹೆಚ್ಚಳ ಕಾಣಲಿದೆ. ಭಾರತದಲ್ಲಿ ಜುಲೈ 1ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಇದು ದೇಶದ ಕುದುರೆ ರೇಸ್‌ನಲ್ಲಿ ಐತಿಹಾಸಿಕ ಹೆಜ್ಜೆಯಾಗಲಿದೆ’ ಎಂದು ಉದಯ್ ಈಶ್ವರನ್ ತಿಳಿಸಿದರು.

ಫುಟ್‌ಬಾಲ್: ರೂಟ್ಸ್ ಎಫ್‌ಎಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೂಟ್ಸ್ ಎಫ್‌ಎಸ್ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಉತ್ತರ ವಲಯ ಫುಟ್‌ಬಾಲ್ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂ-ಗಣದಲ್ಲಿ ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ರೂಟ್ಸ್ ಟೈಬ್ರೇಕ್‌ನಲ್ಲಿ 9–8ರಿಂದ ಎಫ್‌ಸಿ ಮಂಗಳೂರು ತಂಡಕ್ಕೆ ಸೋಲುಣಿಸಿತು.

ಇದರೊಂದಿಗೆ ರೂಟ್ಸ್ ಬಿ ಡಿವಿಷನ್‌ಗೆ ಬಡ್ತಿ ಪಡೆಯಿತು. ಪಂದ್ಯದ ನಿಗದಿತ ಅವಧಿಯಲ್ಲಿ ರೂಟ್ಸ್ ಪರ ವಿಶಾಲ್ ಆರ್ (4ನೇ ನಿ.) ಮತ್ತು ಮಂಗಳೂರು ಪರ ತುಮ್ಸೊಲ್ ತೊಂಗ್‌ಸಿನ್ (20ನೇ ನಿ.) ಗೋಲು ಹೊಡೆದರು.



ಪ್ರಶಸ್ತಿ ವಿಜೇತ ರೂಟ್ಸ್ ಎಫ್‌ಎಸ್ ತಂಡ: ಎಡದಿಂದ (ನಿಂತವರು): ಸುಹಾನ್, ಅನಿರುದ್ಧ, ಅಗಸ್ತ್ಯ, ಖಲೀಲ್, ಶಾಶ್ವತ್, ಸೂರ್ಯ ವಿ, ಗೇಬ್ರಿಯಲ್, ಇರ್ವಿನ್, ಸುಜಯ್, ಕಬೀರ್, ಸಕೀಬ್, ಸಮೃದ್ಧ್, ಶ್ಯಾಮ್, ವಿಶಾಲ್, ಸತೀಶ್, ಶಾನ್, ಯೋಹಾನ್, ಗಂಭೀರ್. ಕುಳಿತವರು: ಮಧಿ, ಮದನ್, ಸೂರಜ್, ಫ್ರಾಂಕ್, ರಾಜನ್, ಶ್ರೀಕಾಂತ್, ಸುನಿಲ್, ಮದನ್ ಮತ್ತು ಅನಿಕೇತ್

ಉದಕಮಂಡಲ ರೇಸ್

ಸ್ಟಿಲ್ ಐ ರೈಸ್ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ ಡರ್ಬಿ ಸ್ಟೇಕ್ಸ್ ಗುರುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟಿಲ್ ಐ ರೈಸ್ ಗೆಲ್ಲುವ ನಿರೀಕ್ಷೆ ಇದೆ. ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಿಸ್ಟಿಕ್ ಜಟನ್ 3, ಕೆಟಲಿಸ್ಟ್ 2, ಸ್ವಿಸ್ ಅಗಟ್ಟ 6
2ನೇ ರೇಸ್: ಸ್ಟಿಲ್ ಐ ರೈಸ್ 5, ರೆಮಿಡೀಸ್ ಆಫ್ ಸ್ಪ್ರಿಂಗ್ (11), ಸ್ಟಾರ್ ಗ್ಲೋರಿ (4)
3ನೇ ರೇಸ್: ನ್ಯೂ ಲುಕ್ 2, ಗ್ರ್ಯಾಮಡಿಯೋಸ್ 7, ಗ್ಯಾಲಂಟ್ರ 5
4ನೇ ರೇಸ್: ಮೊರೆಸ್ಕೊ 4, ಮ್ಯಾಂಜೊನಿ 1, ಅನ್‌ಡಿನೈಯಬಲ್ 5
5ನೇ ರೇಸ್: ಬೆರೆಟ್ಟನಿ 2, ರಾಯಲ್ ಮೊನಾರ್ಕ್ 7, ಇಬ್ರಾಹಿಮೊವಿಕ್ 6,
6ನೇ ರೇಸ್: ಈಝಿ ರೈಡರ್ 6, ಕಾಟನ್ ಹಾಲ್ 1, ವೇ ಟುಗೊ 4
7ನೇ ರೇಸ್: ಶೆರ್ಝ್ ಆರ್ ಸ್ಟಾರ್ 2, ಕಿಂಗ್ ರೋಜರ್ 4, ಪಾಲ್ಸಿ ವಾಲ್ಸಿ (8)
8ನೇ ರೇಸ್: ಅಗಸ್ಟ 1, ಫ್ಯಾಶನ್ ಆಫ್ ಸ್ಟಾರ್ಸ್ ಅಮರೋನೆ 2

ಉತ್ತಮ ಬೆಟ್: ಮೊರೆಸ್ಕೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5	6,7,8

ಮಹಿಳಾ ಕ್ರಿಕೆಟ್; ಐರ್ಲೆಂಡ್, ಬಾಂಗ್ಲಾಕ್ಕೆ ಮಾನ್ಯತೆ

ದುಬೈ(ಪಿಟಿಐ): ಅಂತರರಾಷ್ಟ್ರೀಯ ಮಹಿಳಾ ಏಕದಿನ ಕ್ರಿಕೆಟ್ ಚಾಂಪಿಯ-ನ್‌ಷಿಪ್‌ನಲ್ಲಿ ಆಡಲು ಎರಡು ಹೊಸ ತಂಡಗಳಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮಾನ್ಯತೆ ನೀಡಿದೆ. ಇದರೊಂದಿಗೆ ಒಟ್ಟು ಹತ್ತು ತಂಡಗಳು ಕಣದಲ್ಲಿ ಸ್ಪರ್ಧಿಸಲಿವೆ.

2022ರಿಂದ 2025ರವರೆಗಿನ ವೇಳಾಪಟ್ಟಿಯಲ್ಲಿ ಬಾಂಗ್ಲಾ, ಐರ್ಲೆಂಡ್‌ಗಳಿಗೆ ಅವಕಾಶ ನೀಡಲಾಗಿದೆ. ಉಭಯ ತಂಡಗಳು ಏಕದಿನ ರ‍್ಯಾಂಕಿಂಗ್‌ನಲ್ಲಿಕ್ರ-ಮವಾಗಿ 9,10ನೇ ಸ್ಥಾನದಲ್ಲಿವೆ.

30 ಸಾವಿರ ಉದ್ಯೋಗ ಸೃಷ್ಟಿ– ದಾವೋಸ್ ವಿಶ್ವ ಆರ್ಥಿಕ ಶೃಂಗ ಭೇಟಿ ಫಲಪ್ರದ: ಬೊಮ್ಮಾಯಿ

₹52 ಸಾವಿರ ಕೋಟಿ ಹೂಡಿಕೆಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಎರಡು ದೊಡ್ಡ ಕಂಪನಿಗಳು ಕರ್ನಾಟಕದಲ್ಲಿ ₹52 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲು ಒಪ್ಪಂದ ಮಾಡಿಕೊಂಡಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಸಮ್ಮುಖದಲ್ಲಿ ಎರಡೂ ಕಂಪನಿಗಳ ಪ್ರತಿನಿಧಿಗಳು ಹಾಗೂ ಸರ್ಕಾರದ ಅಧಿಕಾರಿಗಳು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಇಂಧನ ವಲಯದಲ್ಲಿ ₹50 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ರೆನ್ಯೂ ಪವರ್ ಕಂಪನಿ ಹಾಗೂ ₹2 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಲುಲು ಗ್ರೂಪ್ ಇಂಟರ್ ನ್ಯಾಷನಲ್ ಸಂಸ್ಥೆ ಒಪ್ಪಂದ ಮಾಡಿಕೊಂಡಿವೆ.

‘ಈ ಎರಡೂ ಒಪ್ಪಂದಗಳಿಂದ ಇಂಧನ ವಲಯದ ಅಭಿವೃದ್ಧಿಯಲ್ಲಿ ಮಹಾ ಮೈಲುಗಲ್ಲನ್ನು ತಲುಪಲು ಸಾಧ್ಯ ಹಾಗೂ ಸುಮಾರು 30 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯ ಅವಕಾಶ ತೆರೆದುಕೊಳ್ಳಲಿದೆ. ದಾವೋಸ್ ಭೇಟಿ ಅತ್ಯಂತ ಫಲಪ್ರದವಾಗಿದೆ’ ಎಂದು ಬೊಮ್ಮಾಯಿ ಪ್ರತಿಪಾದಿಸಿದರು.


ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಐಕಿಯ ಗ್ರೂಪ್‌ನ ಸಿಇಒ ಜೆಸ್ಪರ್ ಬ್ರಾಡಿನ್ ಜತೆ ಸಮಾಲೋಚನೆ ನಡೆಸಿದರು. ಸಚಿವರಾದ ಸಿ.ಎನ್. ಅಶ್ವತ್ಥನಾರಾಯಣ, ಮುರುಗೇಶ ನಿರಾಣಿ ಉಪಸ್ಥಿತರಿದ್ದರು

ಆಸಕ್ತಿ ತೋರಿದ ಕಂಪನಿಗಳು:

- **ಸೀಮೆನ್ಸ್ ಸಂಸ್ಥೆ:** ಬೆಂಗಳೂರಿನಲ್ಲಿ 2 ಯೋಜನೆಗಳನ್ನು ಸೀಮೆನ್ಸ್ ಸಂಸ್ಥೆ ಕೈಗೆತ್ತಿಕೊಳ್ಳಲಿದೆ. ಬಿಯಾಂಡ್ ಬೆಂಗಳೂರು ಯೋಜನೆಡಿ ಹುಬ್ಬಳ್ಳಿ-ಧಾರವಾಡ, ತುಮಕೂರು ಮತ್ತು ಮೈಸೂರು ನಗರಗಳಲ್ಲಿ ಹೂಡಿಕೆ ಮಾಡುವ ಚರ್ಚೆ ನಡೆದಿದೆ.
- **ಡಸ್ಸಾಲ್ಟ್ ಸಿಸ್ಟಮ್ಸ್:** ವಿದ್ಯುತ್ ವಾಹನಗಳು ಮತ್ತು ಕೇಂದ್ರ ಉತ್ಪಾದನಾ ತಾಂತ್ರಿಕ ಸಂಸ್ಥೆಯ ಸಹಯೋಗದಲ್ಲಿ ಆಧುನಿಕ ಉತ್ಪಾದನೆ ಕ್ಷೇತ್ರ , ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ಹೂಡಿಕೆ ಮಾಡಲು ಡಸ್ಸಾಲ್ಟ್ ಸಿಸ್ಟಮ್ಸ್ ಉತ್ಸಾಹ ತೋರಿದೆ.
- **ನೆಸ್ಲೆ ಸಂಸ್ಥೆ:** ನಂಜನಗೂಡಿನಲ್ಲಿ ನೆಸ್ಲೆ ಇನ್ಸ್ಟಂಟ್ ಕಾಫಿ ಕಾರ್ಖಾನೆ ನವೀಕರಣ ಹಾಗೂ ವಿಸ್ತರಣಾ ಕಾರ್ಯಕ್ಕೆ ಆಸಕ್ತಿ ತೋರಿದೆ.
- **ಭಾರ್ತಿ ಎಂಟರ್ ಪ್ರೈಸಸ್:** ಸಂಸ್ಥೆಯ ಅಧ್ಯಕ್ಷ ಹಾಗೂ ಸಿಇಒ ಸುನಿಲ್ ಭಾರ್ತಿ ಮಿತ್ತಲ್ ಅವರು ರಾಜ್ಯದಲ್ಲಿ ಇನ್ನೊಂದು ಮೆಗಾ ಡೇಟಾ ಸೆಂಟರ್ ಸ್ಥಾಪಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.
- **ಐಕಿಯ ಸ್ಟೋರ್:** ಇಂಇಂಗ್ಕಾ ಗ್ರೂಪ್ (ಐಕಿಯ) ಸಿಇಒ. ಜೆಸ್ಪರ್ ಬ್ರಾಡಿನ್ ಅವರು ರಾಜ್ಯದಲ್ಲಿ ಇನ್ನಷ್ಟು ಐಕಿಯ ಸ್ಟೋರ್ ತೆರೆಯುವ ಬಗ್ಗೆ ಆಸಕ್ತಿ ತೋರಿದ್ದಾರೆ. ಇದಲ್ಲದೇ, ನೋಕಿಯಾ, ಹೀರೊ ಮೋಟೋ ಕಾರ್ಪ್, ಎ ಬಿ ಇನ್ ಬೇವ್ ಸಂಸ್ಥೆ, ಆರ್ಸೆಲರ್ ಮಿತ್ತಲ್, ಅದಾನಿ ಗ್ರೂಪ್, ಜಾನ್ಸನ್ ಕಂಟ್ರೋಲ್ಸ್, ಹನಿವೆಲ್ ಕಂಪನಿ, ಐಬಿಎಂ, ಬೈಜೂಸ್, ಮೀಷೊ ಸಂಸ್ಥೆಗಳೊಂದಿಗೆ ಮುಖ್ಯಮಂತ್ರಿ ಹಾಗೂ ಅಧಿಕಾರಿಗಳು ಸಮಾಲೋಚನೆ ನಡೆಸಿದರು.

23 ವರ್ಷಗಳಿಂದ ನಿರಂತರ ಹತ್ಯಾಕಾಂಡ

ಹ್ಯೂಸ್ಟನ್ (ಎಪಿ): ಅಮೆರಿಕದಲ್ಲಿ ವಿದ್ಯಾರ್ಥಿಗಳು ಬಂದೂಕಿನಿಂದ ದಾಳಿ ಮಾಡಿ ಸಾಮೂಹಿಕ ಹತ್ಯಾಕಾಂಡ ನಡೆಸುತ್ತಿರುವ ಘಟನೆಗಳು ಮರುಕಳಿಸುತ್ತಲೇ ಇವೆ. ಟೆಕ್ಸಾಸ್‌ನ ಉವಾಲ್ಡೆಯ ರಾಬ್ ಪ್ರಾಥಮಿಕ ಶಾಲೆಯಲ್ಲಿ ನಡೆದ ಗುಂಡಿನ ದಾಳಿ ಈಗ ಮತ್ತೊಮ್ಮೆ ಜಗತ್ತನ್ನು ಬೆಚ್ಚಿಬೀಳಿಸಿದೆ.

ಉವಾಲ್ಡೆಯ ಘಟನೆ ಇತ್ತೀಚಿನ ವರ್ಷಗಳಲ್ಲಿ ಅಮೆರಿಕದಲ್ಲಿ ನಡೆದ ಅತ್ಯಂತ ಭಯಾನಕ ಘಟನೆ ಎನಿಸಿದೆ. ಘಟನೆಯ ಬಗ್ಗೆ ಭಾವುಕವಾಗಿ ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್, ದೇಶದಲ್ಲಿನ ಬಂದೂಕು ಲಾಬಿಗೆ ಮತ್ತು ಮುಗ್ಧರ ಸಾಮೂಹಿಕ ಹತ್ಯೆಗೆ ಇತಿಶ್ರೀ ಹಾಡುವ ಸಂಕಲ್ಪ ಮಾಡಿದ್ದಾರೆ. ಅಮೇರಿಕದಲ್ಲಿ ಇಲ್ಲಿಯವರೆಗೆ ನಡೆದ ಹತ್ಯಾಕಾಂಡ ಘಟನೆಗಳ ಇಣುಕು ನೋಟ ಇಲ್ಲಿದೆ.

ಸಾಂಟಾ ಫೇ ಹೈಸ್ಕೂಲ್, ಮೇ 2018: ಹ್ಯೂಸ್ಟನ್ ಪ್ರೌಢಶಾಲೆಯಲ್ಲಿ 17 ವರ್ಷದ ಯುವಕನ ಗುಂಡಿನ ದಾಳಿಗೆ 10 ಮಂದಿ ಬಲಿ. ಇದರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು.


ಉವಾಲ್ಡೆಯ ಘಟನೆಯ ನಂತರ ಮಕ್ಕಳನ್ನು ಸಂತೈಸುತ್ತಿರುವ ತಾಯಿ – ಎಎಫ್‌ಪಿ ಚಿತ್ರ

ಮಾರ್ಜೋರಿ ಸ್ಟೋನ್‌ಮ್ಯಾನ್ ಡೌಗ್ಲಾಸ್ ಹೈಸ್ಕೂಲ್, ಫೆಬ್ರುವರಿ 2018: ಫ್ಲಾರಿಡಾದ ಪಾರ್ಕ್‌ಲ್ಯಾಂಡ್‌ನ ಶಾಲೆಯಲ್ಲಿ 20 ವರ್ಷದ ಯುವಕನ ಗುಂಡಿನ ದಾಳಿಯಲ್ಲಿ 14 ವಿದ್ಯಾರ್ಥಿಗಳು ಮತ್ತು ಮೂವರು ಸಿಬ್ಬಂದಿ ಸಾವು. ಹಲವರಿಗೆ ಗಾಯ.

ಯುಎಂಪಿಕ್ಯು ಕಮ್ಯುನಿಟಿ ಕಾಲೇಜು, ಅಕ್ಟೋಬರ್ 2015: ಒರೆಗಾನ್‌ನ ರೋಸ್‌ಬರ್ಗ್‌ನಲ್ಲಿನ ಶಾಲೆಯಲ್ಲಿ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಿ, ಒಂಬತ್ತು ಮಂದಿ ಕೊಂದು, ಇತರ ಒಂಬತ್ತು ಮಂದಿ ಗಾಯಗೊಳಿಸಿ, ನಂತರ ತಾನೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ.

ಸ್ಯಾಂಡಿ ಹುಕ್ ಪ್ರಾಥಮಿಕ ಶಾಲೆ, ಡಿಸೆಂಬರ್ 2012: ಕನೆಕ್ಟಿಕಟ್‌ನ ನ್ಯೂಟೌನ್‌ನಲ್ಲಿರುವ ತನ್ನ ಮನೆಯಲ್ಲಿ 19 ವರ್ಷದ ಯುವಕ ತನ್ನ ತಾಯಿಯನ್ನು ಗುಂಡಿಟ್ಟು ಕೊಂದಿದ್ದ. ನಂತರ ಸ್ಯಾಂಡಿ ಹುಕ್ ಪ್ರಾಥಮಿಕ ಶಾಲೆಗೆ ನುಗ್ಗಿ 20 ವಿದ್ಯಾರ್ಥಿಗಳು, ಆರು ಶಿಕ್ಷಕರನ್ನು ಕೊಂದು, ನಂತರ ಆತನೂ ಆತ್ಮಹತ್ಯೆ ಮಾಡಿಕೊಂಡಿದ್ದ.

ಕೊಲಂಬೈನ್ ಹೈಸ್ಕೂಲ್, ಏಪ್ರಿಲ್ 1999: ಕೊಲೊರಾಡೋದ ಲಿಟಲ್‌ಟನ್‌ನ ಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ತಮ್ಮ 12 ಗೆಳೆಯರನ್ನು ಮತ್ತು ಒಬ್ಬ ಶಿಕ್ಷಕರನ್ನು ಹತ್ಯೆ ಮಾಡಿ, ಹಲವರನ್ನು ಗಾಯಗೊಳಿಸಿ, ನಂತರ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು.

ಸಂಕ್ಷಿಪ್ತ ಸುದ್ದಿ

‘ಇಟಲಿಯ ಶಾಂತಿ ಮಂತ್ರ ಕಾಲ್ಪನಿಕ’

ಕೀವ್ / ಮಾಸ್ಕೊ(ಎಪಿ/ ರಾಯಿಟರ್ಸ್): ಉಕ್ರೇನ್‌ಗಾಗಿ ಇಟಲಿ ಪ್ರಸ್ತಾಪಿಸಿರುವ ಶಾಂತಿ ಮಾತುಕತೆಯ ಯೋಜನೆ ಕೇವಲ ‘ಕಾಲ್ಪನಿಕ’ವಾಗಿದೆ ಎಂದು ರಷ್ಯಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮರಿಯಾ ಜಖರೋವಾ ಬುಧವಾರ ಟೀಕಿಸಿದ್ದಾರೆ.

ಇಟಲಿಯ ಕ್ರಮವನ್ನು ಪ್ರಸ್ತಾಪಿಸಿ, ‘ನೀವು ಒಂದು ಕೈಯಿಂದ ಉಕ್ರೇನ್‌ಗೆ ಶಸ್ತ್ರಾಸ್ತ್ರ ಗಳನ್ನು ಪೂರೈಸುವುದು, ಇನ್ನೊಂದು ಕೈಯಲ್ಲಿ ಶಾಂತಿ ಮಂತ್ರ ಜಪಿಸುವುದರಿಂದ ಸಂಘರ್ಷ ಶಮನ ಅಸಾಧ್ಯ’ ಎಂದು ಹೇಳಿದರು.

'ಲಾಹೋರ್‌ನಲ್ಲಿ ಪೆಟ್ರೋಲ್ ಇಲ್ಲ'

ನವದೆಹಲಿ: ಕ್ರಿಕೆಟ್ ಸಂಬಂಧಿತ ವಿಚಾರ ಗಳಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಹಲವು ಸಂದರ್ಭಗಳಲ್ಲಿ ಚಾಟಿ ಬೀಸಿದ್ದ ಮಾಜಿ ಕ್ರಿಕೆಟಿಗ ಮೊಹಮ್ಮದ್ ಹಫೀಜ್, ಈಗ ದೇಶದ ದುಃಸ್ಥಿತಿಯ ಬಗ್ಗೆ ಪ್ರಶ್ನೆ ಎತ್ತಿದ್ದಾರೆ.

ಫೈಝರ್‌ನಿಂದ ಅಗ್ಗದ ಬೆಲೆಗೆ ಔಷಧ

ನ್ಯೂಯಾರ್ಕ್ (ಎಪಿ): ಕೋವಿಡ್–19 ಲಸಿಕೆ ಸೇರಿದಂತೆ ಎರಡು ಡಜನ್ ಔಷಧ ಉತ್ಪನ್ನಗಳನ್ನು ಜಗತ್ತಿನ ಕಡು ಬಡ ರಾಷ್ಟ್ರಗಳಿಗೆ ಲಾಭರಹಿತವಾಗಿ ಅಗ್ಗದ ದರಕ್ಕೆ ಮಾರಾಟ ಮಾಡುವುದಾಗಿ ಅಮೆರಿಕದ ಫೈಝರ್ ಕಂಪನಿ ಬುಧವಾರ ತಿಳಿಸಿದೆ.

ಸ್ವಿಟ್ಜರ್ಲೆಂಡ್‌ನ ದಾವೋಸ್ ದ್ವೀಪದಲ್ಲಿ ನಡೆದ ವಿಶ್ವ ಆರ್ಥಿಕ ಸಮ್ಮೇಳನದ ವಾರ್ಷಿಕ ಶೃಂಗಸಭೆಯಲ್ಲಿ ಫೈಝರ್ ಈ ಬಗ್ಗೆ ಘೋಷಿಸಿದೆ. ಸಿರಿಯಾ, ಕೊಲಂಬಿಯಾ, ಉತ್ತರ ಕೊರಿಯಾ, ಆಫ್ರಿಕಾ ಖಂಡದ ದೇಶಗಳು ಸೇರಿ ಒಟ್ಟು 45 ಬಡ ರಾಷ್ಟ್ರಗಳಲ್ಲಿ ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ.



ಐಒಎ ಅಧ್ಯಕ್ಷ ಬಾತ್ರಾ ಪ್ರಕರಣದಲ್ಲಿ ತೀರ್ಪು: ಆಜೀವ ಸದಸ್ಯತ್ವ ಅಮಾನ್ಯ

ಹಾಕಿ ಇಂಡಿಯಾಗೆ ಸಿಒಎ ಕಣ್ಗಾವಲು

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾ ನೀತಿಯನ್ನು ಗಾಳಿಗೆ ತೂರಿದ ಆರೋಪದ ಹಿನ್ನೆಲೆಯಲ್ಲಿ ಹಾಕಿ ಇಂಡಿಯಾವನ್ನು ಆಡಳಿತ ಸಮಿತಿಯ ಕಣ್ಗಾವಲಿನಲ್ಲಿರಿಸಲು ದೆಹಲಿ ಹೈಕೋರ್ಟ್ ಆದೇಶ ಹೊರಡಿಸಿದೆ.


ಸಂಸ್ಥೆಯ ದೈನಂದಿನ ಕಾರ್ಯಗಳನ್ನು ಮೂವರ ಸದಸ್ಯರನ್ನು ಒಳಗೊಂಡ ಸಮಿತಿ ನೋಡಿಕೊಳ್ಳಬೇಕು ಎಂದು ಸೂಚಿಸಿದೆ. ಸುಪ್ರಿಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಆರ್ ದಾವೆ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ ಖುರೇಷಿ ಮತ್ತು ಭಾರತ ಹಾಕಿ ತಂಡದ ಮಾಜಿ ನಾಯಕ ಜಫರ್ ಇಕ್ಬಾಲ್ ಸಮಿತಿಯಲ್ಲಿರುವರು.

ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷ ನರಿಂದರ್ ಬಾತ್ರಾ ಅವರನ್ನು ಹಾಕಿ ಇಂಡಿಯಾದ ಆಜೀವ ಸದಸ್ಯರನ್ನಾಗಿ ನೇಮಕ ಮಾಡಿರುವುದರನ್ನು ಪ್ರಶ್ನಿಸಿ 1975ರ ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತ ಹಾಕಿ ತಂಡದಲ್ಲಿದ್ದ ಅಸ್ಲಾಂ ಶೇರ್ ಖಾನ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು.

ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ಬುಧವಾರ ತೀರ್ಪು ನೀಡಿದೆ. ನರಿಂದರ್ ಬಾತ್ರಾ ಅವರ ಆಜೀವ ಸದಸ್ಯತ್ವ ಅಮಾನ್ಯ ಎಂದು ನ್ಯಾಯಾಲಯ ತಿಳಿಸಿತ್ತು. ಎಲೆನಾ ನಾರ್ಮನ್ ಅವರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಕ ಮಾಡಿರುವುದು ಕೂಡ ತಪ್ಪು ಎಂದು ಅಭಿಪ್ರಾಯಪಟ್ಟಿದೆ. ತೀರ್ಪಿನಿಂದಾಗಿ ಬಾತ್ರಾ ಅವರ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಸದಸ್ಯತ್ವಕ್ಕೂ ಕುತ್ತು ಬರಲಿದೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ (ಎಐಎಫ್‌ಎಫ್) ಸಂಬಂಧಿಸಿದ ಪ್ರಕರಣವನ್ನು ಉಲ್ಲೇಖಿಸಿರುವ ಹೈಕೋರ್ಟ್ ಪೀಠ 'ಮತ್ತೊಂದು ರಾಷ್ಟ್ರೀಯ ಕ್ರೀಡಾ ಫೆಡರೇಷನ್ ಆಗಿರುವ ಎಐಎಫ್‌ಎಫ್‌ಗೆ ಇದೇ ತಿಂಗಳ 18ರಂದು ಸುಪ್ರೀಂ ಕೋರ್ಟ್ ಸಿಒಎ ನೇಮಕ ಮಾಡಿದೆ. ಹೀಗಾಗಿ ಇದನ್ನೊಂದು ಸಾರ್ವಜನಿಕ ಹಿತಾಸಕ್ತಿಯ ಪ್ರಕರಣವೆಂದು ಪರಿಗಣಿಸಲಾಗಿದೆ' ಎಂದು ತಿಳಿಸಿದೆ. ಪೀಠದಲ್ಲಿ ನಜ್ಮಿ ವಜೀರಿ ಮತ್ತು ಸ್ವರಾನಾ ಕಂಠ ಶರ್ಮಾ ಇದ್ದರು.

ಕ್ರೀಡಾ ನೀತಿಯನ್ನು ಅನುಸರಿಸದ ಕ್ರೀಡಾ ಫೆಡರೇಷನ್‌ಗಳಿಗೆ ಕೇಂದ್ರ ಸರ್ಕಾರ ಅನುದಾನ ನೀಡಬಾರದು. ಅಕ್ರಮವಾಗಿ ಮಾಡಿರುವ ನೇಮಕಾತಿಗಳನ್ನೆಲ್ಲ ರದ್ದು ಮಾಡಬೇಕು ಪೀಠ ಸೂಚಿಸಿದೆ.


ನರಿಂದರ್ ಬಾತ್ರಾ

ನರಿಂದರ್ ಬಾತ್ರಾ ವಜಾ; ಖನ್ನಾಗೆ ಸ್ಥಾನ

ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಐಒಎ ಅಧ್ಯಕ್ಷ ನರಿಂದರ್ ಬಾತ್ರಾ ಅವರನ್ನು ಆ ಸ್ಥಾನದಿಂದ ವಜಾ ಮಾಡಲಾಗಿದೆ. ಉಪಾಧ್ಯಕ್ಷ ಅನಿಲ್ ಖನ್ನಾ ಅವರನ್ನು ಹಂಗಾಮಿ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಹಾಕಿ ಇಂಡಿಯಾದ ಪ್ರತಿನಿಧಿಯಾಗಿ ನರಿಂದರ್ ಬಾತ್ರಾ ಅವರು 2017ರಲ್ಲಿ ಐಒಎ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಜಯ ಗಳಿಸಿದ್ದರು. ಅವರನ್ನು ಹಾಕಿ ಇಂಡಿಯಾದ ಆಜೀವ ಸದಸ್ಯರನ್ನಾಗಿ ನೇಮಕ ಮಾಡಿದ್ದನ್ನು ಪ್ರಶ್ನಿಸಿ ಅಸ್ಲಾಂ ಶೇರ್ ಖಾನ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು.

ತೀರ್ಪು ಹೊರಬಿದ್ದ ಕೆಲವೇ ಕ್ಷಣಗಳಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿದ್ದ ಬಾತ್ರಾ ಇನ್ನೊಂದು ಬಾರಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದರು. ಆದರೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರಲಿಲ್ಲ. ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನಲ್ಲಿ ಹೆಚ್ಚು ಕಾಲ ಕಾರ್ಯನಿರ್ವಹಿಸಲು ಬಯಸುವುದಾಗಿ ಅವರು ತಿಳಿಸಿದ್ದಾರೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ನಡೆಯಬೇಕಾಗಿದ್ದ ಐಒಎ ಚುನಾವಣೆಯನ್ನು ಮತ್ತೊಂದು ಪ್ರಕರಣದ ವಿಚಾರಣೆ ಬಾಕಿ ಇರುವುದರಿಂದ ಮುಂದೂಡಲಾಗಿದೆ.

ಕಬಡ್ಡಿ: ಬ್ಯಾಂಕ್ ಆಫ್ ಬರೋಡಾ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾದ ತಂಡವು ದಕ್ಷಿಣ ಭಾರತ ವಲಯ ಮಟ್ಟದ ಕಬಡ್ಡಿ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯ ಚೆಟ್ಟಿಕುಲಂನಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವು ಆರ್ಮಿ ಹೈದರಾಬಾದ್ ತಂಡವನ್ನು ಸೋಲಿಸಿತು.

ತಮಿಳುನಾಡಿನ ನಮಕ್ಕಲ್‌ನಲ್ಲಿ ಇತ್ತೀಚೆಗೆ ನಡೆದ ಟೂರ್ನಿಯಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವು ಮೂರನೇ ಸ್ಥಾನ ಗಳಿಸಿತ್ತು.

ಚೆಸೇಬಲ್ ಮಾಸ್ಟರ್ಸ್: ಸೆಮಿಯಲ್ಲಿ ಅನೀಶ್ ಗಿರಿಗೆ ಸೋಲು

ಫೈನಲ್‌ಗೆ ಪ್ರಜ್ಞಾನಂದ: ದಿಂಗ್ ಸವಾಲು

ಚೆನ್ನೈ (ಪಿಟಿಐ): ಜಯದ ಓಟ ಮುಂದುವರಿಸಿರುವ ಆರ್. ಪ್ರಜ್ಞಾನಂದ, ಮೆಲ್ಟ್‌ವಾಟರ್ ಚಾಂಪಿಯನ್ಸ್ ಚೆಸ್ ಟೂರ್ ಚೆಸೇಬಲ್ ಮಾಸ್ಟರ್ಸ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಇದರೊಂದಿಗೆ ಟೂರ್ನಿಯಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ ಎನಿಸಿಕೊಂಡಿದ್ದಾರೆ.

ಆನ್‌ಲೈನ್ ಮೂಲಕ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ತಡರಾತ್ರಿ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ 16 ವರ್ಷದ ಪ್ರಜ್ಞಾನಂದ 3.5–2.5ರಿಂದ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಅವರನ್ನು ಸೋಲಿಸಿದರು. ನಾಲ್ಕು ಗೇಮ್‌ಗಳ ಈ ಜಿದ್ದಾಜಿದ್ದಿನ ಪಂದ್ಯವು 2–2ರಿಂದ ಸಮಬಲವಾಗಿತ್ತು. ಆದರೆ ಟೈಬ್ರೇಕ್‌ನಲ್ಲಿ ಪ್ರಜ್ಞಾನಂದ ಮೇಲುಗೈ ಸಾಧಿಸಿದರು.


ಪ್ರಜ್ಞಾನಂದ

ಸೆಮಿಫೈನಲ್‌ನ ಮೊದಲ ಗೇಮ್ ಡ್ರಾನಲ್ಲಿ ಕೊನೆಗೊಂಡಿತು. ಎರಡನೇ ಗೇಮ್‌ನಲ್ಲಿ ಪ್ರಜ್ಞಾನಂದ ವಿಜಯ ಸಾಧಿಸಿದರು. ಇದು ಗಿರಿ ಅವರಿಗೆ ಟೂರ್ನಿಯ ಮೊದಲ ಸೋಲಾಗಿತ್ತು. ಮೂರನೇ ಗೇಮ್‌ನ ಆರಂಭದಲ್ಲಿ ಡಚ್ ಆಟಗಾರ ಮೇಲುಗೈ ಸಾಧಿಸುವಂತೆ ಕಂಡರೂ ಚಾಣಾಕ್ಷತನ ಮೆರೆದ ಪ್ರಜ್ಞಾನಂದ ಡ್ರಾ ಮಾಡಿಕೊಂಡರು. ನಾಲ್ಕನೇ ಗೇಮ್‌ನಲ್ಲಿ ಗಿರಿ ಯಶಸ್ಸು ಸಾಧಿಸಿದರು.

ಟೈಬ್ರೇಕ್‌ನ ಮೊದಲ ಬ್ಲಿಟ್ಜ್ ಗೇಮ್‌ನಲ್ಲಿ 33 ನಡೆಗಳಲ್ಲಿ ಪ್ರಜ್ಞಾನಂದ ಜಯಿಸಿದರು. ಆದರೆ ಎರಡನೇ ಗೇಮ್‌ನಲ್ಲಿ ಗಿರಿ ತಿರುಗೇಟು ನೀಡಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಈ ಗೇಮ್ ಡ್ರಾನಲ್ಲಿ ಕೊನೆಗೊಂಡಿತು. ಪಂದ್ಯವು ಬುಧವಾರ ಮುಂಜಾವು ಅಂತ್ಯಗೊಂಡಿತು. ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದ ಪ್ರಜ್ಞಾನಂದ 'ನಾನು ಬೆಳಗಿನ 8.45ರ ವೇಳೆಗೆ ಶಾಲೆಯಲ್ಲಿರಬೇಕು' ಎಂದರು.

ಫೈನಲ್‌ನಲ್ಲಿ ಪ್ರಜ್ಞಾನಂದ ಅವರಿಗೆ ಚೀನಾದ ದಿಂಗ್ ಲಿರೆನ್ ಸವಾಲು ಎದುರಾಗಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ದಿಂಗ್ 2.5–1.5ರಿಂದ ಅಗ್ರ ಕ್ರಮಾಂಕದ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಮಣಿಸಿದರು.

ಪ್ರಜ್ಞಾನಂದ ಪ್ರಿಲಿಮನರಿ ಸುತ್ತಿನಲ್ಲಿ ಕಾರ್ಲ್‌ಸನ್ ಅವರಿಗೆ ಸೋಲುಣಿಸಿದ್ದರು.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಶಾಲಾ–ಕಾಲೇಜು ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಪಕ್ಷ ರಾಜಕೀಯ ನಡೆಯುತ್ತಿದೆಯೇ?

ಜನಾಭಿಪ್ರಾಯ:

ಹೌದು	ಇಲ್ಲ
97%	3%

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಅಜರೆಂಕಾ ಜಯಭೇರಿ

ನೊವಾಕ್, ಕರ್ಬರ್ ಮುನ್ನಡೆ

ಪ್ಯಾರಿಸ್ (ಎಎಫ್‌ಪಿ): ಹಾಲಿ ಚಾಂಪಿಯನ್, ಸರ್ಬಿಯಾದ ನೊವಾಕ್ ಜೊಕೊವಿಚ್ ಮತ್ತು ಮಾಜಿ ಗ್ರ್ಯಾನ್‌ಸ್ಲಾಂ ಚಾಂಪಿಯನ್ ಜರ್ಮನಿಯ ಏಂಜೆಲಿಕಾ ಕರ್ಬರ್, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಮೂರನೇ ಸುತ್ತು ಪ್ರವೇಶಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಸ್ಲೊವಾಕಿಯಾದ ಅಲೆಕ್ಸ್ ಮೊಲ್ಕಾನ್ ವಿರುದ್ಧ ಜೊಕೊವಿಚ್ 6-2, 6-3, 7-6 (7/4)ರಲ್ಲಿ ಜಯ ಗಳಿಸಿದರು. ಮತ್ತೊಂದು ರೋಚಕ ಪಂದ್ಯದಲ್ಲಿ ಅಲೆಕ್ಸಾಂಡರ್ ಜ್ವೆರೆವ್ ಸೋಲಿನ ಸುಳಿಯಿಂದ ಚೇತರಿಸಿಕೊಂಡು ಜಯದ ನಗೆ ಸೂಸಿದರು. ಅರ್ಜೆಂಟೀನಾದ ಸೆಬಾಸ್ಟಿಯನ್ ಬಯೆಜ್ ಅವರನ್ನು ಜ್ವೆರೆವ್ 2-6, 4-6, 6-1, 6-2, 7-5ರಲ್ಲಿ ಮಣಿಸಿದರು.

ಏಂಜೆಲಿಕಾ ಕರ್ಬರ್ ಫ್ರಾನ್ಸ್‌ನ ಎಲ್ಸಾ ಜಾಕ್‌ಮೋಟ್ ಅವರನ್ನು 6-1, 7-6 (7/2)ರಲ್ಲಿ ಮಣಿಸಿದರು. ವೈಲ್ಡ್ ಕಾರ್ಡ್ ಮೂಲಕ ಪ್ರವೇಶಿಸಿರುವ 2020ರ ಜೂನಿಯರ್ ಚಾಂಪಿಯನ್ ಎಲ್ಸಾ ಮೊದಲ ಸೆಟ್‌ನಲ್ಲಿ ಸುಲಭವಾಗಿ ಮಣಿದರು. ಆದರೆ ನಂತರ ಪ್ರಬಲ ಪೈಪೋಟಿ ನೀಡಿದರು. ಪಟ್ಟುಬಿಡದ ಕರ್ಬರ್ ಗೆಲುವಿನ ದಡ ಸೇರಿದರು.

ಆಸ್ಟ್ರೇಲಿಯಾ ಓಪನ್‌ನಲ್ಲಿ ಎರಡು ಬಾರಿ ಪ್ರಶಸ್ತಿ ಗೆದ್ದಿರುವ ಅಜರೆಂಕಾ 2014ರ ಫ್ರೆಂಚ್ ಓಪನ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಆ್ಯಂಡ್ರಿಯಾ ಪೆಟ್ರೊವಿಚ್ ವಿರುದ್ಧ 6-1, 7-6 (7/3)ರಲ್ಲಿ ಗೆದ್ದರು. ಅಮೆರಿಕ ಓಪನ್‌ನ ಚಾಂಪಿಯನ್ ಎಮಾ ರಡುಕಾನು ವಿರುದ್ಧ 3-6, 6-1, 6-1ರಲ್ಲಿ ಬೆಲಾರಸ್‌ನ ಅಲಿಯಕ್ಸಾಂಡ್ರ ಸಸ್ನೊವಿಚ್ ವಿರುದ್ಧ ಜಯ ಗಳಿಸಿದರು.


ಏಂಜಲಿಕ್ ಕರ್ಬರ್ ಚೆಂಡನ್ನು ರಿಟರ್ನ್ ಮಾಡಿದ ಕ್ಷಣ –ಎಎಫ್‌ಪಿ ಚಿತ್ರ

ನಾಲ್ಕನೇ ಶ್ರೇಯಾಂಕದ ಮರಿಯಾ ಸಕ್ಕರಿ ಜೆಕ್ ಗಣರಾಜ್ಯದ ಕರೋಲಿನಾ ಮುಚೋವ ವಿರುದ್ಧ 7-6(5) 7-6(4) ರಲ್ಲಿ ಸೋತರು.

ರಾಮ್‌ಕುಮಾರ್‌ಗೆ 'ಮೊದಲ' ಜಯ: ಭಾರತದ ರಾಮ್‌ಕುಮಾರ್ ರಾಮನಾಥನ್ ಗ್ರ್ಯಾನ್‌ಸ್ಲಾಂ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಮುಖ್ಯ ಸುತ್ತಿನಲ್ಲಿ ಜಯ ಗಳಿಸಿದರು. ಪುರುಷರ ಡಬಲ್ಸ್‌ನಲ್ಲಿ ಅಮೆರಿಕದ ಹಂಟರ್ ರೀಸಿ ಜೊತೆಗೂಡಿ ಆಡುತ್ತಿರುವ ಅವರು ಮೊದಲ ಸುತ್ತಿನಲ್ಲಿ ಜರ್ಮನಿಯ ಡ್ಯಾನಿಯಲ್ ಆಲ್ಟ್‌ಮಿಯರ್ ಮತ್ತು ಆಸ್ಕರ್ ಒಟಿ ವಿರುದ್ಧ 7-6(4), 6-3ರಲ್ಲಿ ಜಯ ಗಳಿಸಿದರು. ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮಟ್ವೆ ಮಿಡೆಲ್‌ಕೂಪ್ 6-4, 6-1ರಲ್ಲಿ ಸ್ಥಳೀಯ ಆಟಗಾರರಾದ ಸಸ್ಚಾ ಗ್ಯುಮರ್ಡ್ ಮತ್ತು ಲೂಕಾ ವ್ಯಾನ್ ಅಶ್ಚೆ ವಿರುದ್ಧ ಗೆದ್ದರು. ಸಸ್ಚಾ ಮತ್ತು ಅಶ್ಚೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದುಕೊಂಡಿದ್ದರು.

ಅಲಿಯಕ್ಸಾಂಡ್ರ ಮೇಲೆ ನಿಷೇಧದ ಕಾರ್ಮೋಡ: ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ದಾಳಿಯ ವಿರುದ್ಧ ಮಾತನಾಡಿದ ಮತ್ತು ಉಕ್ರೇನ್ ಟೆನಿಸ್‌ಪಟುಗಳಿಗೆ ಬೆಂಬಲ ಸೂಚಿಸಿರುವ ಅಲಿಯಾಕ್ಸಾಂಡ್ರ ಸಸ್ನೊವಿಚ್ ಅವರು ಟೂರ್ನಿಯಿಂದ ನಿಷೇಧಕ್ಕೆ ಒಳಗಾಗುವ ಸಾಧ್ಯತೆ ಇದೆ.

ಹಾಕಿ ತಂಡಕ್ಕೆ ವೈಷ್ಣವಿ ನಾಯಕಿ

ನವದೆಹಲಿ (ಪಿಟಿಐ): ವೈಷ್ಣವಿ ಫಾಲ್ಕೆ ಅವರನ್ನು ಭಾರತದ 23 ವರ್ಷದೊಳಗಿನ ಮಹಿಳೆಯರ ಹಾಕಿ ತಂಡದ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ.

ಹಾಕಿ ಇಂಡಿಯಾ ಬುಧವಾರ 20 ಆಟಗಾರ್ತಿಯರ ತಂಡವನ್ನು ಪ್ರಕಟಿಸಿದೆ. ಜೂನ್ 19ರಿಂದ 26ರವರೆಗೆ ಡಬ್ಲಿನ್‌ನಲ್ಲಿ ನಡೆಯಲಿರುವ ಐದು ರಾಷ್ಟ್ರಗಳ ಟೂರ್ನಿಯಲ್ಲಿ ಈ ತಂಡವು ಸ್ಪರ್ಧಿಸಲಿದೆ.

ತಂಡ: ಗೋಲ್‌ಕೀಪರ್ಸ್: ಖುಷ್ಬೂ, ಕುರಂಪು ರಮ್ಯಾ. ಡಿಫೆಂಡರ್ಸ್: ಪ್ರೀತಿ, ಮಮಿತಾ ಒರಂ, ಮಹಿಮಾ ಟೆಟೆ, ನೀಲಂ, ಹೃತಿಕಾ ಸಿಂಗ್. ಮಿಡ್‌ಫೀಲ್ಡರ್ಸ್: ವೈಷ್ಣವಿ ವಿಠಲ್ ಫಾಲ್ಕೆ (ನಾಯಕಿ), ಮಂಜು ಚೌರಾಸಿಯಾ, ಜ್ಯೋತಿ ಚೆಟ್ರಿ, ಹೀನಾ ಬಾನೊ, ನಿಖಿತಾ ಟೊಪ್ಪೊ, ಅಶ್ವಿನ್ ಕೊಳೆಕರ್, ಋತುಜಾ ದ್ಯಾಡ್ಸೊ ಪಿಸಾಳ. ಫಾರ್ವರ್ಡ್ಸ್: ಮುಮ್ತಾಜ್ ಖಾನ್ (ಉಪನಾಯಕಿ), ಅನು, ಬ್ಯೂಟಿ ಡುಂಗ್‌ಡುಂಗ್, ದೀಪಿಕಾ ಸೊರೆಂಗ್, ಮೋನಿಕಾ, ಮುದುಗುಲಾ

ಕ್ರಿಕೆಟ್: ಬಿಇಎಂಎಲ್‌ಗೆ ಜಯ

ಬೆಂಗಳೂರು: ಬಿಇಎಂಎಲ್ ಸ್ಪೋರ್ಟ್ಸ್ ಕ್ಲಬ್ (2) ಮೈಸೂರು ತಂಡವು ಕೆಎಸ್‌ಸಿಎ ಎರಡನೇ ಡಿವಿಷನ್ ಗುಂಪು 2ರ ಟೂರ್ನಿಯಲ್ಲಿ ಜಯ ಗಳಿಸಿತು.

ಬುಧವಾರ ನಡೆದ ಪಂದ್ಯದಲ್ಲಿ 21 ರನ್‌ಗಳಿಂದ ಕರ್ನಾಟಕ ಸರ್ಕಾರ ಸೆಕ್ರೇಟರಿಯೇಟ್ ಕ್ರಿಕೆಟ್ ಕ್ಲಬ್ ಎದುರು ಜಯಿಸಿತು.

ಸಂಕ್ಷಿಪ್ತ ಸ್ಕೋರು: ಬಿಇಎಂಎಲ್ ಸ್ಪೋರ್ಟ್ಸ್ ಕ್ಲಬ್ (2) ಮೈಸೂರು: 14 ಓವರ್‌ಗಳಲ್ಲಿ 6ಕ್ಕೆ 127 (ವಿಷ್ಣು ಪ್ರಿಯನ್ 29, ಧೀಮಂತ್ 81, ಹರ್ಷ ಮಯ್ಯ 28ಕ್ಕೆ 3, ಪೃಥ್ವಿ 15ಕ್ಕೆ 3). ಕರ್ನಾಟಕ ಸರ್ಕಾರ ಸೆಕ್ರೇಟರಿಯೇಟ್ ಸಿಸಿ: 14 ಓವರ್‌ಗಳಲ್ಲಿ 8ಕ್ಕೆ 106 (ಪೃಥ್ವಿ ವಿ. 34, ಮಯೂರ್ ಬಿ. ಔಟಾಗದೆ 25; ಬಿ. ಧೀಮಂತ್ 19ಕ್ಕೆ 2). ಫಲಿತಾಂಶ:ಬಿಇಎಂಎಲ್ ಸ್ಪೋರ್ಟ್ಸ್ ಕ್ಲಬ್ (2) ಮೈಸೂರು ತಂಡಕ್ಕೆ 21 ರನ್‌ಗಳ ಜಯ. (ಮಳೆಯ ಕಾರಣದಿಂದ ಪಂದ್ಯವನ್ನು ಪ್ರತಿ ತಂಡಕ್ಕೆ 14 ಓವರ್‌ಗಳಿಗೆ ಸೀಮಿತಗೊಳಿಸಲಾಗಿತ್ತು.)

28ಕ್ಕೆ ಆಯ್ಕೆ ಟ್ರಯಲ್ಸ್

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ 19 ವರ್ಷದೊಳಗಿನವರ ಅಂತರ ಕ್ಲಬ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಬೆಂಗಳೂರು ಯುನೈಟೆಡ್ ಕ್ರಿಕೆಟ್ ಕ್ಲಬ್ (ಬಿಯುಸಿಸಿ) ತಂಡದ ಆಯ್ಕೆ ಟ್ರಯಲ್ಸ್ ಮೇ 28ರಂದು ಆಯೋಜಿಸಲಾಗಿದೆ.

ವಿವರಗಳಿಗಾಗಿ ಸಂಪರ್ಕಿಸಿ; ಮೊಬೈಲ್; 98440 35365 ಅಥವಾ 98459 52514.

ಫುಟ್‌ಬಾಲ್: ಬೆನ್ಜೆಮಾ ಮೇಲೆ ಕಣ್ಣು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಯುಯೆಫಾ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಫ್ರಾನ್ಸ್‌ನ ಕರೀಂ ಬೆನ್ಜೆಮಾ ಮಿಂಚುವ ಸಾಧ್ಯತೆ ಇದೆ ಎಂದು ಭಾರತ ತಂಡದ ಮಾಜಿ ಸ್ಟ್ರೈಕರ್ ಬೈಚುಂಗ್ ಭುಟಿಯಾ ಅಭಿಪ್ರಾಯಪಟ್ಟರು.

ಪ್ಯಾರಿಸ್‌ನಲ್ಲಿರುವ ಫ್ರಾನ್ಸ್ ರಾಷ್ಟ್ರೀಯ ಕ್ರೀಡಾಂಗಣ ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ಇದೇ 29ರಂದು ಫೈನಲ್ ಪಂದ್ಯ ನಡೆಯಲಿದ್ದು ರಿಯಲ್ ಮ್ಯಾಡ್ರಿಡ್ ಮತ್ತು ಲಿವರ್‌ಪೂಲ್ ತಂಡಗಳು ಮುಖಾಮುಖಿಯಾಗಲಿವೆ.

ಪಂದ್ಯದ ನೇರ ಪ್ರಸಾರ ಮಾಡುವ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಬುಧವಾರ ಆಯೋಜಿಸಿದ್ದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. 'ರಿಯಲ್ ಮ್ಯಾಡ್ರಿಡ್‌ನ ಸ್ಟ್ರೈಕರ್ ಕರೀಂ ಬೆನ್ಜೆಮಾ ಅವರು ಟೂರ್ನಿಯುದ್ದಕ್ಕೂ ಅಮೋಘ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಹೀಗಾಗಿ ಫೈನಲ್‌ನಲ್ಲಿ ಅವರ ಮೇಲೆ ಎಲ್ಲರೂ ಕಣ್ಣಿಡುವರು' ಎಂದು ಭುಟಿಯಾ ಹೇಳಿದರು.









